ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ಸಾಹಿತಿ ಬರಗೂರು ಆತಂಕ

‘ದೇಶದಲ್ಲಿ ಸಾಮಾಜಿಕ ಕಂದಕ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಕಂದಕ ಹೆಚ್ಚಳವಾಗಿರುವುದು ಆತಂಕಕಾರಿ ವಿಚಾರ’ ಎಂದು ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಹೇಳಿದರು.

ನಗರದಲ್ಲಿ ಶನಿವಾರ ಜನ ಪ್ರಕಾಶನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಡಾ.ಟಿ.ಆರ್.ಚಂದ್ರಶೇಖರ ಅವರ ‘ಅಭಿವೃದ್ಧಿಯ ಸಾಮಾಜಿಕ ಆಯಾಮಗಳು’ ಹಾಗೂ ‘ಬಜೆಟ್ ಎಂದರೇನು?’ ಕೃತಿಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

‘ಶೇ 74ರಷ್ಟು ರಾಷ್ಟ್ರದ ಸಂಪತ್ತು, ಶೇ 1ರಷ್ಟು ಜನರಲ್ಲಿ ಅಡಕವಾಗಿದೆ. ಉಳಿದ ಶೇ 26ರಷ್ಟು ಸಂಪತ್ತು, ಶೇ 99ರಷ್ಟು ಜನರಲ್ಲಿದೆ. ಕಂದಕದ ಕಾಲದಲ್ಲಿ ನಾವು ಜೀವಿಸುತ್ತಿದ್ದೇವೆ. ಕಂದಕವನ್ನು ಮುಚ್ಚಿ ಸಮಸಮಾಜ ನಿರ್ಮಾಣ ಮಾಡಬೇಕಿದೆ’ ಎಂದು ಪ್ರತಿಪಾದಿಸಿದರು.

‘ನಿರುದ್ಯೋಗದ ಸಮಸ್ಯೆಯೂ ರಾಷ್ಟ್ರದಲ್ಲಿ ಹೆಚ್ಚಳವಾಗಿದೆ ಎಂದು ಅಧ್ಯಯನಗಳೇ ಹೇಳುತ್ತಿವೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಅಭಿವೃದ್ಧಿಯ ಪರಿಕಲ್ಪನೆಯೇ ಬದಲಾಗಿರುವ ಕಾಲಘಟ್ಟದಲ್ಲಿ ಚಂದ್ರಶೇಖರ ಅವರು ನಿಖರವಾದ ಆಧಾರಗಳೊಂದಿಗೆ ಬಜೆಟ್ ಎಂದರೇನು? ಕೃತಿ ಬರೆದಿದ್ದಾರೆ. ಸಾಮಾಜಿಕತೆ ಬಿಟ್ಟು ಆರ್ಥಿಕತೆ ಇಲ್ಲ. ನಿಜವಾದ ಆರ್ಥಿಕತೆ ಎಂದರೆ, ಕೆಳಸ್ತರದ ಜನರನ್ನು ಮೇಲಕ್ಕೆ ಎತ್ತುವುದೇ ಆಗಿದೆ’ ಎಂದು ವಿಶ್ಲೇಷಿಸಿದರು.

‘ಬಜೆಟ್ ವಿಚಾರದಲ್ಲಿ ಆಡಳಿತ–ವಿರೋಧ ಪಕ್ಷಗಳ ಕಂಠಪಾತ ಒಂದೇ ಆಗಿರುತ್ತದೆ. ನಿಜವಾದ ಬಜೆಟ್ ವಿಶ್ಲೇಷಣೆ ನಡೆಯುತ್ತಿಲ್ಲ. ರಾಜಕಾರಣಿಗಳು ಪಕ್ಷದ ನೆಲೆಯಿಂದ ದೂರವುಳಿದು ಸಮಾಜಕ್ಕೆ ಪೂರಕವಾಗಿ ವಿಶ್ಲೇಷಣೆ ನಡೆಸಬೇಕು. ಅಭಿವೃದ್ಧಿಯ ಆದ್ಯತೆ ಸಮಾನತೆಯಿಂದ ಕೂಡಿರಬೇಕು. ಬಜೆಟ್ ಎಂದರೆ ಅಂಕಿಸಂಖ್ಯೆಯ ಮೇಲಾಟ ಮಾತ್ರ ಆಗಿರಬಾರದು’ ಎಂದು ಪ್ರತಿಪಾದಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಎಸ್.ಆರ್.ಕೇಶವ ಮಾತನಾಡಿ, ‘ದೇಶದಲ್ಲಿ ನೈಜ ಅಭಿವೃದ್ಧಿ ಮುನ್ನೆಲೆಗೆ ಬರಬೇಕಿದೆ. ಜನಪಂಥೀಯ ಅಭಿವೃದ್ಧಿ ವಾದ ಬಹಳ ಪ್ರಮುಖ. ಆದರೆ, ರಾಜಕೀಯ ಕಾರಣಕ್ಕೆ ಎಡ, ಬಲಪಂಥೀಯ ವಾದದಲ್ಲಿ ಅಭಿವೃದ್ಧಿ ವಿಚಾರ ಗೌಣವಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಎಲ್ಲರ ಯೋಚನೆಗಳು ಉನ್ನತೀಕರಣವಾದರೆ ಮಾತ್ರ ಅಭಿವೃದ್ಧಿಯೂ ಸಾಧ್ಯವಾಗಲಿದೆ. ಬೆಳವಣಿಗೆ ಹಾಗೂ ಅಭಿವೃದ್ಧಿಯನ್ನು ಒಂದೇ ಎಂದು ಭಾವಿಸಿದ್ದೇವೆ. ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ ಮುಖ್ಯ’ ಎಂದು ಕೇಶವ ವಿವರಿಸಿದರು.

ಸಾಮಾಜಿಕ ಹೋರಾಟಗಾರ ಎಸ್.ಆರ್. ಹಿರೇಮಠ್ ಅಧ್ಯಕ್ಷತೆ ವಹಿಸಿದ್ದರು. ಡಾ.ಟಿ.ಆರ್.ಚಂದ್ರಶೇಖರ ಅವರನ್ನು ಸನ್ಮಾನಿಸಲಾಯಿತು. ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್ ವಾದ) ಸಂಚಾಲಕ ಮಾವಳ್ಳಿ ಶಂಕರ್, ಗೋಪಾಲಕೃಷ್ಣ ಅರಳಹಳ್ಳಿ, ರಾಜಶೇಖರ್ ಮೂರ್ತಿ ಮೊದಲಾದವರು ಹಾಜರಿದ್ದರು.



ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ಶನಿವಾರ ಜನ ಪ್ರಕಾಶನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ಅಭಿವೃದ್ಧಿಯ ಸಾಮಾಜಿಕ ಆಯಾಮಗಳು’ ಮತ್ತು ‘ಬಜೆಟ್ ಎಂದರೇನು?’ ಎರಡು ಕೃತಿಗಳನ್ನು ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಅವರು (ಎಡದಿಂದ ಮೂರನೆಯವರು) ಲೋಕಾರ್ಪಣೆ ಮಾಡಿದರು. ರಾಜಶೇಖರಮೂರ್ತಿ, ಲೇಖಕ ಡಾ.ಟಿ.ಆರ್‌.ಚಂದ್ರಶೇಖರ, ಸಾಮಾಜಿಕ ಹೋರಾಟಗಾರ ಎಸ್‌.ಆರ್‌.ಹಿರೇಮಠ, ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಎಸ್‌.ಆರ್‌.ಕೇಶವ, ಗೋಪಾಲಕೃಷ್ಣ ಅರಳಹಳ್ಳಿ ಮತ್ತು ಮೋಹನರಾಜ್ ಇದ್ದರು – ಪ್ರಜಾವಾಣಿ ಚಿತ್ರ

ಪುಸ್ತಕಗಳ ಪರಿಚಯ

ಪುಸ್ತಕ: ಅಭಿವೃದ್ಧಿಯ ಸಾಮಾಜಿಕ ಆಯಾಮಗಳು
ಲೇಖಕ: ಡಾ.ಟಿ.ಆರ್. ಚಂದ್ರಶೇಖರ್
ಪ್ರಕಾಶನ: ಜನ ಪ್ರಕಾಶನ
ಪುಟಗಳು: *344*
ಬೆಲೆ: ₹ *300*

ಪುಸ್ತಕ: ಬಜೆಟ್ ಎಂದರೇನು?
ಲೇಖಕ: ಡಾ.ಟಿ.ಆರ್. ಚಂದ್ರಶೇಖರ್
ಪ್ರಕಾಶನ: ಜನ ಪ್ರಕಾಶನ
ಪುಟಗಳು: *92*
ಬೆಲೆ: ₹ *100*

ಬೆಳಿಗ್ಗೆ 6ರಿಂದಲೇ ಮೆಟ್ರೊ ರೈಲು ಸೇವೆ



ಬೆಂಗಳೂರು: ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ಭಾನುವಾರ (ಜೂನ್ 5) ನಡೆಯುತ್ತಿರುವುದರಿಂದ ಬೆಳಿಗ್ಗೆ 6 ಗಂಟೆಯಿಂದಲೇ ಮೆಟ್ರೊ ರೈಲು ಸೇವೆ ಆರಂಭಿಸಲು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ನಿರ್ಧರಿಸಿದೆ.

ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಸುಗಮವಾಗಿ ತಲುಪಲು ಅನುಕೂಲವಾಗುವಂತೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

10ನೇ ತರಗತಿ ಪಠ್ಯದಲ್ಲಿ ಆದಿವಾಸಿಗಳ ಅವಹೇಳನ

ರೋಹಿತ್ ಚಕ್ರತೀರ್ಥ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ರಾಮನಗರ: ಪರಿಷ್ಕೃತ ಪಠ್ಯದಲ್ಲಿ ಆದಿವಾಸಿ ಕಾಡು ಜನಾಂಗದ ಬಗ್ಗೆ ಅವಹೇಳನ ಮಾಡಲಾಗಿದೆ ಎಂದು ಆರೋಪಿಸಿ ರೋಹಿತ್ ಚಕ್ರತೀರ್ಥ ವಿರುದ್ಧ ರಾಮನಗರ ಪೊಲೀಸ್ ವರಿಷ್ಠಾಧಿಕಾರಿಗೆ ಶನಿವಾರ ದೂರು ಸಲ್ಲಿಕೆ ಆಗಿದೆ.

ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಗಿದೆ.

‘10ನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿ ನಮ್ಮ ಆದಿವಾಸಿ ಕಾಡು ಜನಾಂಗದ ಬಗ್ಗೆ ಅವಹೇಳನಕಾರಿಯಾಗಿ ಪಠ್ಯ ಮುದ್ರಿಸಿರುವ ರೋಹಿತ್ ಚಕ್ರತೀರ್ಥ ಮತ್ತು ಇತರ ಸದಸ್ಯರನ್ನು ಬಂಧಿಸಿ ಕಾನೂನು ಕ್ರಮ ತೆಗೆದುಕೊಳ್ಳಬೇಕು’ ಎಂದು ಇರುಳಿಗ (ಅರಣ್ಯವಾಸಿ) ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ ದೂರು ಸಲ್ಲಿಸಿದ್ದಾರೆ.

ಹೊಸ ಪಠ್ಯದಲ್ಲಿ ಏನಿದೆ?: ಹತ್ತನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿ ಸ್ವಾಮಿ ವಿವೇಕಾನಂದರ ಚಿಂತನೆಗಳು ಎಂಬ ಶೀರ್ಷಿಕೆಯಲ್ಲಿ ‘ಸಂಸ್ಕೃತಿಯು ರಕ್ತದಲ್ಲಿ ಹರಿಯಬೇಕು. ಆಧುನಿಕ ಕಾಲದಲ್ಲಿ ಬೇಕಾದಷ್ಟು ಜ್ಞಾನಸಂಪತ್ತನ್ನು ಪಡೆದ ದೇಶಗಳನ್ನು ನೋಡಿರುವೆವು. ಆದರೆ ಅದರಿಂದ ಏನು ಪ್ರಯೋಜನ? ಅವರು ಕಾಡುಜನರಂತೆ ಇರುವರು. ಅವರಲ್ಲಿ ಸಂಸ್ಕೃತಿ ಇಲ್ಲ’ ಎಂಬುದಾಗಿ ಅವಹೇಳನಕಾರಿಯಾಗಿ ಮುದ್ರಿಸಿ ಆದಿವಾಸಿಗಳನ್ನು (ಕಾಡುವಾಸಿ) ಉದ್ದೇಶಪೂರ್ವಕವಾಗಿ ಅನಾಗರಿಕರೆಂದು ನಿಂದಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

‘ಆದಿವಾಸಿಗಳ ಘನತೆ, ಸಂಸ್ಕೃತಿಯನ್ನು ಅಲ್ಲಗೆಳೆದು ನಮ್ಮನ್ನು ಮನುಷ್ಯರಂತೆ ಕಾಣದ ವಿಕೃತ ಮನೋಧೋರಣೆಯ ರೋಹಿತ್ ಚಕ್ರತೀರ್ಥ ಮತ್ತು ಇತರ ಸದಸ್ಯರನ್ನು ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ 1989ರ ಅಡಿಯಲ್ಲಿ ಬಂಧಿಸಬೇಕು’ ಎಂದು ಮನವಿ ಮಾಡಲಾಗಿದೆ.

ಪ್ರಧಾನ ಕಾರ್ಯದರ್ಶಿಗೆ ಪತ್ರ: ದೂರು ಸ್ವೀಕರಿಸಿರುವ ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಸದರಿ ವಿಚಾರದ ಬಗ್ಗೆ ಪರಿಶೀಲಿಸಿ ಸಂಬಂಧಪಟ್ಟ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಹಾಗೂ ಇತರ ಸದಸ್ಯರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

ಕ್ರಿಮಿನಲ್ ಪ್ರಕರಣ ರದ್ದುಗೊಳಿಸಲು ಹೈಕೋರ್ಟ್ ನಕಾರ

76ರ ಉದ್ಯಮಿಗೆ ದ್ವಿಪತ್ನಿತ್ವದ ಸಂಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂವರು ಪತ್ನಿಯರನ್ನು ಹೊಂದಿರುವ 76 ವರ್ಷದ ಉದ್ಯಮಿಯೊಬ್ಬರ ವಿರುದ್ಧ ಅವರ ಮೊದಲ ಪತ್ನಿ ದಾಖಲಿಸಿರುವ ದ್ವಿಪತ್ನಿತ್ವ ಪ್ರಶ್ನಿಸಿದ ಖಾಸಗಿ ದೂರನ್ನು ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಆರ್.ಪಿ.ಸಿ ಲೇಔಟ್‌ನ ಹಂಪಿನಗರದ ನಿವಾಸಿ ಸಿ.ಆನಂದ್ ಅಲಿಯಾಸ್ ಅಂಕುಗೌಡ ಮತ್ತು 49 ವರ್ಷದ ಅವರ ಮೂರನೇ ಪತ್ನಿ ವರಲಕ್ಷ್ಮಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

‘ನನ್ನ ಮೊದಲ ಪತ್ನಿ ಚಂದ್ರಮ್ಮ (69 ವರ್ಷ) 2018ರಲ್ಲಿ ಚನ್ನಪಟ್ಟಣದ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಸಲ್ಲಿಸಿರುವ ಖಾಸಗಿ ದೂರು ತಡವಾಗಿ ದಾಖಲಾಗಿರುವಂಥಾದ್ದು. ಅಷ್ಟಕ್ಕೂ ನನ್ನ ಎರಡನೇ ಮದುವೆಗೆ ಆಕೆ ಆವತ್ತೇ ಒಪ್ಪಿಗೆ ನೀಡಿದ್ದಳು. ಆದ್ದರಿಂದ, ವಿಚಾರಣಾ ನ್ಯಾಯಾಲಯದ ಕ್ರಿಮಿನಲ್ ಪ್ರಕರಣವನ್ನು ರದ್ದುಗೊಳಿಸಬೇಕು ಎಂಬ ಅರ್ಜಿದಾರರ ವಾದವನ್ನು ಒಪ್ಪಲು ಸಾಧ್ಯವಿಲ್ಲ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

‘ಇದೊಂದು ವಿಶಿಷ್ಟ ಪ್ರಕರಣ. ಅಂಕುಗೌಡ ಅಪರಾಧಗಳ ಬಲೆಯಲ್ಲಿ ಸಿಲುಕಿದ್ದಾರೆ. ಹೀಗಾಗಿ, ಐಪಿಸಿ 494ರ ಅನುಸಾರ ದಾಖಲಿಸಲಾಗಿರುವ ದ್ವಿಪತ್ನಿತ್ವ ಪ್ರಶ್ನಿಸಿದ ದೂರನ್ನು ವಜಾಗೊಳಿಸಲು ಆಗದು, ಅವರು ವಿಚಾರಣೆ ಎದುರಿಸಲಿ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ, ಇದೇ ವೇಳೆ ವಿಚಾರಣಾ ನ್ಯಾಯಾಲಯದಲ್ಲಿ ಮೂರನೇ ಪತ್ನಿಯ ಅಪ್ತರು ಮತ್ತು ಸಂಬಂಧಿಕರ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ರದ್ದುಗೊಳಿಸುವ ಮೂಲಕ ಅರ್ಜಿಯನ್ನು ಭಾಗಶಃ ಪುರಸ್ಕರಿಸಿದೆ.

ಪ್ರಕರಣವೇನು?: ಅಂಕುಗೌಡರು 1968ರಲ್ಲಿ ಚಂದ್ರಮ್ಮ ಅವರನ್ನು ಮದುವೆಯಾಗಿದ್ದರು. 1972ರಲ್ಲಿ ಚಂದ್ರಮ್ಮನ ತಂಗಿ ಸಾವಿತ್ರಮ್ಮನನ್ನು ಕೈ ಹಿಡಿದರು. 1993ರಲ್ಲಿ ವರಲಕ್ಷ್ಮಿ ಎಂಬುವರನ್ನೂ ವರಿಸಿದರು. ‘ಸಾವಿತ್ರಮ್ಮನನ್ನು ಮದುವೆಯಾಗಲು ಚಂದ್ರಮ್ಮ ಒಪ್ಪಿಗೆ ನೀಡಿದ್ದರು, ವರಲಕ್ಷ್ಮಿಯನ್ನು ವರಿಸಲು ಸಾವಿತ್ರಮ್ಮ ಮತ್ತು ಚಂದ್ರಮ್ಮ ಇಬ್ಬರೂ ಸಮ್ಮತಿಸಿದ್ದರು’ ಎಂಬುದು ಅಂಕುಗೌಡರ ಪ್ರತಿಪಾದನೆ.

‘ಆಸ್ತಿಯ ಪಾಲುದಾರಿಕೆಯಲ್ಲಿ ಉಂಟಾದ ವ್ಯಾಜ್ಯದಿಂದಾಗಿ ದ್ವಿಪತ್ನಿತ್ವವನ್ನು 25 ವರ್ಷಗಳ ನಂತರ ಪ್ರಶ್ನಿಸಲಾಗಿದ್ದು, 2018 ರಲ್ಲಿ ಖಾಸಗಿ ದೂರು ದಾಖಲಿಸಲಾಗಿದೆ. ಈ ಪ್ರಕರಣದಲ್ಲಿ ವರಲಕ್ಷ್ಮಿ ಮತ್ತು ಆಕೆಯ ನಾಲ್ವರು ಸಂಬಂಧಿಕರು ಹಾಗೂ ಆಪ್ತರನ್ನೂ ಆರೋಪಿಗಳನ್ನಾಗಿ ಹೆಸರಿಸಲಾಗಿದೆ. ಅಂಕುಗೌಡರು ತಮ್ಮ ಮೂರನೇ ಪತ್ನಿಗೆ ದಾನಪತ್ರದ ಮೂಲಕ ಆಸ್ತಿ ವರ್ಗಾಯಿಸಿದ್ದು, ಇದು ಮೊದಲ ಪತ್ನಿಯ ಮಕ್ಕಳ ತಗಾದೆಗೆ ಕಾರಣವಾಗಿದೆ. ಇವರೆಲ್ಲಾ ಸತ್ಯಾಂಶಗಳನ್ನು ಮರೆ ಮಾಚಿದ್ದಾರೆ’ ಎಂದು ಅಂಕುಗೌಡರ ಪರ ವಕೀಲರು ವಾದ ಮಂಡಿಸಿದ್ದರು.

‘ಕಿದ್ವಾಯಿ: ಚಿಟ್ಟೆ ಉದ್ಯಾನವನ ನಿರ್ಮಾಣ’

ಬೆಂಗಳೂರು: ‘ಕ್ಯಾನ್ಸರ್ ರೋಗಿಗಳಿಗೆ ಆಸ್ಪತ್ರೆಯ ಆವರಣದಲ್ಲಿ ಆಹ್ಲಾದಕರ ವಾತಾವರಣ ನಿರ್ಮಿಸಲು ಶೀಘ್ರದಲ್ಲಿಯೇ ಚಿಟ್ಟೆ ಹಾಗೂ ಪಕ್ಷಿಗಳ ಉದ್ಯಾನವನ ನಿರ್ಮಾಣ ಮಾಡಲಾಗುವುದು’ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದ್ದಾರೆ.

ವಿಶ್ವಪರಿಸರ ದಿನದ ಪ್ರಯುಕ್ತ ಸಂಸ್ಥೆಯು ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿದೆ. ‘ಕ್ಯಾನ್ಸರ್ ರೋಗಿಗಳು ಮಾನಸಿಕವಾಗಿ ಕುಗ್ಗಿ, ಆತ್ಮಸ್ಥೈರ್ಯ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಹೀಗಾಗಿ, ಆಸ್ಪತ್ರೆಯಲ್ಲಿ ಉತ್ತಮ ವಾತಾವರಣ ನಿರ್ಮಿಸಲು ಉದ್ಯಾನ ನಿರ್ಮಿಸಲಾಗಿದೆ. ಲಕ್ಷ್ಮಣಫಲ, ರಾಮಫಲ, ಸೀತಾಫಲ, ಬಕುಳ, ಪುನಗ, ರುದ್ರಾಕ್ಷಿ ಸೇರಿದಂತೆ ವಿವಿಧ ತಳಿಯ ಗಿಡಗಳು ಹಾಗೂ ಔಷಧ ಸಸ್ಯಗಳನ್ನು ಬೆಳೆಸಲಾಗಿದೆ’ ಎಂದು ಹೇಳಿದ್ದಾರೆ.

‘ಎಲ್ಲೆಡೆ ಹೂವು ಹಾಗೂ ಹಣ್ಣಿನ ಗಿಡಗಳನ್ನು ನೆಡಲಾಗುತ್ತಿದೆ. 42 ಸಾವಿರ ಸಸ್ಯ ಸಂಕುಲ ಸಂಸ್ಥೆಯಲ್ಲಿದೆ. ಇದರಿಂದ ವಾತಾವರಣದಲ್ಲಿನ ತಾಪಮಾನ ಕೂಡ ಇಳಿಕೆಯಾಗಿ, ಶುದ್ಧಗಾಳಿ ದೊರೆಯುತ್ತಿದೆ. ಸಂಸ್ಥೆಯ ಆವರಣದಲ್ಲಿ ತ್ಯಾಜ್ಯ ವಿಲೇವಾರಿ ಘಟಕ ನಿರ್ಮಿಸಲಾಗಿದೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೆಡಿಎಸ್ ಜತೆ ಖರ್ಗೆ ಮಾತನಾಡಿಲ್ಲ - ಡಿಕೆಶಿ

ಪ್ರಜಾವಾಣಿ ವಾರ್ತೆ

ತುಮಕೂರು: ರಾಜ್ಯಸಭೆ ಚುನಾವಣೆಯಲ್ಲಿ ಜೆಡಿಎಸ್‌ಗೆ ಸಹಕಾರ, ಬೆಂಬಲ ನೀಡುವ ಸಂಬಂಧ ಪಕ್ಷದ ಹಿರಿಯರಾದ ಮಲ್ಲಿಕಾರ್ಜುನ ಖರ್ಗೆ ಅವರು ಆ ಪಕ್ಷದ ಮುಖಂಡರ ಜತೆ ಮಾತುಕತೆ ನಡೆಸಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇಲ್ಲಿ ಶನಿವಾರ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪಕ್ಷದ ಹಿತದೃಷ್ಟಿಯಿಂದ, ಒಗ್ಗಟ್ಟಿನಿಂದ ಎರಡನೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲಾಗಿದೆ. ಖರ್ಗೆ ಅವರು ಯಾರೊಂದಿಗೂ ಮಧ್ಯಸ್ಥಿಕೆ ವಹಿಸಲು ದೆಹಲಿಗೆ ಹೋಗಿರಲಿಲ್ಲ. ಪಕ್ಷದ ಕಾರ್ಯಕ್ರಮದಲ್ಲಿ ಭಾಗವಹಿಸಲು ತೆರಳಿದ್ದರು. ಅದು ಬಿಟ್ಟರೆ ಜೆಡಿಎಸ್ ಜತೆ ನಾವು ಮಾತುಕತೆ ನಡೆಸಿಲ್ಲ. ಅವರೂ ನಮ್ಮನ್ನು ಸಂಪರ್ಕಿಸಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಜೆಡಿಎಸ್‌ನವರಂತೆ ನಮಗೂ ಇತರ ಪಕ್ಷಗಳಲ್ಲಿ ಸ್ನೇಹಿತರು ಇರುತ್ತಾರೆ. ಆತ್ಮಸಾಕ್ಷಿಯಿಂದ ಮತ ಕೇಳುತ್ತೇವೆ. ಒಗ್ಗಟ್ಟಿನಿಂದ ಚುನಾವಣೆ ಎದುರಿಸುತ್ತೇವೆ’ ಎಂದರು.

‘ಯಾವ ಪಕ್ಷದೊಂದಿಗೂ ಚರ್ಚಿಸಿಲ್ಲ’

ದೇವನಹಳ್ಳಿ: ‘ರಾಜ್ಯಸಭೆ ಚುನಾವಣೆ ಸಂಬಂಧ ನಾವು ಯಾವುದೇ ಪಕ್ಷದವರನ್ನು ಸಂಪರ್ಕಿಸಿಲ್ಲ. ಕಾಂಗ್ರೆಸ್ ಮುಖಂಡರು ಫೋನ್ ಮೂಲಕ ನಮ್ಮೊಂದಿಗೆ ಚರ್ಚೆ ನಡೆಸಿದ್ದಾರೆ’ ಎಂದು ಮಾಜಿ ಮುಖ್ಯಮಂತ್ರಿ ಎಚ್‌.ಡಿ. ಕುಮಾರಸ್ವಾಮಿ ತಿಳಿಸಿದರು.

‘ಮೈತ್ರಿ ವಿಚಾರವಾಗಿ ಕಾಂಗ್ರೆಸ್ ಜತೆ ಜೆಡಿಎಸ್ ಯಾರನ್ನು ಭೇಟಿ ಮಾಡಿಲ್ಲ. ಆ ಕುರಿತು ಇದೀಗ ಚರ್ಚೆ ನಡೆಸುವ ಅಗತ್ಯವಿಲ್ಲ. ಪಕ್ಷದ ಮುಖಂಡರಿಗೂ ಚುನಾವಣೆ ಸಂಬಂಧ ವಿರೋಧ ಪಕ್ಷಗಳ ನಾಯಕರನ್ನು ಭೇಟಿ ಮಾಡುವಂತೆ ತಿಳಿಸಿಲ್ಲ’ ಎಂದು ಸ್ಪಷ್ಟಪಡಿಸಿದರು.

ಸಿಂಗಪುರದಿಂದ ಶುಕ್ರವಾರ ತಡರಾತ್ರಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಜೂನ್ 10ರಂದು ರಾಜ್ಯಸಭೆ ಚುನಾವಣೆ ಫಲಿತಾಂಶ ಪ್ರಕಟವಾಗಲಿದೆ. ನಂತರ ಎಲ್ಲ ವಿಚಾರಗಳ ಕುರಿತು ಮಾತನಾಡುತ್ತೇನೆ’ ಎಂದು ತಿಳಿಸಿದರು.

‘ಪ್ರಿಯಾಂಕ್ ಖರ್ಗೆ ಕಾನ್ವೆಂಟ್ ರಾಜಕಾರಣಿ’

ಬೆಂಗಳೂರು: ‘ಬೆಂಗಳೂರಿನಲ್ಲಿ ಹುಟ್ಟಿ, ಬೆಳೆದಿರುವ ಪ್ರಿಯಾಂಕ್ ಖರ್ಗೆ ‘ಕಾನ್ವೆಂಟ್ ರಾಜಕಾರಣಿ’. ‘ದಲಿತ’ ಎನ್ನುವ ಪದ ಅವರ ಕುಟುಂಬಕ್ಕೆ ರಾಜಕೀಯ ಅಧಿಕಾರ ಕಾಪಾಡಿಕೊಳ್ಳಲು ಬೇಕಾದ ಅಸ್ತ್ರವಷ್ಟೆ. ನಿಜವಾದ ದಲಿತರ ನೋವು– ನಲಿವು ಅವರಿಗೆ ಗೊತ್ತಿಲ್ಲ’ ಎಂದು ಇಂಧನ ಸಚಿವ ವಿ. ಸುನೀಲ್ ಕುಮಾರ್ ವಾಗ್ದಾಳಿ ನಡೆಸಿದ್ದಾರೆ.

ಶನಿವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಮಲ್ಲಿಕಾರ್ಜುನ ಖರ್ಗೆ ಮತ್ತು ಪ್ರಿಯಾಂಕ್ ಖರ್ಗೆ ಮೀಸಲು ಕ್ಷೇತ್ರಗಳನ್ನು ತಮ್ಮ ಜಹಗೀರಿನಂತೆ ಬಳಸಿಕೊಂಡಿದ್ದಾರೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಪ್ರತಿಪಾದಿಸಿದ ಸಮಾನತೆಯ ಸಿದ್ಧಾಂತದಲ್ಲಿ ನಿಜವಾಗಿಯೂ ನಂಬಿಕೆ ಇದ್ದರೆ ಮುಂದಿನ ಚುನಾವಣೆಗಳಲ್ಲಿ ಇಬ್ಬರೂ ಕ್ಷೇತ್ರ ಬಿಟ್ಟುಕೊಡಲಿ’ ಎಂದು ಸವಾಲು ಹಾಕಿದ್ದಾರೆ.

‘ಆರ್‌ಎಸ್‌ಎಸ್ ಕುರಿತು ಪ್ರಶ್ನೆ ಮಾಡುವ ಮುನ್ನ ಇತಿಹಾಸ ಓದಿ ಸತ್ಯ ತಿಳಿದುಕೊಳ್ಳಬೇಕು’ ಎಂದು ಹೇಳಿರುವ ಅವರು, ‘ರಾಜ್ಯದಾದ್ಯಂತ ಚಡ್ಡಿ ಸುಡುವ ಅಭಿಯಾನ ನಡೆಸುವಂತೆ ಕಾಂಗ್ರೆಸ್ ನಾಯಕರು ಕರೆ ನೀಡಿದ್ದಾರೆ. ದೇಶದೆಲ್ಲೆಡೆ ಚುನಾವಣೆಯಲ್ಲಿ ಸೋತು ಸುಣ್ಣವಾಗಿರುವ ಕಾಂಗ್ರೆಸ್ ಪಕ್ಷಕ್ಕೆ ಈಗ ಮಾಡಲು ಯಾವುದೇ ಕೆಲಸವಿಲ್ಲ. ಚಡ್ಡಿ ಸುಟ್ಟು ಬೆತ್ತಲಾಗಲು ಹೊರಟಿದ್ದಾರೆ’ ಎಂದು ಟೀಕಿಸಿದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಉತ್ತರ ಧ್ರುವದಿಂದ ರೆಡ್ ನಾಟ್ ಹಕ್ಕಿ ಕಳುಹಿಸಿದ ಸಂದೇಶವೇನು? ಪಶ್ಚಿಮ ಘಟ್ಟದ ಗುಡ್ಡೇಕೋಟೆ ಕಾಡಿನಲ್ಲಿ ಗಿಡಮರಗಳು ಇಸಿಜಿ ಉಪಕರಣ, ಥರ್ಮಾಮೀಟರ್ ಕಟ್ಟಿಕೊಂಡು ಏನು ಮಾಡುತ್ತವೆ? ವಿಶ್ವ ಪರಿಸರ ದಿನದ ಹೊತ್ತಿನಲ್ಲಿ 'ಪ್ರಜಾವಾಣಿ' ಹೊತ್ತುತಂದ ಅನನ್ಯ ಬರಹಗಳು... 8

ಅತ್ಯಾಚಾರ: ಬಾಲಾರೋಪಿಗಳ ವಶ 7

ಬೂಸ್ಟರ್ ಡೋಸ್: ಕೊರ್ಬೆವ್ಯಾಕ್ಸ್‌ಗೆ ಅನುಮತಿ 7

ಗ್ರಾಮ ವಾಸ್ತವ್ಯ: ಅನುಷ್ಠಾನಕ್ಕೆ ಬಾರದ ಕಂದಾಯ ಸಚಿವರ ಭರವಸೆ

ಬರೀ ಪ್ರಚಾರ: ಸಿಗದ ಪರಿಹಾರ

• ಎಂ.ಮಹೇಶ

ಮೈಸೂರು: ಕಂದಾಯ ಇಲಾಖೆಯ ನಿಷ್ಕ್ರಿಯತೆ, ವಿಳಂಬ ಧೋರಣೆ, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಮಹತ್ವಾಕಾಂಕ್ಷೆಯಿಂದ ಕಂದಾಯ ಸಚಿವ ಆರ್. ಅಶೋಕ ಅವರು ನಡೆಸುತ್ತಿರುವ 'ಗ್ರಾಮ ವಾಸ್ತವ್ಯ ಕಾರ್ಯಕ್ರಮ'ವು ಅಬ್ಬರದ ಪ್ರಚಾರಕ್ಕಷ್ಟೆ ಸೀಮಿತವಾಗಿದೆ. ಜನರು, ತೊಂದರೆ ಅನುಭವಿಸುವುದು ತಪ್ಪಿಲ್ಲ.

'ಜನ ಕಚೇರಿಗೆ ಅಲೆಯುತ್ತಾ, ಅಧಿಕಾರಿಗಳ ಎದುರು ಕೈಕಟ್ಟಿ ನಿಲ್ಲುವ ಬದಲು ಅಧಿಕಾರಿಗಳೇ ಜನರೆದುರು ಕೈಕಟ್ಟಿ ನಿಲ್ಲಬೇಕು' ಎನ್ನುವ ಸಚಿವರ ಆಶಯವು ವಾಸ್ತವ್ಯದ ದಿನಕ್ಕಷ್ಟೇ ಸೀಮಿತವಾಗುತ್ತಿದೆ!

ಸಚಿವರು ಈವರೆಗೆ 7 ಗ್ರಾಮಗಳಲ್ಲಿ ವಾಸ್ತವ್ಯ ಹೂಡಿದ್ದಾರೆ. ಹೋದ ಕಡೆಯಲ್ಲೆಲ್ಲಾ ಜನರಲ್ಲಿ ಹೊಸ ಕನಸುಗಳನ್ನು ಬಿತ್ತುತ್ತಿದ್ದಾರೆ. ಆದರೆ, ಅವು ನನಸಾಗುತ್ತಿವೆಯೇ ಎಂಬ ಪ್ರಶ್ನೆಗೆ ನಿರಾಶಾದಾಯಕ ಉತ್ತರ ಸಿಗುತ್ತಿದೆ. ಏಕೆಂದರೆ, 'ಆ' ಗ್ರಾಮಗಳಲ್ಲಿ ದೊಡ್ಡ ಮಟ್ಟದ ಬದಲಾವಣೆಯೇನೂ ಆಗಿಲ್ಲ. ಜೀವನಮಟ್ಟ ಸುಧಾರಿಸಿಲ್ಲ. ಅನುದಾನದ ಘೋಷಣೆಯೂ ಕಾರ್ಯರೂಪಕ್ಕೆ ಬಂದಿಲ್ಲ. ಸಚಿವರ ಭೇಟಿ ಕಾರಣಕ್ಕೆ ರಸ್ತೆ ದುರಸ್ತಿ, ಚರಂಡಿ ಸ್ವಚ್ಛತೆ ಮೊದಲಾದ ಸಣ್ಣಪುಟ್ಟ ತಾತ್ಕಾಲಿಕ ಕೆಲಸಗಳಷ್ಟೇ ನಡೆದಿವೆ.

ಗ್ರಾಮೀಣ ಜನರ ಬಹುಪಾಲು ಸಮಸ್ಯೆಗಳು ಕಂದಾಯ ಇಲಾಖೆಗೆ ಸಂಬಂಧಿಸಿದ್ದೇ ಆಗಿರುತ್ತವೆ. ಸರ್ಕಾರದ ಈ ಪ್ರಮುಖ ಇಲಾಖೆಯು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಜನರಿಗೆ ಅನುಕೂಲಗಳನ್ನು ಕಲ್ಪಿಸಬಹುದು. ಆದರೆ, ಮಧ್ಯವರ್ತಿಗಳ ಹಾವಳಿ ತಪ್ಪಿಸಿ, ವಿಳಂಬಗತಿಯ ಕಾರ್ಯವೈಖರಿಯನ್ನು ಬದಲಾಯಿಸಲು, ಸರ್ಕಾರವೇ ಜನರ ಬಳಿಗೆ ಬರುತ್ತಿದೆ ಎಂಬ ಘೋಷಣೆಯಡಿ ಪಿಂಚಣಿ, ವೃದ್ಧಾಪ್ಯ ವೇತನದಂಥ ಆದೇಶಪತ್ರಗಳನ್ನು ವಿತರಿಸಿದ್ದು ಬಿಟ್ಟರೆ ಹತ್ತಾರು ಸಮಸ್ಯೆಗಳು ಪರಿಹಾರವಾಗಿಲ್ಲ.

'ನಮ್ಮೂರಿಗೆ ಸಚಿವರು, ಹಿರಿಯ ಅಧಿಕಾರಿಗಳೇ ಬಂದಿದ್ದರು. ನಮ್ಮ ಕೆಲಸಗಳೆಲ್ಲವೂ ಸುಲಭವಾಗಿ ಆಗಿಬಿಡುತ್ತವೆ; ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ' ಎಂಬ ಜನರ ನಿರೀಕ್ಷೆಗಳು ಹುಸಿಯಾಗಿವೆ. ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಬಿದ್ದಿಲ್ಲ.

ಸಮಸ್ಯೆಗಳೊಂದಿಗೇ ಜೀವನ: ಜನರ ಸಮಸ್ಯೆಗಳನ್ನು ಕೇಳಿಸಿಕೊಳ್ಳುವ, ಅವುಗಳನ್ನು ಬಗೆಹರಿಸುವ ಭರವಸೆಗಳನ್ನಂತೂ ಸಚಿವರು ನೀಡುತ್ತಿದ್ದಾರೆ. ಅಧಿಕಾರಿಗಳಿಗೂ 'ಬಿಸಿ' ಮುಟ್ಟಿಸುತ್ತಿದ್ದಾರೆ. ಆದರೆ 2ನೇ ಹಂತವಾದ ಅನುಪಾಲನೆ ಪರಿಣಾಮಕಾರಿಯಾಗಿ ಆಗುತ್ತಿಲ್ಲ. ಕಾರ್ಯಕ್ರಮ ಅನುಷ್ಠಾನದ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳೂ ತಲೆಕೆಡಿಸಿಕೊಳ್ಳುತ್ತಿಲ್ಲ. ತಿಂಗಳಾಗುವಷ್ಟರಲ್ಲಿ ಇನ್ನೊಂದು ಗ್ರಾಮವಾಸ್ತವ್ಯಕ್ಕೆ ಸಚಿವರು ತಯಾರಾಗುತ್ತಿರುತ್ತಾರೆ! ಅವರಿಗೆ 'ವ್ಯವಸ್ಥೆ' ಮಾಡುವತ್ತ ಅಧಿಕಾರಿಗಳು ಗಮನ ಹರಿಸುತ್ತಾರೆ. ಪರಿಣಾಮ? ವಾಸ್ತವ್ಯ ನಡೆದ ಹಳ್ಳಿ ಜನ ಎಂದಿನ ಸಮಸ್ಯೆಗಳೊಂದಿಗೆ ಜೀವನ ಸವೆಸುತ್ತಿದ್ದಾರೆ.

'ಇಲಾಖೆಯನ್ನು ಮತ್ತಷ್ಟು ಜನಪರಗೊಳಿಸಬೇಕು' ಎಂಬ ಸಚಿವರ ಬಯಕೆಗೆ ಅಧಿಕಾರಿ ವರ್ಗ ಸ್ಪಂದಿಸದಿರುವುದು 'ಪ್ರಜಾವಾಣಿ' ನಡೆಸಿದ ರಿಯಾಲಿಟಿ ಚೆಕ್ ವೇಳೆ ಕಂಡು ಬಂತು. ಕಾರ್ಯಕ್ರಮಕ್ಕೆ ನೀಡುವಷ್ಟೇ ಆದ್ಯತೆಯನ್ನು ಸಚಿವರು ಫಾಲೋಅಪ್‌ಗೆ ಕೊಡದಿರುವುದು ಢಾಳಾಗಿ ಎದ್ದು ಕಾಣುತ್ತಿದೆ.

ಒಳನೋಟ

ಪರಿಣಾಮವಿಲ್ಲದ ಗ್ರಾಮ ವಾಸ್ತವ್ಯ

ಪ್ರತಿಕ್ರಿಯಿಸಿ: 9606038256
feedback@prajavani.co.in

ಆರಂಭದಲ್ಲಿ ಲೋಪ ದೋಷ ಸಹಜ: ಅಶೋಕ

'ಗ್ರಾಮ ವಾಸ್ತವ್ಯ' ನನಗೂ ಪಾಠಶಾಲೆ ಇದ್ದಹಾಗೆ. ಯಾವುದೇ ಯೋಜನೆ ಜಾರಿ ಮಾಡಿದಾಗ ಮೊದಲು ಸ್ವಲ್ಪ ಲೋಪದೋಷಗಳು ಇರುತ್ತವೆ. ನನ್ನ ಉದ್ದೇಶ ಅಧಿಕಾರಿಗಳು ಮತ್ತು ಜನರ ಮಧ್ಯೆ ಅಂತರ ಕಡಿಮೆ ಆಗಬೇಕು. ಆಗ ಮಧ್ಯವರ್ತಿಗಳ ಹಾವಳಿ ತಪ್ಪಿಸಬಹುದು. ಪಿಂಚಣಿ ಪಡೆಯಲು ಜನರು ಮೊದಲು ಕಷ್ಟಪಡುತ್ತಿದ್ದರು. ಈಗ 72 ಗಂಟೆಗಳಲ್ಲಿ ಮಧ್ಯವರ್ತಿಗಳಿಲ್ಲದೇ ಸಿಗುವಂತೆ ಮಾಡಿದ್ದೇನೆ. ಸ್ವಾವಲಂಬಿ ಆಪ್ ಮೂಲಕ ಜನರೇ ಪೋಡಿ ಮಾಡಿಕೊಳ್ಳಲು ಅವಕಾಶ ಮಾಡಲಾಗಿದೆ. ಮುಂದೆ ಜಿಲ್ಲಾಧಿಕಾರಿಗಳು ವಾರಕ್ಕೊಮ್ಮೆ ತಾಲ್ಲೂಕಿಗೆ ಭೇಟಿ ನೀಡಬೇಕು ಎನ್ನುವ ಯೋಜನೆಗೆ ರೂಪುರೇಷೆ ಸಿದ್ಧಪಡಿಸಿ ಅನುಷ್ಠಾನ ಮಾಡುತ್ತೇನೆ.

ದಾಖಲೆಗಳನ್ನು ಪರಿಶೀಲಿಸಬೇಕು. ಸರಿ ಇದ್ದರೆ ಹಿರಿಯ ಅಧಿಕಾರಿಗಳಿಗೆ ಕಳುಹಿಸಿ ಅನುಮತಿ ಪಡೆಯಬೇಕು. ಅವರು ಸೂಚಿಸಿದರಷ್ಟೆ ಭೂಪರಿವರ್ತನೆಗೆ ಕ್ರಮ ಕೈಗೊಳ್ಳಬೇಕು. ಇದನ್ನು 3 ದಿನಗಳಲ್ಲಿ ಮಾಡಲಾಗದು

ಸುಧೀರ್, ಕಂದಾಯ ಇನ್‌ಸ್ಪೆಕ್ಟರ್, ಸುರಹೊನ್ನೆ, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ

ಕಂದಾಯ ಸಚಿವರು ನಡೆಸಿದ ಗ್ರಾಮ ವಾಸ್ತವ್ಯದ ವೇಳೆ ಜನರಿಂದ ಸಲ್ಲಿಕೆಯಾದ ಮನವಿಗಳಿಗೆ ಅಧಿಕಾರಿಗಳಿಂದ ತ್ವರಿತವಾಗಿ ಸ್ಪಂದನೆ ದೊರೆಯಬೇಕು

ಭೈರವೇಶ್ವರ ಭಟ್, ಸದಸ್ಯ, ಕುಂಟಗಣಿ ಸೇವಾ ಸಹಕಾರ ಸಂಘ, ಅಂಕೋಲಾ

5ನೇ ಪುಟ ನೋಡಿ | ಇನ್ನಷ್ಟು ಸುದ್ದಿಗಳು 5

ಒಡಿಶಾ: 20 ಸಚಿವರ ರಾಜೀನಾಮೆ

ಭುವನೇಶ್ವರ (ಪಿಟಿಐ): ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಸೂಚನೆ ಮೇರೆಗೆ ಸಂಪುಟದ ಎಲ್ಲ 20 ಸಚಿವರು ಶನಿವಾರ ರಾಜೀನಾಮೆ ಸಲ್ಲಿಸಿದ್ದಾರೆ.

ಮುಂಬರುವ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಹೊಸ ಸಂಪುಟ ರಚಿಸಲು ಪಟ್ನಾಯಕ್ ಮುಂದಾಗಿದ್ದಾರೆ. ಲೋಕಸೇವಾ ಭವನದಲ್ಲಿ ಭಾನುವಾರ ಬೆಳಿಗ್ಗೆ 11.45ಕ್ಕೆ ನಡೆಯುವ ಸಮಾರಂಭದಲ್ಲಿ ನೂತನ ಸಚಿವರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ರಾಜಭವನ ಪ್ರಕಟಣೆ ತಿಳಿಸಿದೆ.



12

ಪ್ಯಾರಿಸ್‌ನಲ್ಲಿ ಶನಿವಾರ ನಡೆದ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಪ್ರಶಸ್ತಿಗೆದ್ದ ಪೋಲೆಂಡ್‌ನ ಇಗಾ ಸ್ವಿಟೆಕ್ ಟ್ರೋಫಿಗೆ ಮುತ್ತಿಟ್ಟರು –ಎಎಫ್‌ಪಿ ಚಿತ್ರ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಹೊಸ ಸಮಿತಿ ರಚನೆ ಅಗತ್ಯವಿಲ್ಲ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಹೆಡಗೇವಾರ್ ಪಾಠ ಕೈಬಿಡುವುದಿಲ್ಲ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸಂಸ್ಥಾಪಕ ಕೇಶವ ಬಲಿರಾಮ್ ಹೆಡಗೇವಾರ್ ಅವರಿಗೆ ಸಂಬಂಧಿಸಿದ ಪಾಠವನ್ನು ಕೈಬಿಡುವುದಿಲ್ಲ. ಅವರ ಪಾಠ ಇದ್ದರೆ ತಪ್ಪೇನು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

ಹಿರಿಯೂರು ತಾಲ್ಲೂಕಿನ ದೇವರಕೊಟ್ಟ ಗ್ರಾಮದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಠ್ಯಪುಸ್ತಕ ಸಮಿತಿ ಕಾರ್ಯ ಮುಗಿದಿದೆ. ಹೀಗಾಗಿ ಅದನ್ನು ವಿಸರ್ಜನೆ ಮಾಡಲಾಗಿದೆಯೇ ಹೊರತು ರದ್ದು ಮಾಡಿಲ್ಲ. ಹೊಸ ಸಮಿತಿ ರಚನೆಯ ಅವಶ್ಯಕತೆ ಇಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಪರಿಷ್ಕರಣೆ ಕ್ರಿಯೆಗೆ ನ್ಯಾಯಸಮ್ಮತ ಮಾನದಂಡ ರೂಪಿಸಿಕೊಳ್ಳಬೇಕಾಗುತ್ತದೆ. ಇಂಥದ್ದೊಂದು ನ್ಯಾಯಸಮ್ಮತ ಮಾನದಂಡವು ಮರು ಪರಿಷ್ಕರಣೆಯಲ್ಲಿ ಕಾಣಿಸುವುದಿಲ್ಲ

ಬರಗೂರು ರಾಮಚಂದ್ರಪ್ಪ, ಸಾಹಿತಿ

4ನೇ ಪುಟ ನೋಡಿ

'ಹೆಡಗೇವಾರ್ ಪಾಠ ಮಕ್ಕಳೇಕೆ ಓದಬೇಕು?'

ಚಿತ್ರದುರ್ಗ: 'ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ ಬಲಿರಾಮ್ ಹೆಡಗೇವಾರ್ ಅವರ ಪಾಠವನ್ನು ಮಕ್ಕಳೇಕೆ ಓದಬೇಕು? ಅವರು ಸ್ವಾತಂತ್ರ್ಯ ಹೋರಾಟಗಾರರೇ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹೆಡಗೇವಾರ್ ಪಾಠಕ್ಕೆ ಈಗಲೂ ವಿರೋಧವಿದೆ. ಆರ್‌ಎಸ್‌ಎಸ್ ಬಗ್ಗೆ ಅವರು ಮಾಡಿದ ಭಾಷಣವನ್ನು ಶಾಲಾ ಮಕ್ಕಳು ಓದಬೇಕು ಎಂಬುದು ಸರಿಯಲ್ಲ' ಎಂದರು.

'ಕುವೆಂಪು ರಚಿತ ನಾಡಗೀತೆಯನ್ನು ತಿರುಚಲಾಗಿದೆ. ಭಗತ್ ಸಿಂಗ್, ನಾರಾಯಣ ಗುರು ಪಾಠ ತೆಗೆದುಹಾಕಲಾಗಿದೆ. ಈ ಮೂಲಕ ಮಕ್ಕಳಿಗೆ ಏನು ಸಂದೇಶ ನೀಡುತ್ತಿದ್ದೀರಿ' ಎಂದು ಕಿಡಿಕಾರಿದರು.

ಇನ್ನಷ್ಟು ಸುದ್ದಿಗಳು 4

ವಿಸ್ಕಿ, ಬ್ರಾಂದಿ, ರಮ್‌ಗಿಂತ ಬಿಯರ್ ಸೇವನೆಯೇ ಹೆಚ್ಚು

ಮೂರು ತಿಂಗಳಲ್ಲಿ ಮದ್ಯದ ನಶೆ ಜೋರು!

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಮೂರು ತಿಂಗಳಲ್ಲಿ ರಾಜ್ಯದಲ್ಲಿ ಮದ್ಯ ಪ್ರಿಯರು ಮದ್ಯದ ನಶೆಯಲ್ಲಿ ತೇಲಿದ್ದಾರೆ. ಮದ್ಯ (ಐಎಂಎಲ್) ಮತ್ತು ಬಿಯರ್ ಮಾರಾಟದಲ್ಲಿ ಹಿಂದೆಂದೂ ಕಾಣದಷ್ಟು ಏರಿಕೆಯಾಗಿದ್ದು, ವಿಸ್ಕಿ, ಬ್ರಾಂದಿ ಮತ್ತು ರಮ್‌ಗಿಂತ ಬಿಯರ್ ಮಾರಾಟ ಗಣನೀಯವಾಗಿ ಹೆಚ್ಚಾಗಿದೆ. ಮೂರೇ ತಿಂಗಳಲ್ಲಿ ಅಬಕಾರಿ ಇಲಾಖೆಗೆ ₹7,278 ಕೋಟಿ ವರಮಾನ ಸಂಗ್ರಹವಾಗಿದೆ.

ಕಳೆದ ಎರಡು ವರ್ಷ ಮಾರ್ಚ್‌ನಿಂದ ಜೂನ್ ತನಕ ಕೋವಿಡ್ ಕಾಡಿದ್ದರಿಂದ ಮದುವೆ, ಜಾತ್ರೆ, ಸಭೆ–ಸಮಾರಂಭಗಳಿಗೆ ಅವಕಾಶವೇ ಇರಲಿಲ್ಲ. ಈ ವರ್ಷ ಮಾರ್ಚ್‌ನಿಂದ ಮೇ ತನಕ ಶುಭ ಕಾರ್ಯಕ್ರಮಗಳು ಎಡಬಿಡದೆ ನಡೆದಿದ್ದು, ಮದ್ಯ ಮಾರಾಟ ಕೂಡ ಅಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿದೆ. ಇನ್ನು ಬೆಂಗಳೂರಿನಲ್ಲಿ 'ನೈಟ್‌ಲೈಫ್' ನಿರಾಳವಾಗಿ ನಡೆಯುತ್ತಿದ್ದು, ಬಿಯರ್ ಮಾರಾಟ ಹೆಚ್ಚಳಕ್ಕೆ ಇದು ಪ್ರಮುಖ ಕಾರಣ ಎನ್ನುತ್ತಾರೆ ಮದ್ಯದ ವ್ಯಾಪಾರಿಗಳು.

'ಕಳೆದ 12 ವರ್ಷಗಳಲ್ಲಿ ಮದ್ಯ ಮತ್ತು ಬಿಯರ್ ಮಾರಾಟ ಆಗಿರುವ ಪ್ರಮಾಣ ಗಮನಿಸಿದರೆ ಈ ಮೂರು ತಿಂಗಳಲ್ಲಿ ಮಾರಾಟವಾಗಿರುವಷ್ಟು ಮದ್ಯ ಬೇರೆ ಯಾವ ತಿಂಗಳಿನಲ್ಲೂ ಆಗಿಲ್ಲ'.

3B ಪುಟ ನೋಡಿ

ಅಂಕಿ–ಅಂಶ

₹24,580 ಕೋಟಿ 2021–22ನೇ ಸಾಲಿನಲ್ಲಿ ಸಂಗ್ರಹವಾದ ವರಮಾನ

₹29 ಸಾವಿರ ಕೋಟಿ 2022–23ನೇ ಸಾಲಿಗೆ ನಿರೀಕ್ಷೆ ಮಾಡಿರುವ ವರಮಾನ

₹4,678.66 ಕೋಟಿ ಕಳೆದ ಎರಡು ತಿಂಗಳಲ್ಲಿ ಸಂಗ್ರವಾದ ವರಮಾನ

ಮಾರಾಟವಾದ ಮದ್ಯದ ವಿವರ (ಲಕ್ಷ ಬಾಕ್ಸ್‌ಗಳಲ್ಲಿ)

	ಐಎಂಎಲ್	ಬಿಯರ್
ಮಾರ್ಚ್ (2022)	63.66	38.37
ಏಪ್ರಿಲ್	53.69	36.84
ಮೇ	58.14	34.79

ಬೆಸ್ಕಾಂ ವತಿಯಿಂದ ಬೆಂಗಳೂರಿನಲ್ಲಿ ಮೊದಲ ಪ್ರಯೋಗ

ನೆಲದಡಿಯಲ್ಲಿ ವಿದ್ಯುತ್ ಪರಿವರ್ತಕ

• ಸಚ್ಚಿದಾನಂದ ಕುರಗುಂದ


ಬೆಂಗಳೂರು: ನೆಲದಡಿಯಲ್ಲಿ ವಿದ್ಯುತ್ ಪರಿವರ್ತಕ ಅಳವಡಿಸುವ ವಿನೂತನ ಯೋಜನೆಯನ್ನು ಇದೇ ಮೊದಲ ಬಾರಿಗೆ ನಗರದಲ್ಲಿ ಜಾರಿಗೊಳಿಸಲಾಗುತ್ತಿದೆ.

ಪಾದಚಾರಿ ಮಾರ್ಗದಲ್ಲಿ ಕೈಗೊಳ್ಳುತ್ತಿರುವ ಈ ಯೋಜನೆಯು ದೇಶದಲ್ಲಿ ಮೊದಲು ಎಂದು ಬೆಸ್ಕಾಂ ಅಧಿಕಾರಿಗಳು ಪ್ರತಿಪಾದಿಸಿದ್ದಾರೆ.

₹2 ಕೋಟಿ ವೆಚ್ಚದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, 500 ಕೆವಿಎ ಸಾಮರ್ಥ್ಯದ ವಿದ್ಯುತ್ ಪರಿವರ್ತಕವನ್ನು ನಗರದ ಮಲ್ಲೇಶ್ವರದ 15ನೇ ಅಡ್ಡರಸ್ತೆಯ ಪಾದಚಾರಿ ಮಾರ್ಗದ ಅಡಿಯಲ್ಲಿ ಸ್ಥಾಪಿಸಲಾಗುತ್ತಿದೆ. ಈ ರೀತಿಯ ವ್ಯವಸ್ಥೆಯಿಂದ ವಿದ್ಯುತ್‌ಗೆ ಸಂಬಂಧಿಸಿದ ಅಪಘಾತಗಳನ್ನು ತಡೆಯಬಹುದಾಗಿದೆ ಮತ್ತು ನಿಯಮಿತವಾಗಿ ವಿದ್ಯುತ್ ಪೂರೈಕೆಗೆ ಇರುವ ತೊಡಕುಗಳನ್ನು ಸಹ ನಿವಾರಿಸಲು ಸಾಧ್ಯವಾಗಲಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಸಹಯೋಗದಲ್ಲಿ ಬೆಸ್ಕಾಂ ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಎಲೆಕ್ಟ್ರಿಕಲ್‌ಗೆ ಸಂಬಂಧಿಸಿದ ಕಾರ್ಯಗಳನ್ನು ಬೆಸ್ಕಾಂ ಹಾಗೂ ಸಿವಿಲ್ ಕಾಮಗಾರಿಗಳನ್ನು ಬಿಬಿಎಂಪಿ ವಹಿಸಿಕೊಂಡಿದೆ.

'ಸದ್ಯ ಎರಡು ಕಂಬಗಳು ಅಥವಾ ಒಂದು ಕಂಬಕ್ಕೆ ಎತ್ತರದಲ್ಲಿ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲಾಗುತ್ತಿದೆ. ಇದರಿಂದ, ಪದೇ ಪದೇ ಅವಘಡಗಳು ಸಂಭವಿಸುತ್ತಿರುವುದು ವರದಿಯಾಗುತ್ತಿವೆ. ಸದ್ಯ ಅಪಾಯಕಾರಿ ಎಂದು ಗುರುತಿಸಲಾಗಿರುವ ವಿದ್ಯುತ್ ಪರಿವರ್ತಕಗಳನ್ನು ಎತ್ತರಿಸಿದ ಜಾಗದಲ್ಲಿ ಅಥವಾ ಸುರಕ್ಷಿತ ಜಾಗದಲ್ಲಿ ಅಳವಡಿಸುವ ಕಾರ್ಯ ತ್ವರಿತವಾಗಿ ನಡೆಯುತ್ತಿದೆ. ಈಗಿರುವ ಸಮಸ್ಯೆಗಳಿಗೆ ನೆಲದಡಿಯಲ್ಲಿ ಅಳವಡಿಸುವ ಯೋಜನೆ ಶಾಶ್ವತ ಪರಿಹಾರ ಒದಗಿಸಬಹುದು. ಈ ಯೋಜನೆ ಯಶಸ್ವಿಯಾದರೆ ಉಳಿದೆಡೆಯೂ ಹಂತ, ಹಂತವಾಗಿ ಜಾರಿಗೊಳಿಸಲಾಗುವುದು' ಎಂದು ಬೆಸ್ಕಾಂ ಮಲ್ಲೇಶ್ವರ ವಿಭಾಗದ ಅಧಿಕಾರಿಗಳು ಹೇಳುತ್ತಾರೆ.



ಪ್ರಜಾವಾಣಿ ವಿಶೇಷ

ಯೋಜನೆಯ ವಿವರ

- ಒಟ್ಟು ಅಂದಾಜು ವೆಚ್ಚ ₹ 2 ಕೋಟಿ
- ಎಲೆಕ್ಟ್ರಿಕಲ್ ಕಾರ್ಯಗಳಿಗೆ ₹1.25 ಕೋಟಿ ವೆಚ್ಚ
- ಉದ್ದ: 14 ಮೀಟರ್
- ಅಗಲ: 4 ಮೀಟರ್
- ಆಳ: 4 ಮೀಟರ್
- ನಾಲ್ಕು ಕಾಂಕ್ರೀಟ್ ಗೋಡೆಗಳು
- ಹವಾನಿಯಂತ್ರಿತ ವ್ಯವಸ್ಥೆ ಅಳವಡಿಕೆ
- ಅಗ್ನಿ ನಿಯಂತ್ರಣ ವ್ಯವಸ್ಥೆ

ನೆಲದಡಿಯಲ್ಲಿ ವಿದ್ಯುತ್ ಪರಿವರ್ತಕ ಅಳವಡಿಸುವ ಯೋಜನೆಗೆ ಟೆಂಡರ್ ಅನುಮೋದನೆ ನೀಡಲಾಗಿದೆ. ಮೊದಲ ಬಾರಿ ಇಂತಹ ಪ್ರಯತ್ನ ಕೈಗೊಳ್ಳಲಾಗಿದೆ

ವಿ. ಸುನಿಲ್ ಕುಮಾರ್, ಇಂಧನ ಸಚಿವ

3B ಪುಟ ನೋಡಿ

ಐಎಎಸ್ ಬಾಬಾ: 14 ಅಭ್ಯರ್ಥಿಗಳು ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗ ನಡೆಸಿದ ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ರಾಜ್ಯದಿಂದ ಆಯ್ಕೆಯಾದ 26 ವಿದ್ಯಾರ್ಥಿಗಳ ಪೈಕಿ, 14 ಅಭ್ಯರ್ಥಿಗಳು ಬೆಂಗಳೂರಿನಲ್ಲಿ ಪ್ರಧಾನ ಕಚೇರಿ ಹೊಂದಿರುವ 'ಐಎಎಸ್ ಬಾಬಾ' ಸಂಸ್ಥೆಯ ವಿದ್ಯಾರ್ಥಿಗಳಾಗಿದ್ದಾರೆ ಎಂದು ಸಂಸ್ಥೆಯ ಸಂಸ್ಥಾಪಕ ಎಸ್. ಮೋಹನ್‌ರಾಜ್ ತಿಳಿಸಿದ್ದಾರೆ.

ಆಯ್ಕೆಯಾದ ಅಂಜಲಿ ಶ್ರೋತ್ರಿಯ ಹಾಗೂ ರಾಜೇಶ್ ಪೊನ್ನಪ್ಪ ಗುರುಕುಲ ಕ್ಲಾಸ್ ರೂಂನ ಪೂರ್ಣಪ್ರಮಾಣದ ವಿದ್ಯಾರ್ಥಿಗಳು. ದೇಶದಾದ್ಯಂತ ಸಂಸ್ಥೆಯ 160 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ ಎಂದಿದ್ದಾರೆ.

'ಐಎಎಸ್ ಆಕಾಂಕ್ಷಿಗಳಿಗೆ ತರಬೇತಿ ನೀಡಿ ಮೊದಲ ಪ್ರಯತ್ನದಲ್ಲೇ ಯಶಸ್ವಿಗೊಳಿಸುವ ಕೆಲಸವನ್ನು ಮಾಡುವುದು ಸಂಸ್ಥೆಯ ಗುರಿ. ಪೂರ್ವಭಾವಿ ಪರೀಕ್ಷೆ, ಮುಖ್ಯಪರೀಕ್ಷೆ ಹಾಗೂ ಸಂದರ್ಶನಕ್ಕೆ ಹೊಸ ರೀತಿಯಲ್ಲಿ ತರಬೇತಿ ನೀಡಲಾಗುವುದು. ಸಂಸ್ಥೆಯ ಆರಂಭವಾದ ಮೊದಲ ವರ್ಷವೇ 50 ಮಂದಿ ರ‍್ಯಾಂಕ್ ಗಳಿಸಿದ್ದರು. 7 ವರ್ಷಗಳಲ್ಲಿ 1,650 ಅಭ್ಯರ್ಥಿಗಳು ರ‍್ಯಾಂಕ್ ಗಳಿಸಿದ್ದಾರೆ' ಎಂದಿದ್ದಾರೆ.

ಸಂಸ್ಥೆಯಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳು: ನಿಖಿಲ್ ಬಸವರಾಜ್ ಪಾಟೀಲ್ (132), ವಿನಯ್ ಕುಮಾರ್ ಗಡ್ಗೆ (1510, ಆರ್.ನಿತ್ಯ (207), ಮನೋಜ್ ರಾಮನಾಥ್ ಹೆಗ್ಡೆ (213), ಎಂ.ಪಿ.ರಾಜೇಶ್ ಪೊನ್ನಪ್ಪ (222), ಸಹಿತ್ಯಾ ಅಲದಕಟ್ಟಿ (250), ಕೆ.ಆರ್. [illegible] (291), ದೀಪಕ್ ರಾಮಚಂದ್ರ ಶೇಟ್ (311), ಪಿ.ವಿಷ್ಣು (323), ಡಿ.ಎಚ್.ವಿನಯ್‌ಕುಮಾರ್ (352), ಕೆ.ಟಿ.ಮೇಘನಾ (425), ಪಿ.ಶ್ರವಣ್ ಕುಮಾರ್ (521), [illegible] (532), ಬಿ.ಚೇತನ್‌ಕುಮಾರ್ (669).

ಮೂವರಿಗೆ ಇನ್ಫೋಸಿಸ್ ಪ್ರತಿಷ್ಠಾನದ ಸಾಹಿತ್ಯ ಪ್ರಶಸ್ತಿ

ಧಾರವಾಡ: 'ಇನ್ಫೋಸಿಸ್ ಪ್ರತಿಷ್ಠಾನದ ಸಾಹಿತ್ಯ ಪ್ರಶಸ್ತಿ ಸಮಿತಿ ಹಾಗೂ ಉತ್ತರ ಕರ್ನಾಟಕ ಲೇಖಕಿಯರ ಸಂಘದ ಸಂಯುಕ್ತ ಆಶ್ರಯದಲ್ಲಿ ನೀಡುತ್ತಿರುವ ವಾರ್ಷಿಕ ಪ್ರಶಸ್ತಿಗೆ ಮೂವರು ಲೇಖಕಿಯರ ಕೃತಿಗಳು ಆಯ್ಕೆಯಾಗಿವೆ.


ಪಿ. ಚಂದ್ರಿಕಾ


ರೋಹಿಣಿ


ಜಯಶ್ರೀ ಹೆಗಡೆ

2019ರ ಪ್ರಶಸ್ತಿಯು ಬೆಂಗಳೂರಿನ ಪಿ. ಚಂದ್ರಿಕಾ ಅವರ ನಾಟಕ 'ಮೋದಾಳಿ', 2020ರ ಪ್ರಶಸ್ತಿಯು ಮೈಸೂರಿನ ಜಯಶ್ರೀ ಹೆಗಡೆ ಅವರ ಪ್ರಬಂಧ ಸಂಕಲನ 'ಜಾಬಿಲಿಯ ಭಂಡ' ಕೃತಿ ಹಾಗೂ 2021ರ ಪ್ರಶಸ್ತಿಯು ಮಂಗಳೂರಿನ ಬಿ.ಎಂ.ರೋಹಿಣಿ ಅವರ ಆತ್ಮಕಥೆ 'ನಾಗಂದಿಗೆಯೊಳಗಿಂದ' ಕೃತಿಗೆ ದೊರೆತಿದೆ. ಪ್ರಶಸ್ತಿಯು ತಲಾ ₹10 ಸಾವಿರ, ಪ್ರಶಸ್ತಿ ಪತ್ರ, ಸ್ಮರಣಿಕೆ ಒಳಗೊಂಡಿದೆ. ಧಾರವಾಡದಲ್ಲಿ ಜೂನ್ 18ರ ಸಂಜೆ ನಡೆಯುವ ಸಮಾರಂಭದಲ್ಲಿ ಪ್ರತಿಷ್ಠಾನದ ಡಾ.ಸುಧಾಮೂರ್ತಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಪ್ರಕಟಣೆ ತಿಳಿಸಿದೆ.

ಡಾ. ಎಲ್.ಸಿ.ಸುಮಿತ್ರಾ, ಡಾ. ಶ್ಯಾಮಸುಂದರ ಬಿದರಕುಂದಿ, ಡಾ. ಶಾಲಿನಿ ರಘುನಾಥ ಮತ್ತು ಸುನಂದಾ ಕಡಮೆ, ಡಾ. ವಿ.ಟಿ.ನಾಯಕ ಹಾಗೂ ಡಾ. ಬಸು ಬೇವಿನಗಿಡದ ಅವರು ನಿರ್ಣಾಯಕರಾಗಿದ್ದರು.

ವಿವಿಧೆಡೆ ಜೋರು ಮಳೆ

ಬೆಂಗಳೂರು: ನಗರದ ಹಲವೆಡೆ ಶನಿವಾರವೂ ಜೋರು ಮಳೆ ಸುರಿಯಿತು. ಶುಕ್ರವಾರ ರಾತ್ರಿಯೂ ಉತ್ತಮ ಮಳೆಯಾಗಿತ್ತು. ಶನಿವಾರ ಬೆಳಿಗ್ಗೆ ಬಿಸಿಲು ಹೆಚ್ಚಿತ್ತು. ಮಧ್ಯಾಹ್ನದ ನಂತರ ಬಹುತೇಕ ಪ್ರದೇಶಗಳಲ್ಲಿ ಮೋಡ ಕವಿದ ವಾತಾವರಣ ಕಂಡುಬಂತು.

ಎಚ್‌ಎಎಲ್, ಮಾರತ್ತಹಳ್ಳಿ, ಬೆಳ್ಳಂದೂರು ಹಾಗೂ ಸುತ್ತಮುತ್ತಲ್ಲಿ ಮಧ್ಯಾಹ್ನ ಜೋರು ಮಳೆ ಆಯಿತು. ಗುಡುಗು-ಸಿಡಿಲಿನ ಅಬ್ಬರವೂ ಹೆಚ್ಚಿತ್ತು. ಅಶೋಕನಗರ, ಶಿವಾಜಿನಗರ, ಎಂ.ಜಿ.ರಸ್ತೆ, ವಿವೇಕನಗರ, ಕೋರಮಂಗಲ, ಲಾಲ್‌ಬಾಗ್, ವಿಲ್ಸನ್ ಗಾರ್ಡನ್, ಶಾಂತಿನಗರ ಹಾಗೂ ಸುತ್ತಮುತ್ತಲಲ್ಲೂ ಉತ್ತಮ ಮಳೆ ಆಯಿತು.

ಪರಿಸರ ದಿನಕ್ಕೆ 'ಆಲ್ಟರ್ನೆಟಿವ್ 22'

ಬೆಂಗಳೂರು: ವಿಶ್ವ ಪರಿಸರ ದಿನದ ಪ್ರಯುಕ್ತ ನಗರದ ವಿಮೋವೆ ಫೌಂಡೇಷನ್ ಇದೇ ಭಾನುವಾರ ಬೆಳಿಗ್ಗೆ 10.45ಕ್ಕೆ 'ಆಲ್ಟರ್ನೆಟ್ 22' (ಪರ್ಯಾಯ) ಶೀರ್ಷಿಕೆಯಡಿ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಈ ಕಾರ್ಯಕ್ರಮಗಳು ಫೌಂಡೇಷನ್‌ನ ಸಂಸ್ಥಾಪಕ ವಿನಯ್ ಶಿಂಧೆ ನೇತೃತ್ವದಲ್ಲಿ ನಡೆಯಲಿವೆ.

'ಪರಿಸರ ಸಂರಕ್ಷಣೆಗೆ ಶ್ರಮಿಸುತ್ತಿರುವ ಐವರು ತೆರೆಮರೆಯ ಸಾಧಕರನ್ನು ಕಾರ್ಯಕ್ರಮದಲ್ಲಿ ಗೌರವಿಸಲಾಗುತ್ತದೆ. ಅವರ ಬಗೆಗಿನ 30 ನಿಮಿಷಗಳ ಸಾಕ್ಷ್ಯಚಿತ್ರ ಪ್ರದರ್ಶಿಸಲಾಗುತ್ತದೆ' ಎಂದು ಸಂಸ್ಥೆ ಹೇಳಿದೆ.

ನಗರದಲ್ಲಿ ಇಂದು

ಪರಿಸರ ದಿನಾಚರಣೆ: ವಿಶ್ವ ಪರಿಸರ ದಿನಾಚರಣೆ: ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಆನಂದ್ ಸಿಂಗ್, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಆಯೋಜಕರು: ಅರಣ್ಯ ಮತ್ತು ಪರಿಸರ ಇಲಾಖೆ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ: 10

ವಿಶ್ವ ಪರಿಸರ ದಿನ ಪ್ರತಿಭಾ ಪುರಸ್ಕಾರ ಸಮಾರಂಭ: ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ವಿ.ಸೋಮಣ್ಣ, ಉಪಸ್ಥಿತಿ: ಬಿ.ಸಿ.ನಾಗೇಶ, ತೇಜಸ್ವಿ ಸೂರ್ಯ, ಆಯೋಜಕರು: ವಿ.ಸೋಮಣ್ಣ ಪ್ರತಿಷ್ಠಾನ, ಸ್ಥಳ: ಡಾ.ಬಾಲಗಂಗಾಧರನಾಥ ಕ್ರೀಡಾಂಗಣ, ವಿಜಯನಗರ, ಬೆಳಿಗ್ಗೆ: 9

ವಿಶ್ವ ಪರಿಸರ ದಿನಾಚರಣೆ ಚಿಂತನ–ಮಂಥನ ಸಭೆ: ಉದ್ಘಾಟನೆ: ಸುರೇಶ್ ಹೆಬ್ಳೀಕರ್, ಉಪಸ್ಥಿತಿ: ಡಾ.ಪ್ರಕಾಶ ಕಮ್ಮರಡಿ, ತಲಕಾಡು ಚಿಕ್ಕರಂಗೇಗೌಡ, ಎಸ್. ವಿಶ್ವನಾಥ, ಆಯೋಜಕರು: ಕೆಂಪೇಗೌಡ ಪರಿಸರ ಸಂರಕ್ಷಣಾ ವೇದಿಕೆ ಮತ್ತು ಆಮ್ ಆದ್ಮಿ ಪಾರ್ಟಿ, ಸ್ಥಳ: ನಿಸರ್ಗ ಕ್ರೀಡಾಂಗಣ, ಶಿವಕುಮಾರ ಮಹಾಸ್ವಾಮಿಗಳ ಸಭಾಂಗಣ, ಬೆಳಿಗ್ಗೆ: 10.30

ಪರಿಸರ ದಿನಾಚರಣೆ: 'ಇರುವುದೊಂದೇ ಭೂಮಿ' ಕಾರ್ಯಕ್ರಮ ಉದ್ಘಾಟನೆ: ನಟ ಪ್ರೇಮ್, ಅಧ್ಯಕ್ಷತೆ: ಡಾ.ಡಿ.ಹೇಮಚಂದ್ರ ಸಾಗರ, ಅತಿಥಿಗಳು:ಡಾ.ಅಥೆರ್ ಅಮಿನ, ಆಯೋಜನೆ: ದಯಾನಂದ್ ಸಾಗರ ಪಿಯು ಕಾಲೇಜು, ಸ್ಥಳ: ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ: 11.30

ವೃಕ್ಷಗಳ ವಿವೇಕ ಗಾಥೆಗಳು:ಬೆಂಗಳೂರಿನ ಮಸಣಗಳ ಹಾಗೂ ದೇವಸ್ಥಾನಗಳ ಪ್ರಾಚೀನ ಮರಗಳೊಂದಿಗೆ ಆತ್ಮೀಯ ಸಂವಾದ: ನಿಖಿಲ್ ಫರ್ನಾಂಡಿಸ್, ಆಯೋಜಕರು: ರಾಗಿಕಣ ಸಂತೆ, ಸ್ಥಳ: ಶ್ರೀರಾಮಕೃಷ್ಣ ಶಿಕ್ಷಣ ಕೇಂದ್ರ ಆವರಣ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ: 11

ಪರಿಸರ ಉತ್ಸವ: ಉದ್ಘಾಟನೆ: ಎಸ್.ಆರ್.ವಿಶ್ವನಾಥ್, ಅಧ್ಯಕ್ಷತೆ: ಟಿ.ಮುನಿರೆಡ್ಡಿ, ಅತಿಥಿಗಳು: ಭಾಸ್ಕರ್ ಟಿ. ನಾಗೇಂದ್ರಪ್ಪ, ಆಯೋಜಕರು: ಕರ್ನಾಟಕ ರೈತರ ಜಾಗೃತಿ ವೇದಿಕೆ, ಸ್ಥಳ: ರಮಣ ಹೋಟೆಲ್ ಎದುರು ಹೊನ್ನೇಹಳ್ಳಿ, ಸಿಂಗನಾಯಕನಹಳ್ಳಿ, ಮಧ್ಯಾಹ್ನ: 2.30

ವಿಶ್ವ ಪರಿಸರ ದಿನಾಚರಣೆ: ಅತಿಥಿಗಳು: ಶ್ರೀನಿವಾಸ್ ಬಾಬು, ಡಾ.ಜ್ಯೋತಿ, ಅನುರಾಧ ವಿಕ್ರಾಂತ್, ಡಾ.ಅಮನ್ ಜೈನ್, ಎಚ್.ಆರ್. ಜಯರಾಮ್, ಸಾಂಸ್ಕೃತಿಕ ಕಾರ್ಯಕ್ರಮಗಳು: ಮುದ್ರಾ ನೃತ್ಯ ಶಾಲೆ, ಆಯೋಜಕರು: ದಿ ಗ್ರೀನ್ ಪಾತ್, ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಮಧ್ಯಾಹ್ನ: 12

ಮಹಾ ಚಂಡಿಕಾ ಯಾಗ ಮಹೋತ್ಸವ: ಉದ್ಘಾಟನೆ: ವಿ.ಸೋಮಣ್ಣ, ಉಪಸ್ಥಿತಿ: ತೇಜಸ್ವಿಸೂರ್ಯ, ಅಶ್ವತ್ಥನಾರಾಯಣ, ಆಯೋಜಕರು: ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನ ಟ್ರಸ್ಟ್, ಸ್ಥಳ: 2ನೇ ಹಂತ, ಸಿದ್ದಗಂಗಾ ಸ್ಕೂಲ್ ಹತ್ತಿರ, ಚಂದ್ರಾ ಬಡಾವಣೆ, ಬೆಳಿಗ್ಗೆ: 6.30

ವೈ.ಕೆ.ಎಂ 75 ಸಂಭ್ರಮಾಚರಣೆ, ಆತ್ಮಕಥೆ, ಕೃತಿ ಅನಾವರಣ: ಉದ್ಘಾಟನೆ: ಡಾ.ಶಿವಮೊಗ್ಗ ಸುಬ್ಬಣ್ಣ, 10.30ಕ್ಕೆ ಜಾನಪದ ವೈಭವ, 11.30ಕ್ಕೆ ರಂಗ ಗೀತೆಗಳು, 12ಕ್ಕೆ ಭಾವ ಸಂಭ್ರಮ, ಮಧ್ಯಾಹ್ನ 3ಕ್ಕೆ ವೈ.ಎಂ.ಕೆ ಅವರೊಂದಿಗೆ ಸಂವಾದ, 4.30ಕ್ಕೆ ಸಿದ್ದು–ಮುದ್ದು ಝಲಕ್, ಸಂಜೆ: 6 ಸಭಾ ಕಾರ್ಯಕ್ರಮ ಮತ್ತು ಹಾಡು ಹಿಡಿದ ಜಾಡು ಕೃತಿ ಬಿಡುಗಡೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸ್ಥಳ: ರವೀಂದ್ರ ಕಲಾಕ್ಷೇತ್ರ

ಕರ್ನಾಟಕ ಕೈಲಾಸ ಮಾನಸ ಸರೋವರ ಯಾತ್ರಿಕರ ಸಂಘದ ವಾರ್ಷಿಕ ಸಭೆ ಮತ್ತು ಅಭಿನಂದನಾ ಸಮಾರಂಭ: ಅತಿಥಿಗಳು: ಎಲ್.ವಿ.ರವಿ ಸುಬ್ರಮಣ್ಯ, ಅಧ್ಯಕ್ಷರು: ಆರ್.ನಾಗೇಂದ್ರ ಪ್ರಸಾದ್, ಆಯೋಜಕರು: ಕರ್ನಾಟಕ ಕೈಲಾಸ ಮಾನಸ ಸರೋವರ ಯಾತ್ರಿಕರ ಸಂಘ, ಸ್ಥಳ: ಸ್ವಾಮಿ ವಿವೇಕಾನಂದ ಎಜುಕೇಷನಲ್ ಸೊಸೈಟಿ, ಪಿಇಎಸ್ ಕಾಲೇಜು ಹಿಂಭಾಗ, ಬನಶಂಕರಿ 1ನೇ ಹಂತ ಹನುಮಂತನಗರ, ಬೆಳಿಗ್ಗೆ: 10

ಭರತನಾಟ್ಯ ಪ್ರಥಮ ಪ್ರವೇಶ: ಪ್ರಸ್ತುತಿ: ಸಿಂಧು ಪಿ. ನಾಯರ್, ಉಪಸ್ಥಿತಿ: ರತ್ನಾ ಸುಪ್ರೀಯಾ ಶ್ರೀಧರನ್, ಡಾ.ಸುಪರ್ಣಾ ವೆಂಕಟೇಶ್, ಆಯೋಜಕರು: ಕಾದಂಬರಿ ಕಲಾಕ್ಷೇತ್ರ, ಸ್ಥಳ: ಶ್ರೀಕೃಷ್ಣದೇವರಾಯ ಕಲಾಮಂದಿರ, ತೆಲುಗು ವಿಜ್ಞಾನ ಸಮಿತಿ, ಗಾಯತ್ರಿ ದೇವಿ ಪಾರ್ಕ್, ವಯ್ಯಾಲಿಕಾವಲ್, ಬೆಳಿಗ್ಗೆ: 10

ಸ್ಟೇಟ್ ಬ್ಯಾಂಕ್ ಸ್ಟಾಫ್ ಯೂನಿಯನ್ 14ನೇ ಸಮ್ಮೇಳನ: ಉದ್ಘಾಟನೆ: ನಂದಕಿಶೋರ್, ಅತಿಥಿಗಳು: ಸಂಜೀವ್ ಕುಮಾರ್ ಬಂದ್ಲಿಶ್, ಅರುಣ ಭಗೋಲಿವಾಲ್, ಆಯೋಜಕರು: ಸ್ಟೇಟ್ ಬ್ಯಾಂಕ್ ಸ್ಟಾಫ್ ಯೂನಿಯನ್, ಸ್ಥಳ: ಅರಮನೆ ಮೈದಾನ ಗಾಯತ್ರಿ ವಿಹಾರ್, ಬೆಳಿಗ್ಗೆ: 10

ಮೀಸಲಾತಿ ಮತ್ತು ಒಳಮೀಸಲಾತಿ ತಲ್ಲಣಗಳ ಅವಲೋಕನ ರಾಜ್ಯಮಟ್ಟದ ವಿಚಾರ ಸಂಕಿರಣ: ನೇತೃತ್ವ: ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಉದ್ಘಾಟಕರು: ಎ.ಜೆ.ಸದಾಶಿವ, ಅಧ್ಯಕ್ಷತೆ: ಎಂ. ರೇವಣ್ಣ, ಆಯೋಜಕರು: ಮಾದಿಗ ಮಹಾಸಭಾ ಕ್ಷೇಮಾಭಿವೃದ್ಧಿ ಸಂಘ, ಕರ್ನಾಟಕ ಮಾದಿಗ ಮಾನವ ಹಕ್ಕುಗಳ ವೇದಿಕೆ, ಸ್ಥಳ: ಮೈಲಾರ ಮಹಾದೇವ ಸಭಾಂಗಣ, 2ನೇ ಮಹಡಿ ಗಾಂಧಿ ಭವನ, ಬೆಳಿಗ್ಗೆ: 10.30

ಎಸ್‌ಬಿಎಸ್ ಶಾಲೆ, ಕಾಲೇಜು,ಕ್ರೀಡಾ ಕಟ್ಟಡಗಳ ಉದ್ಘಾಟನಾ ಸಮಾರಂಭ: ಉದ್ಘಾಟನೆ:ಸಿಎಂ ಬಸವರಾಜ ಬೊಮ್ಮಾಯಿ, ನೇತೃತ್ವ: ಸಚ್ಚಿದಾನಂದ ಸ್ವಾಮೀಜಿ, ಅಧ್ಯಕ್ಷತೆ: ಎಸ್. ಟಿ.ಸೋಮಶೇಖರ್, ಉಪಸ್ಥಿತಿ: ಅಶ್ವತ್ಥ ನಾರಾಯಣ, ಬಿ.ಸಿ.ನಾಗೇಶ್, ಡಾ.ಸುಧಾಕರ್, ಆಯೋಜಕರು: ಬಂಡೇಶ್ವರಸ್ವಾಮಿ ಎಜುಕೇಷನ್ ಸೊಸೈಟಿ, ಸ್ಥಳ: ಎಸ್.ಬಿ.ಎಸ್ ಶಿಕ್ಷಣ ಸಂಸ್ಥೆ, ಬಂಡೇಮಠ, ಬೆಳಿಗ್ಗೆ: 10.30

ಮಂಜೀರಾ ಮಹಾಯಾಗ: ಪ್ರಸ್ತುತಿ: ಕ್ಷಮಾ ಅಗ್ನಿಹೋತ್ರಿ, ಉಪಸ್ಥಿತಿ: ಪಾರ್ಶ್ವನಾಥ ಉಪಾಧ್ಯೆ, ಗಜೇಂದ್ರ ಶರ್ಮಾ, ರಂಗನಾಯಕಿ, ಆಯೋಜಕರು: ಸಾಧನ ಸಂಗಮ ಡಾನ್ಸ್ ಸೆಂಟರ್ ಮತ್ತು ಗಣಪತಿ ಅಗ್ನಿಹೋತ್ರಿ ಮೇಧಾ ಹೆಗಡೆ, ಸ್ಥಳ: ಸೇವಾ ಸದನ, 14ನೇ ಕ್ರಾಸ್ ಮಲ್ಲೇಶ್ವರಂ, ಬೆಳಿಗ್ಗೆ: 11

ಭಾರತೀಯ ಚಿಂತಕರ ಸಮ್ಮೇಳನ: **ಅತಿಥಿಗಳು:** ಆಂಧ್ರಪ್ರದೇಶ ರಾಜ್ಯಪಾಲ ಬಿಸ್ವಾಭೂಷಣ್ ಹರಿಚಂದ್, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ, ವಿಷಯ: ಮೂಲಭೂತ ಹಕ್ಕುಗಳಲ್ಲಿ ನ್ಯಾಯಾಂಗದ ಪಾತ್ರ, ಆಯೋಜಕರು: ಭಾರತೀಯ ಚಿಂತಕರ ಸಂಘ, ಸ್ಥಳ: ದಿ ಕ್ಯಾಪಿಟಲ್ ಹೋಟೆಲ್ ರಾಜಭವನ ರಸ್ತೆ, ಬೆಳಿಗ್ಗೆ: 11.30

ಪ್ರೊ.ಮಲ್ಲೇಪುರಂ 70ರ ಅಭಿನಂದನೆ ಮತ್ತು ಗ್ರಂಥಗಳ ಲೋಕಾರ್ಪಣೆ: ನೇತೃತ್ವ: ಸಿದ್ದಲಿಂಗ ಸ್ವಾಮೀಜಿ, ಅಧ್ಯಕ್ಷತೆ: ಡಾ.ಶಿವರಾಜ ವಿ.ಪಾಟೀಲ, ಸಮಾಹಿತ ಮತ್ತು ಸಪ್ತತಿ ಗ್ರಂಥಗಳ ಲೋಕಾರ್ಪಣೆ: ಡಾ.ಚಂದ್ರಶೇಖರ ಕಂಬಾರ, ಆಯೋಜಕರು: ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್ ಅಭಿನಂದನಾ ಸಮಿತಿ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರ್‌ಪಾರ್ಕ್ ಸಂಜೆ: 4

ಕೊಂಕಣಿ ಕ್ಯಾಥೋಲಿಕ್ ಸಂಘಟನೆಗಳ ಒಕ್ಕೂಟ ಸಮಾರಂಭ: ಅತಿಥಿಗಳು: ಸುಪ್ರೀಂ ಕೋರ್ಟ್ ನಿವೃತ್ತ ನ್ಯಾ. ವಿ. ಗೋಪಾಲಗೌಡ, ಉಪಸ್ಥಿತಿ: ಕೆ.ಜಯಪ್ರಕಾಶ ಹೆಗಡೆ, ಪೃಥ್ವಿರೆಡ್ಡಿ, ಅಬ್ರಹಾಂ ಟಿ.ಜೆ., ಅಧ್ಯಕ್ಷತೆ: ರಾಬರ್ಟ್ ಮೈಕಲ್ ಮಿರಂಡಾ, ಆಯೋಜನೆ: ಕೊಂಕಣಿ ಕ್ಯಾಥೊಲಿಕ್ ಸಂಘಟನೆಗಳ ಒಕ್ಕೂಟ, ಸ್ಥಳ: ಸಂತ ಜೋಸೆಫ್ ಹೈಸ್ಕೂಲ್ ಸಭಾಂಗಣ, ವಿಠ್ಠಲ ಮಲ್ಯ ರಸ್ತೆ, ಸಂಜೆ: 5.30

ಸಂಗೀತ ಕಾರ್ಯಕ್ರಮ: ಗಾಯನ: ವಿವೇಕ್ ಸದಾಶಿವಂ, ಪಿಟೀಲು: ಮಾಥೂರ್ ಆರ್. ಶ್ರೀನಿಧಿ, ಮೃದಂಗ: ಎಚ್.ಎಸ್.ಸುಧಿಂದ್ರ, ಘಟ: ಓಂಕಾರ್ ರಾವ್, ಆಯೋಜಕರು: ಕರ್ನಾಟಕ ವೋಕಲ್ ಸೆಂಟರ್, ಸ್ಥಳ: ಶ್ರೀರಾಮ ಲಲಿತಕಲಾ ಮಂದಿರ ಸಭಾಂಗಣ, 9ನೇ ಮುಖ್ಯರಸ್ತೆ, ಬನಶಂಕರಿ, ಸಂಜೆ: 5.30

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 138ನೇ ಜಯಂತಿ ಆಚರಣೆ

‘ಒಡೆಯರ್ ಜೀವನ ಆದರ್ಶವಾಗಲಿ’

ಪ್ರಜಾವಾಣಿ ವಾರ್ತೆ



ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಮಾಡುವ ಮೂಲಕ ಉದಯಭಾನು ಕಲಾಸಂಘದ ಗೌರವ ಕಾರ್ಯದರ್ಶಿ ಎಂ.ನರಸಿಂಹ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಗೌರವ ಕಾರ್ಯದರ್ಶಿಗಳಾದ ಡಾ.ಹಂ.ಗು. ರಾಜೇಶ್, ಎಲ್‌.ಹರ್ಷ, ಪ್ರೊ.ಎಸ್‌.ಚಂದ್ರಶೇಖರ್, ಎಂ.ಪ್ರಕಾಶಮೂರ್ತಿ, ಇಂದಿರಾ ಶರಣ್ ಇತರರು ಹಾಜರಿದ್ದರು

ಬೆಂಗಳೂರು: ‘ಆರ್ಥಿಕ ಕ್ಷೇತ್ರದಲ್ಲಿ ಸಬಲತೆ ಸಾಧಿಸಲು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ದೂರದೃಷ್ಟಿಯಿಂದ ಮೈಸೂರು ಬ್ಯಾಂಕ್ ಸ್ಥಾಪಿಸಿದ್ದರು. ಮೈಸೂರು ಬ್ಯಾಂಕ್ ಇನ್ನೊಂದು ಬ್ಯಾಂಕ್ ಜೊತೆಗೆ ವಿಲೀನವಾದ ಸಂದರ್ಭದಲ್ಲಿ ಸರ್ಕಾರವಾಗಲಿ, ನಾವಾಗಲಿ ವಿರೋಧಿಸದೇ ಹೋಗಿದ್ದು ದುರಂತ’ ಎಂದು ಉದಯಭಾನು ಕಲಾಸಂಘದ ಗೌರವ ಕಾರ್ಯದರ್ಶಿ ಎಂ.ನರಸಿಂಹ ಅವರು ವಿಷಾದಿಸಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ನಡೆದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 138ನೇ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

‘ಇಂದಿನ ರಾಜಕಾರಣಿಗಳಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜೀವನವೇ ಒಂದು ಸಂದೇಶ ಮತ್ತು ಆದರ್ಶವಾಗಬೇಕು’ ಎಂದು ಹೇಳಿದರು. ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ವಿಶ್ರಾಂತ ಸಮಕುಲಪತಿ ಪ್ರೊ.ಎಸ್.ಚಂದ್ರಶೇಖರ್ ಅವರು ಮಾತನಾಡಿ, ‘ಅರಮನೆಯ ವೆಚ್ಚಕ್ಕೆಂದು ರಾಜ್ಯದ ವರಮಾನದಲ್ಲಿ ಶೇ 10ರಷ್ಟು ಖರ್ಚು ಮಾಡಲು ಅವಕಾಶವಿದ್ದರೂ, ನಾಲ್ವಡಿ ಶ್ರೀಕೃಷ್ಣರಾಜ ಒಡೆಯರ್ ಅವರು ಸರಳ ಜೀವನ ನಡೆಸಿದರು. ಮೈಸೂರಿನಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ದೇಶದಲ್ಲಿಯೇ ಮೊಟ್ಟಮೊದಲು ಜಾರಿಗೆ ತಂದರು’ ಎಂದು ಹೇಳಿದರು. ‘ಇವತ್ತು ಹಿಜಾಬ್ ಇತ್ಯಾದಿ ಗದ್ದಲಗಳು ನಡೆಯುತ್ತಿವೆ. ನಾಲ್ವಡಿ ಅವರು ನಿಜವಾದ ಆದರ್ಶ ಮನುಷ್ಯ. ಬಡವರು ಮಕ್ಕಳನ್ನು ಶಾಲೆಗೆ ಸೇರಿಸಿದರೆ ತಿಂಗಳಿಗೆ ₹ 5 ಕೊಡುವ ಯೋಜನೆ ಜಾರಿಗೊಳಿಸಿದ್ದರು. ಇದರಿಂದ ಹೆಣ್ಣುಮಕ್ಕಳು ಶಾಲೆಗೆ ಬರುವಂತಾಯಿತು’ ಎಂದು ತಿಳಿಸಿದರು. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪ್ರಕಾಶಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಉಮಾ ಬಸವರಾಜು, ಎಲ್.ಹರ್ಷ, ಡಾ.ಹಂ.ಗು. ರಾಜೇಶ್, ಪದಾಧಿಕಾರಿಗಳಾದ ಎಸ್.ತಿಮ್ಮಯ್ಯ, ಮಾಗಡಿ ಗಿರೀಶ್, ವಿಜಯಲಕ್ಷ್ಮಿ ಸತ್ಯಮೂರ್ತಿ, ಇಂದಿರಾ ಶರಣ್ ಜಮ್ಮಲದಿನ್ನಿ ಹಾಜರಿದ್ದರು.

‘ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಲ್ಲಿ ಪ್ರಶಸ್ತಿ ಸ್ಥಾಪಿಸಬೇಕು’

ಬೆಂಗಳೂರು: ‘ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಲ್ಲಿ ಪ್ರಶಸ್ತಿ ಸ್ಥಾಪಿಸಬೇಕು ಮತ್ತು ಅವರ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸಬೇಕು’ ಎಂದು ಒತ್ತಾಯಿಸಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್ ಕುಮಾರ್ ಅವರಿಗೆ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಪತ್ರ ಬರೆದಿದ್ದಾರೆ.

‘ಜೂನ್ 4 ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನ. ಸರ್ಕಾರದ ವತಿಯಿಂದಲೇ ಜನ್ಮದಿನ ಆಚರಿಸಬೇಕು. ಅಲ್ಲದೆ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ರಾಷ್ಟ್ರಮಟ್ಟದಲ್ಲಿ ಹೆಸರು ಗಳಿಸಿರುವ ಸಾಧಕರನ್ನು ಗುರುತಿಸಿ, ಅವರಿಗೆ ಒಡೆಯರ್ ಹೆಸರಿನಲ್ಲಿ ಮೈಸೂರು ದಸರಾ ಸಂದರ್ಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಬೇಕು. ಇದರಿಂದ ಪ್ರಶಸ್ತಿಯ ಮೌಲ್ಯವೂ ಹೆಚ್ಚುತ್ತದೆ. ಒಡೆಯರ್ ಅವರಿಗೂ ಗೌರವ ಸಲ್ಲಿಸಿದಂತಾಗುತ್ತದೆ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಒಡೆಯರ್ ಅವರು ರಾಜ್ಯಕ್ಕೆ ನೀಡಿದ ಕೊಡುಗೆಗಳು ಜನಮಾನಸದಲ್ಲಿ ಶಾಶ್ವತವಾಗಿ ಉಳಿದಿವೆ. ಕಲೆ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ಕೈಗಾರಿಕೆ, ನೀರಾವರಿ, ಆರ್ಥಿಕ ಚಟುವಟಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ, ಕೃಷಿ, ಸಮಾಜ ಸುಧಾರಣೆ, ಮಹಿಳಾ ಶಿಕ್ಷಣ ಹೀಗೆ ಎಲ್ಲ ಕ್ಷೇತ್ರಗಳ ಬೆಳವಣಿಗೆಗೂ ಅವರು ಅವಿರತ ದುಡಿದಿದ್ದಾರೆ. ಕನ್ನಂಬಾಡಿ ಅಣೆಕಟ್ಟು ನಿರ್ಮಿಸಲು ತಮ್ಮ ಕುಟುಂಬದ ಸ್ವಂತ ಬಂಗಾರವನ್ನು ಮಾರಾಟ ಮಾಡಿ ಹಣ ಹೊಂದಿಸಿದರೆಂಬ ಕೀರ್ತಿ ಹಾಗೂ ಕನ್ನಡ ನಾಡಿನ ಅಭಿವೃದ್ಧಿಗಾಗಿ ಅವರು ಮಾಡಿದ ತ್ಯಾಗ ಯಾರು ಮರೆಯಲಾಗದ್ದು’ ಎಂದೂ ಅವರು ಹೇಳಿದ್ದಾರೆ.

ಅಂಬೇಡ್ಕರ್ ಹೆಸರು ಚಿರಸ್ಥಾಯಿ: ವಿ.ಸೋಮಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬುದ್ಧ, ಬಸವಣ್ಣ, ಅಂಬೇಡ್ಕರ್ ಈ ದೇಶದ ಸಂಪತ್ತು’ ಎಂದು ವಸತಿ ಸಚಿವ ವಿ.ಸೋಮಣ್ಣ ಹೇಳಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 138ನೇ ಜಯಂತಿ, ಎಂ. ವೆಂಕಟಸ್ವಾಮಿ ಅವರ 68ನೇ ಹುಟ್ಟುಹಬ್ಬದ ಅಂಗವಾಗಿ ಸಮತಾ ಸೈನಿಕ ದಳ ಏರ್ಪಡಿಸಿದ್ದ ಪರಿವರ್ತನಾ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

‘ಅಂಬೇಡ್ಕರ್ ಯಾವುದೇ ಸಮುದಾಯಕ್ಕೆ ಸೀಮಿತವಾದ ವ್ಯಕ್ತಿಯಲ್ಲ. ಅವರು ಈ ದೇಶಕ್ಕೆ ನೀಡಿರುವ ಕೊಡುಗೆಯನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಸೂರ್ಯ– ಚಂದ್ರ ಇರುವ ತನಕ ಅಂಬೇಡ್ಕರ್ ಹೆಸರು ಚಿರಸ್ಥಾಯಿಯಾಗಿ ಉಳಿಯಲಿದೆ’ ಎಂದರು.

‘ವೆಂಕಟಸ್ವಾಮಿ ಅವರು ಬಡವರ ಪರವಾಗಿ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಅವರ ಹೋರಾಟದ ಬದುಕಿನ ಕುರಿತು ‘ಬಡವರ ಸಾಹೇಬ’ ಎಂಬ ಸಿನಿಮಾ ನಿರ್ಮಾಣ ಆಗುತ್ತಿರುವುದು ಸಂತಸದ ವಿಷಯ’ ಎಂದು ಹೇಳಿದರು.

ಇದೇ ವೇಳೆ ಲೇಖಕಿ ಬಿ.ಟಿ.ಲಲಿತಾ ನಾಯಕ್ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ದಾಳಿ; 350 ಕ್ವಿಂಟಲ್ ಪಡಿತರ ಅಕ್ಕಿ ಪತ್ತೆ


ಅರಸೀಕೆರೆ: ತಾಲ್ಲೂಕಿನ ಕಣಕಟ್ಟೆ ಹೋಬಳಿಯ ದೊಡ್ಡ ಮೇಟಿಕುರ್ಕೆ ಗ್ರಾಮದಲ್ಲಿ ಶನಿವಾರ ಕಾರ್ಯಾಚರಣೆ ನಡೆಸಿದ ತಹಶೀಲ್ದಾರ್ ವಿಭಾ ವಿದ್ಯಾ ರಾಥೋಡ್ ನೇತೃತ್ವದ ತಂಡ, 350 ಕ್ವಿಂಟಲ್‌ಗೂ ಅಧಿಕ ಪಡಿತರ ಅಕ್ಕಿ ವಶಕ್ಕೆ ಪಡೆದಿದೆ. ಆರೋಪಿ ಹನುಮಂತಪ್ಪ ನಾಪತ್ತೆಯಾಗಿದ್ದಾರೆ.

ಅಕ್ರಮದಲ್ಲಿ ಪಾಲ್ಗೊಂಡ ಎಲ್ಲರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಸದ್ಗುರು ಪ್ರಧಾನಿ ಭೇಟಿ ಇಂದು

ಬೆಂಗಳೂರು: ಇಶಾ ಫೌಂಡೇಷನ್‌ನ ಸಂಸ್ಥಾಪಕ ಜಗ್ಗಿ ವಾಸುದೇವ್ (ಸದ್ಗುರು) ಅವರು ವಿಶ್ವ ಪರಿಸರ ದಿನವಾದ ಭಾನುವಾರ ಬೆಳಿಗ್ಗೆ 11 ಗಂಟೆಗೆ ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲಿದ್ದಾರೆ.



ಸದ್ಗುರು

‘ಮಣ್ಣು ಉಳಿಸಿ’ ಅಭಿಯಾನದ ಭಾಗವಾಗಿ ಈ ಭೇಟಿ ನಡೆಯಲಿದ್ದು, ಮಣ್ಣು ಉಳಿಸುವ ನೀತಿಗೆ ಬೆಂಬಲಿಸುವಂತೆ ಮನವಿ ಮಾಡಲಿದ್ದಾರೆ. ಕಳೆದ ಮಾರ್ಚ್‌ನಲ್ಲಿ ಈ ಅಭಿಯಾನ ಪ್ರಾರಂಭವಾಗಿದೆ. 100 ದಿನಗಳ ಈ ಅಭಿಯಾನದಲ್ಲಿ ಮೋಟಾರ್ ಸೈಕಲ್‌ನಲ್ಲಿ 30 ಸಾವಿರ ಕಿ.ಮೀ ಪ್ರಯಾಣಿಸಲಿದ್ದಾರೆ. ಭಾನುವಾರ ಅವರ ಪ್ರಯಾಣ 75ನೇ ದಿನಕ್ಕೆ ತಲುಪಲಿದೆ. ಹೀಗಾಗಿ, ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನೂ ಆಚರಿಸಲಾಗುತ್ತಿದೆ’ ಎಂದು ಫೌಂಡೇಷನ್ ತಿಳಿಸಿದೆ.



ನಗರದ ಜೆಎಸ್‌ಎಸ್ ರಂಗಮಂದಿರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಮಾತೃಕ ನೃತ್ಯ ಶಾಲೆಯ ಗುರು ವಿದ್ಯಾರವಿಶಂಕರ ಅವರ ಶಿಷ್ಯೆ ವೈಷ್ಣವಿ ಬಿ. ಭಟ್ ಅವರು ರಂಗ ಪ್ರವೇಶಿಸಿದರು

ನಿಧನ ವಾರ್ತೆ

ರಾಮಕೃಷ್ಣ ಐತಾಳ್



ಬೆಂಗಳೂರು: ಬನಶಂಕರಿ ಸಾಂಸ್ಕೃತಿಕ ಸಂಘದ ಸ್ವಾಗತ ಸಮಿತಿ ಸದಸ್ಯ ರಾಮಕೃಷ್ಣ ಐತಾಳ್ (86) ಅವರು ಶನಿವಾರ ಬೆಳಿಗ್ಗೆ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು ಕೆಲ ದಿನಗಳಿಂದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿಕುದುರು ಗ್ರಾಮದವರಾದ ರಾಮಕೃಷ್ಣ ಅವರು, ಇಲ್ಲಿನ ಹನುಮಂತನಗರದಲ್ಲಿ ನೆಲೆಸಿದ್ದರು. ಬನಶಂಕರಿ ಸಾಂಸ್ಕೃತಿಕ ಸಂಘದ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ, ಸಲಹೆಗಾರರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಚುನಾವಣೆ ನಿರ್ವಹಣೆ: ಪಿಇಎಸ್‌ನಲ್ಲಿ ಉಪನ್ಯಾಸ

ಬೆಂಗಳೂರು: ‘ಭಾರತದಲ್ಲಿ ಚುನಾವಣೆ ನಿರ್ವಹಣೆ’ ಕುರಿತು ಪಿ.ಇ.ಎಸ್ ವಿಶ್ವವಿದ್ಯಾಲಯದಲ್ಲಿ ವಿಶೇಷ ಉಪನ್ಯಾಸ ನಡೆಯಿತು.

ಮಾಜಿ ಮುಖ್ಯ ಚುನಾವಣಾ ಆಯುಕ್ತ ಎನ್. ಗೋಪಾಲಸ್ವಾಮಿ ಮಾತನಾಡಿ, ‘ಚುನಾವಣೆ ಸಮಯದಲ್ಲಿ 325 ಹಾಗೂ 329ರ ವಿಧಿ ಅಡಿ ಕ್ರಮ ಕೈಗೊಂಡು ಪರಿಸ್ಥಿತಿ ನಿಯಂತ್ರಿಸಲಾಗುವುದು. ಚುನಾವಣೆ ಕರ್ತವ್ಯಕ್ಕೆ ನಿಯೋಜನೆಗೊಂಡ ಪೊಲೀಸ್ ಸಿಬ್ಬಂದಿಗೆ ಚುನಾವಣಾ ಸಮಯದಲ್ಲಿ ಭದ್ರತಾ ಕ್ರಮಗಳನ್ನು ನಿರ್ವಹಿಸುವಂತೆ ಸೂಚಿಸಲಾಗುವುದು. ಚುನಾವಣಾ ನಿಯಮದ ಪ್ರಕಾರ ಪೊಲೀಸರು ಮತಗಟ್ಟೆ ಪ್ರವೇಶಿಸಲು ಅವಕಾಶವಿಲ್ಲ’ ಎಂದರು.

ಭಾರತದ ಕೆಲವು ರಾಜ್ಯಗಳಲ್ಲಿ ವಿಧಾನಸಭೆ ಅಥವಾ ಸಂಸತ್ ಚುನಾವಣೆಗಳನ್ನು ವರ್ಷದ ಕೆಲವು ತಿಂಗಳುಗಳಲ್ಲಿ ಮಾತ್ರ ನಡೆಯಬಹುದಾಗಿದೆ. ಈಶಾನ್ಯ ರಾಜ್ಯಗಳ ಪ್ರಕರಣವನ್ನು ತೆಗೆದುಕೊಂಡರೆ, ಆ ರಾಜ್ಯಗಳಲ್ಲಿ ಫೆಬ್ರುವರಿ, ಮಾರ್ಚ್ ಅಥವಾ ನವೆಂಬರ್, ಡಿಸೆಂಬರ್ ಅವಧಿಯಲ್ಲಿ ಮಾತ್ರ ಚುನಾವಣೆ ನಡೆಸಲು ಸಾಧ್ಯ ಎಂದರು. ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಎಂ.ಆರ್. ದೊರೆಸ್ವಾಮಿ ಮಾತನಾಡಿ, ‘ದೇಶದಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆ ಸ್ಥಾಪನೆಯಾಗಿದೆ. ರಾಷ್ಟ್ರಪತಿ, ಪ್ರಧಾನಿಯಿಂದ ಮುಖ್ಯ ಚುನಾವಣಾ ಆಯುಕ್ತರ ತನಕ ಆಡಳಿತದಲ್ಲಿ ಶ್ರೇಣಿಯನ್ನು ಅನುಸರಿಸಲಾಗುತ್ತಿದೆ. ಮುಖ್ಯ ಚುನಾವಣಾ ಆಯುಕ್ತರ ಪಾತ್ರವು ಬಹಳ ಮಹತ್ವದ್ದು’ ಎಂದರು.

ಕುಲಪತಿ ಡಾ.ಜೆ.ಸೂರ್ಯ ಪ್ರಸಾದ್, ಪಿಇಎಸ್ ವಿಶ್ವವಿದ್ಯಾಲಯದ ಕುಲಸಚಿವ ಡಾ.ಕೆ.ಎಸ್.ಶ್ರೀಧರ್, ವಾಣಿಜ್ಯ ವಿಭಾಗದ ಡೀನ್ ಶೈಲಶ್ರೀ ಹರಿದಾಸ್ ಹಾಜರಿದ್ದರು.

ಲಂಚ: ಕಸ್ಟಮ್ಸ್ ಅಧಿಕಾರಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶದಿಂದ ಆಮದು ಮಾಡಿಕೊಂಡಿದ್ದ ಸರಕನ್ನು ಸಾಗಿಸಲು ಅನುಮತಿ ನೀಡಲು ₹ 8,500 ಲಂಚ ಪಡೆಯುತ್ತಿದ್ದ ಸೀಮಾ ಸುಂಕ (ಕಸ್ಟಮ್ಸ್) ಇಲಾಖೆಯ ಸೂಪರಿಂಟೆಂಡೆಂಟ್ ಶಶಿಕಾಂತ್ ಮಚ್ಚೇಂದ್ರ ದೇಶಮುಖ್ ಎಂಬುವವರನ್ನು ಸಿಬಿಐ ಶುಕ್ರವಾರ ಬಂಧಿಸಿದೆ.

'ಉದ್ಯಮಿಯೊಬ್ಬರು ವಿದೇಶದಿಂದ ಕೆಲವು ಸರಕುಗಳನ್ನು ಆಮದು ಮಾಡಿಕೊಂಡಿದ್ದರು. ಅವುಗಳ ಪರಿಶೀಲನೆ ಪೂರ್ಣಗೊಳಿಸಿ, ಸಾಗಣೆಗೆ ಅನುಮತಿ ನೀಡುವಂತೆ ಚಾಮರಾಜ-ಪೇಟೆಯಲ್ಲಿರುವ ಕಸ್ಟಮ್ಸ್ ಇಲಾಖೆಯ ಕಚೇರಿಗೆ ಮನವಿ ಸಲ್ಲಿಸಿದ್ದರು. ಸರಕುಗಳ ಸಾಗಣೆಗೆ ಅನುಮತಿ ನೀಡಲು ಲಂಚ ಕೊಡುವಂತೆ ಅಲ್ಲಿನ ಅಧಿಕಾರಿಗಳು ಬೇಡಿಕೆ ಇಟ್ಟಿದ್ದರು. ಈ ಕುರಿತು ಉದ್ಯಮಿ ಸಿಬಿಐ ಬೆಂಗಳೂರು ಕಚೇರಿಗೆ ದೂರು ನೀಡಿದ್ದರು' ಎಂದು ತನಿಖಾ ಸಂಸ್ಥೆಯ ಅಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರ ಚಾಮರಾಜಪೇಟೆಯಲ್ಲಿರುವ ಕಚೇರಿಯಲ್ಲಿ ದೂರುದಾರರ ಜತೆ ಮಾತುಕತೆ ನಡೆಸಿದ ಆರೋಪಿ ಪುನಃ ಲಂಚಕ್ಕೆ ಒತ್ತಾಯಿಸಿದರು. ₹8,500 ಪಡೆಯುತ್ತಿದ್ದಾಗ ದಾಳಿಮಾಡಿದ ಸಿಬಿಐ ಅಧಿಕಾರಿಗಳ ತಂಡ ಶಶಿಕಾಂತ್ ಅವರನ್ನು ಬಂಧಿಸಿದೆ. ಪ್ರಕರಣದಲ್ಲಿ ಇತರ ಅಧಿಕಾರಿಗಳ ಪಾತ್ರದ ಕುರಿತು ತನಿಖೆ ನಡೆಯುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಅಧಿಕಾರಿಯ ಮನೆ ಸೇರಿದಂತೆ ಬೆಂಗಳೂರಿನ ಎರಡು ಹಾಗೂ ಮಹಾರಾಷ್ಟ್ರದ ಒಂದು ಸ್ಥಳದಲ್ಲಿ ಶೋಧ ನಡೆಸಲಾಗಿದೆ. ಹಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದು, ತನಿಖೆ ಮುಂದುವರಿದಿದೆ ಎಂದು ಸಿಬಿಐ ಮೂಲಗಳು ಹೇಳಿವೆ.

ಗೌರಿ ಹತ್ಯೆ ಪ್ರಕರಣ: ಸಾಕ್ಷ್ಯಗಳ ಪಟ್ಟಿ ಸಲ್ಲಿಕೆ

ಬೆಂಗಳೂರು: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಶನಿವಾರ ಬೆಂಗಳೂರು ನಗರ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಸಾಕ್ಷ್ಯಗಳ ಪಟ್ಟಿ ಸಲ್ಲಿಸಿದರು.

ಇದಕ್ಕೆ ಪ್ರತಿಯಾಗಿ ಆರೋಪಿಗಳ ಪರ ವಕೀಲರು ತನಿಖೆಯ ಭಾಗವೆನಿಸಿರುವ ಎಲೆಕ್ಟ್ರಾನಿಕ್ ಸಾಕ್ಷ್ಯಗಳ ಪಟ್ಟಿಯ ಪ್ರತಿ ನೀಡುವಂತೆ ಮನವಿ ಸಲ್ಲಿಸಿದರು. ಈ ಮನವಿಗೆ ಏನಾದರೂ ಆಕ್ಷೇಪಣೆ ಇದ್ದರೆ ಸಲ್ಲಿಸಿ ಎಂದು ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 6ಕ್ಕೆ ಮುಂದೂಡಿದೆ.

ಪ್ರಕರಣದ ವಿಚಾರಣೆಯನ್ನು ಬೆಂಗಳೂರು ನಗರ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ ಇದೇ ಜುಲೈ 4 ರಿಂದ 8ರವರೆಗೆ ನಿತ್ಯವೂ ನಡೆಸಲಿದೆ. ಗೌರಿ ಅವರನ್ನು 2017ರ ಸೆಪ್ಟೆಂಬರ್ 5ರಂದು ರಾಜರಾಜೇಶ್ವರಿ ನಗರದಲ್ಲಿನ ಅವರ ಮನೆಯ ಹೊರಗೆ ಆಗುಂತಕರು ಗುಂಡಿಟ್ಟು ಹತ್ಯೆ ಮಾಡಿದ್ದರು.

ಪೌಷ್ಟಿಕ ಆಹಾರ ಸೇವಿಸಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಬೈಕ್ ಕಳ್ಳನ ಬಂಧಿಸಿದ ಬೇಗೂರು ಠಾಣೆಯ ಪೊಲೀಸರು

45 ವಾಹನ ಕದ್ದೊಯ್ದು ಆಂಧ್ರದಲ್ಲಿ ಮಾರಾಟ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನಗಳನ್ನು ಕದ್ದು ಆಂಧ್ರಪ್ರದೇಶದಲ್ಲಿ ಮಾರಾಟ ಮಾಡುತ್ತಿದ್ದ ಆರೋಪಿ ಹನುಮಂತ ರೆಡ್ಡಿಯನ್ನು ಬೇಗೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶ ನಿವಾಸಿ ಹನುಮಂತ, ಆಗಾಗ ಬೆಂಗಳೂರಿಗೆ ಬಂದು ದ್ವಿಚಕ್ರ ವಾಹನಗಳನ್ನು ಕದ್ದೊಯ್ಯುತ್ತಿದ್ದ. ಆತನಿಂದ ಲಕ್ಷಾಂತರ ರೂಪಾಯಿ ಮೌಲ್ಯದ 45 ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ ಆರೋಪಿ, ಅದರಿಂದ ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದ. ರಾತ್ರಿ ಮಾತ್ರ ಬೆಂಗಳೂರಿಗೆ ಬರುತ್ತಿದ್ದ ಆತ, ಮನೆ ಮುಂದೆ ಹಾಗೂ ಸಾರ್ವಜನಿಕ ಸ್ಥಳದಲ್ಲಿ ನಿಲ್ಲಿಸುತ್ತಿದ್ದ ವಾಹನಗಳನ್ನು ಕದ್ದು ವಾಪಸು ಊರಿಗೆ ಹೋಗುತ್ತಿದ್ದ. ಸಂಬಂಧಿಕರ ವಾಹನವೆಂದು ಹೇಳಿ ಸ್ಥಳೀಯರಿಗೆ ಮಾರುತ್ತಿದ್ದ.'

'ವಾಹನಗಳ ದಾಖಲೆ ನೀಡುವಂತೆ ಸ್ಥಳೀಯರು ಕೇಳುತ್ತಿದ್ದರು. ಕೆಲದಿನ ಬಿಟ್ಟು ದಾಖಲೆ ನೀಡುವುದಾಗಿ ಹೇಳುತ್ತಿದ್ದ ಆರೋಪಿ, ಆ ನಂತರ ಸ್ಥಳೀಯರಿಂದ ತಪ್ಪಿಸಿಕೊಂಡು ಓಡಾಡುತ್ತಿದ್ದ. ಆರೋಪಿಯನ್ನು ಬಂಧಿಸುತ್ತಿದ್ದಂತೆ ಸ್ಥಳೀಯರ ಬಳಿ ಹೋಗಿ ವಾಹನಗಳನ್ನು ಜಪ್ತಿ ಮಾಡಿಕೊಂಡು ಬರಲಾಗಿದೆ. ಅವರಿಂದಲೂ ಹೇಳಿಕೆ ಪಡೆಯಲಾಗಿದೆ.'



ಆರೋಪಿಯಿಂದ ಜಪ್ತಿ ಮಾಡಲಾದ ಬೈಕ್‌ಗಳು ಹಾಗೂ ಬೇಗೂರು ಪೊಲೀಸರ ತಂಡ

'ಬೇಗೂರು, ಮಡಿವಾಳ, ಎಲೆಕ್ಟ್ರಾನಿಕ್ ಸಿಟಿ, ಬೊಮ್ಮನಹಳ್ಳಿ, ಬಂಡೇಪಾಳ್ಯ, ಮಾರತ್ತಹಳ್ಳಿ, ಪುಟ್ಟೇನಹಳ್ಳಿ, ಸುಬ್ರಮಣ್ಯಪುರ, ಹೆಬ್ಬಗೋಡಿ, ಕುಂಬಳಗೋಡು, ವರ್ತೂರು ಠಾಣೆ ವ್ಯಾಪ್ತಿಯಲ್ಲಿ ಆರೋಪಿ ಕೃತ್ಯ ಎಸಗಿದ್ದ. ಈತನ ಪತ್ತೆಗಾಗಿ ವಿಶೇಷ ತಂಡ ರಚಿಸಲಾಗಿತ್ತು' ಎಂದು ಹೇಳಿದರು.

'ಬೈಕ್ ಕದ್ದೊಯ್ಯುತ್ತಿದ್ದ ದೃಶ್ಯ ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ವಿಳಾಸ ಪತ್ತೆ ಮಾಡಿ ಆಂಧ್ರಪ್ರದೇಶಕ್ಕೆ ಹೋಗಿದ್ದ ವಿಶೇಷ ತಂಡ, ಆರೋಪಿಯನ್ನು ಬಂಧಿಸಲಾಗಿದೆ' ಎಂದರು.

ಆ್ಯಸಿಡ್ ದಾಳಿ: ಆರೋಪಿ ಸಮೇತ ಮಹಜರು

ಬೆಂಗಳೂರು: 24 ವರ್ಷದ ಯುವತಿ ಮೇಲೆ ಆ್ಯಸಿಡ್ ಎರಚಿದ್ದ ಪ್ರಕರಣ ಸಂಬಂಧ ಕಾಮಾಕ್ಷಿಪಾಳ್ಯ ಪೊಲೀಸರು ಘಟನಾ ಸ್ಥಳದಲ್ಲಿ ಶನಿವಾರ ಮಹಜರು ಪ್ರಕ್ರಿಯೆ ನಡೆಸಿದರು.

ಪ್ರಕರಣದಡಿ ಬಂಧಿಸಲಾಗಿರುವ ಆರೋಪಿ ನಾಗೇಶ್ ಬಾಬು (30) ಸಮೇತ ಸ್ಥಳಕ್ಕೆ ಭೇಟಿ ನೀಡಿದ್ದ ಪೊಲೀಸರು, ಕೃತ್ಯದ ಬಗ್ಗೆ ಆತನಿಂದಲೇ ಮಾಹಿತಿ ಪಡೆದುಕೊಂಡರು. ಘಟನೆಯನ್ನು ಮರು ಸೃಷ್ಟಿಸಿ ವಿಡಿಯೊ ಚಿತ್ರೀಕರಣ ಮಾಡಿಕೊಂಡರು.

'ಸುಂಕದಕಟ್ಟೆ ಬಳಿಯ ಫೈನಾನ್ಸ್ ಕಂಪನಿಯೊಂದರ ಕಚೇರಿ ಬಳಿ ಏಪ್ರಿಲ್ 28ರಂದು ಯುವತಿ ಹೊರಟಿದ್ದರು. ತನ್ನನ್ನು ಪ್ರೀತಿಸಲಿಲ್ಲವೆಂಬ ಕಾರಣಕ್ಕೆ ಕೋಪಗೊಂಡಿದ್ದ ಆರೋಪಿ, ಆ್ಯಸಿಡ್ ಎರಚಿ ಪರಾರಿಯಾಗಿದ್ದ. ಕೆಲ ದಿನಗಳ ಹಿಂದೆಯಷ್ಟೇ ತಮಿಳುನಾಡಿನ ಆಶ್ರಮವೊಂದರಲ್ಲಿ ಆರೋಪಿ ಸಿಕ್ಕಿಬಿದ್ದಿದ್ದ. ಮೇ 14ರಂದು ಆರೋಪಿಯನ್ನು ಕರೆತರುವ ವೇಳೆ ಪರಾರಿಯಾಗಲು ಯತ್ನಿಸಿದಾಗ ಆತನ ಕಾಲಿಗೆ ಗುಂಡು ಹಾರಿಸಲಾಗಿತ್ತು. ಆರೋಪಿ ಗುಣಮುಖನಾದ ಬಳಿಕ ಸ್ಥಳಕ್ಕೆ ಕರೆದುಕೊಂಡು ಹೋಗಿ ಮಹಜರು ಮಾಡಲಾಯಿತು' ಎಂದರು.

ಹಶೀಷ್ ಮಾರುತ್ತಿದ್ದವರಿಗೆ 10 ವರ್ಷ ಜೈಲು

ಬೆಂಗಳೂರು: ಹಶೀಷ್ ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ಭಾಗಿಯಾಗಿದ್ದ ಇಬ್ಬರು ಅಪರಾಧಿಗಳಿಗೆ 10 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿ ನಗರದ ಎನ್‌ಡಿಪಿಎಸ್ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿದೆ.

ಕೇರಳದ ಜಾನ್ಸನ್ ಜೋಸೆಫ್ (31) ಹಾಗೂ ಬಿಜು ಅಬ್ರಾಹಂ (38) ಶಿಕ್ಷೆಗೆ ಗುರಿಯಾದವರು. ಇವರ ವಿರುದ್ಧ ಸುದ್ದಗುಂಟೆಪಾಳ್ಯ ಠಾಣೆಯಲ್ಲಿ 2017ರ ಜುಲೈ 7ರಂದು ಪ್ರಕರಣ ದಾಖಲಾಗಿತ್ತು.

'ತಾವರಕೆರೆ ಮುಖ್ಯರಸ್ತೆಯಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಪರಿಚಿತ ಗ್ರಾಹಕರಿಗೆ ಹಶೀಷ್ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಪೊಲೀಸರ ತಂಡ, ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿತ್ತು. 6 ಕೆ.ಜಿ 377 ಗ್ರಾಂ ಹಶೀಷ್ ಜಪ್ತಿ ಮಾಡಿತ್ತು' ಎಂದು ಪೊಲೀಸರು ಹೇಳಿದರು.

'ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯ ಆರೋಪಿಗಳಿಗೆ ಶಿಕ್ಷೆ ವಿಧಿಸಿದೆ. ಪಬ್ಲಿಕ್ ಪ್ರಾಸಿಕ್ಯೂಟರ್ ಬಶೀರ್ ಅಹ್ಮದ್ ಮಕಾಂದರ್ ವಾದಿಸಿದ್ದರು' ಎಂದರು.

ಆನ್‌ಲೈನ್ ಮದ್ಯ: ₹ 89,545 ಕಳೆದುಕೊಂಡ

ಬೆಂಗಳೂರು: ಆನ್‌ಲೈನ್ ಮೂಲಕ ಮದ್ಯ ಖರೀದಿಸಲು ಮುಂದಾಗಿದ್ದ ನಗರದ ನಿವಾಸಿಯೊಬ್ಬರು ₹ 89,545 ಕಳೆದುಕೊಂಡಿದ್ದು, ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದಾರೆ.

'ಜೆ.ಪಿ.ನಗರ 4ನೇ ಹಂತದ ನಿವಾಸಿ ಶ್ರೀರಾಮ್ ಅವರಿಗೆ ವಂಚನೆ ಆಗಿದೆ. ಅವರು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಆನ್‌ಲೈನ್ ಮದ್ಯ ಮಾರಾಟ ಮಳಿಗೆಗಾಗಿ ಜಾಲತಾಣವೊಂದರಲ್ಲಿ ಹುಡುಕಾಟ ನಡೆಸಿದ್ದರು. ಅಲ್ಲಿ ದೂರೆತ ಮೊಬೈಲ್ ಸಂಖ್ಯೆಗೆ ಕರೆ ಮಾಡಿ, ಮದ್ಯ ಕಾಯ್ದಿರಿಸಿದ್ದರು. ಮದ್ಯವನ್ನು ಕಳುಹಿಸುವುದಾಗಿ ಹೇಳಿದ್ದ ಆರೋಪಿಗಳು, ಡೆಬಿಟ್ ಕಾರ್ಡ್ ಹಾಗೂ ಒಟಿಪಿ ಪಡೆದುಕೊಂಡಿದ್ದರು. ನಂತರ, ದೂರುದಾರರ ಎಚ್‌ಡಿಎಫ್‌ಸಿ ಬ್ಯಾಂಕ್ ಖಾತೆಯಿಂದ ಹಂತ ಹಂತವಾಗಿ ₹ 89,545 ಕಡಿತವಾಗಿದೆ' ಎಂದೂ ತಿಳಿಸಿದರು.

'ಅಸ್ಸಾಂ ಸಿ.ಎಂ ಪತ್ನಿಯ ಕಂಪನಿಗೆ ಪಿಪಿಇ ಕಿಟ್ ಖರೀದಿ ಗುತ್ತಿಗೆ'

ನವದೆಹಲಿ(ಪಿಟಿಐ): ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಕೋವಿಡ್–19 ಸಂದರ್ಭದಲ್ಲಿ ಪಿಪಿಇ ಕಿಟ್ ಖರೀದಿಸುವ ಗುತ್ತಿಗೆಯನ್ನು ತಮ್ಮ ಸಂಬಂಧಿಗಳಿಗೆ ನೀಡಿದ್ದರು ಎಂದು ದೆಹಲಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಶನಿವಾರ ಆರೋಪಿಸಿದ್ದಾರೆ.

ಸಿಸೋಡಿಯಾ ಅವರು ಪತ್ರಿಕಾಗೋಷ್ಠಿಯಲ್ಲಿ ಶರ್ಮಾ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ. ಅಸ್ಸಾಂ ಆರೋಗ್ಯ ಸಚಿವರಾಗಿದ್ದ ಶರ್ಮಾ, 2020ರಲ್ಲಿ ಪಿಪಿಇ ಕಿಟ್‌ಗಳನ್ನು ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ಮೊತ್ತಕ್ಕೆ ಸರಬರಾಜು ಮಾಡುವಂತೆ ತಮ್ಮ ಪತ್ನಿ ಹಾಗೂ ಮಗನ ಉದ್ಯಮ ಪಾಲುದಾರರ ಕಂಪನಿಗಳಿಗೆ ಗುತ್ತಿಗೆ ನೀಡಿದ್ದರು ಎಂದು ಅವರು ದೂರಿದ್ದಾರೆ.

ಮಾಧ್ಯಮಗಳ ವರದಿಯನ್ನು ಉಲ್ಲೇಖಿಸಿ ಮಾತನಾಡಿರುವ ದೆಹಲಿ ಉಪಮುಖ್ಯಮಂತ್ರಿ, ಅಸ್ಸಾಂ ಸರ್ಕಾರವು ಬೇರೆ ಕಂಪೆನಿಗಳ ಕಿಟ್‌ಗಳಿಗೆ ತಲಾ ₹600 ನೀಡಿ ಖರೀದಿಸುತ್ತಿತ್ತು. ಆದರೆ, ಕೋವಿಡ್ ತುರ್ತುಪರಿಸ್ಥಿತಿಯ ಲಾಭ ಪಡೆಯುವ ದೃಷ್ಟಿಯಿಂದ ಬಿಸ್ವ ಶರ್ಮಾ ಅವರು ತಮ್ಮ ಮಗ ಮತ್ತು ಹೆಂಡತಿಯ ಉದ್ಯಮ ಪಾಲುದಾರರ ಕಂಪೆನಿಗಳಿಗೆ ಪ್ರತಿ ಕಿಟ್‌ಗೆ ₹990 ನೀಡಿ ತುರ್ತಾಗಿ ಸರಬರಾಜು ಮಾಡುವಂತೆ ಆದೇಶಿಸಿದ್ದರು' ಎಂದು ಗಂಭೀರ ಆರೋಪ ಮಾಡಿದ್ದಾರೆ.

'ಕಿಟ್ ಸರಬರಾಜು ಮಾಡದ ಕಾರಣ ಶರ್ಮಾ ಅವರ ಹೆಂಡತಿ ಪಾಲುದಾರರಾಗಿರುವ ಕಂಪೆನಿಯ ಗುತ್ತಿಗೆ ರದ್ದು ಮಾಡಲಾಗಿತ್ತು. ಆದರೆ, ಅವರ ಮಗನ ಉದ್ಯಮ ಪಾಲುದಾರರ ಕಂಪೆನಿಯ ಪ್ರತಿ ಕಿಟ್‌ಗೆ ₹ 1,680 ರಂತೆ ಗುತ್ತಿಗೆ ನೀಡಲಾಗಿತ್ತು' ಎಂದರು.

'ಬೈಕಾಯಿನ್' ಆ್ಯಪ್: ₹ 14 ಲಕ್ಷ ವಂಚನೆ

ಬೆಂಗಳೂರು: 'ಬೈಕಾಯಿನ್' ಷೇರು ವ್ಯವಹಾರ ಆ್ಯಪ್‌ನಲ್ಲಿ ₹ 14 ಲಕ್ಷ ಹೂಡಿಕೆ ಮಾಡಿಸಿಕೊಂಡು ವಂಚಿಸಲಾಗಿದ್ದು, ಈ ಬಗ್ಗೆ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಪದ್ಮನಾಭನಗರ ನಿವಾಸಿ ಯೋಗೀಶ್ ಕುಮಾರ್ ಎಂಬುವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತ ವ್ಯಕ್ತಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಫೇಸ್‌ಬುಕ್ ಬೈಕಾಯಿನ್ ಆ್ಯಪ್ ಜಾಹೀರಾತು ನೋಡಿದ್ದ ಯೋಗೀಶ್, ಅದರಲ್ಲಿದ್ದ ಮೊಬೈಲ್ ಸಂಖ್ಯೆಗೆ ಕರೆ ಮಾಡಿ, ಹೂಡಿಕೆ ಬಗ್ಗೆ ವಿಚಾರಿಸಿದ್ದರು. ಸೈಮನ್ ಎಂಬಾತ, ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ನೀಡಲಾಗುವುದು ಎಂಬ ಮಾತನ್ನು ನಂಬಿದ್ದ ದೂರುದಾರ, ಹಂತ ಹಂತವಾಗಿ ₹14 ಲಕ್ಷ ನೀಡಿದ್ದರರು' ಎಂದು ತಿಳಿಸಿದರು.

ನಿವೇಶನ ಆಮಿಷವೊಡ್ಡಿ ವಂಚನೆ: ನಿರ್ಮಾಪಕ ಬಂಧನ

ಬೆಂಗಳೂರು: ನಿವೇಶನ ನೀಡುವ ಆಮಿಷವೊಡ್ಡಿ ಸಾರ್ವಜನಿಕರಿಂದ ಹಣ ಪಡೆದು ವಂಚಿಸಿದ ಆರೋಪದಡಿ ಸಿನಿಮಾ ನಿರ್ಮಾಪಕ ಸೇರಿ ನಾಲ್ವರನ್ನು ರಾಜಾಜಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಂಜುನಾಥ್, ಶಿವಕುಮಾರ್, ಚಂದ್ರಶೇಖರ್ ಹಾಗೂ ಗೋಪಾಲ್ ಬಂಧಿತರು. ಹಣ ಕಳೆದುಕೊಂಡಿದ್ದ ಪುಷ್ಪಕುಮಾರ್ ಎಂಬುವರು ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಿನಿಮಾ ನಿರ್ಮಾಪಕ ಮಂಜುನಾಥ್, 2015ರಲ್ಲಿ ನಟ ಕೋಮಲ್ ಅಭಿನಯದ 'ಲೊಡ್ಡೆ' ಸಿನಿಮಾ ನಿರ್ಮಿಸಿದ್ದರು. ಆದರೆ, ಸಿನಿಮಾ ಯಶಸ್ವಿಯಾಗಿರಲಿಲ್ಲ. ಇದರಿಂದಾಗಿ ಲಕ್ಷಾಂತರ ರೂಪಾಯಿ ನಷ್ಟವಾಗಿತ್ತು. ಇದರಿಂದ ಮಂಜುನಾಥ್ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರು. 'ಪುನಃ ಹಣ ಸಂಪಾದನೆಗಾಗಿ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಇಳಿದಿದ್ದ ಮಂಜುನಾಥ್, 'ಈಗಲ್ ಟ್ರೀ ಬಿಲ್ಡರ್ಸ್ ಆ್ಯಂಡ್ ಡೆವಲಪರ್ಸ್' ಹೆಸರಿನಲ್ಲಿ ಕಂಪನಿ ಆರಂಭಿಸಿದ್ದ. ರಾಜಾಜಿನಗರದಲ್ಲಿ ಕಚೇರಿಯನ್ನೂ ತೆರೆದಿದ್ದ. ಬೆಂಗಳೂರು ಸುತ್ತಮುತ್ತಲ ಪ್ರದೇಶಗಳಲ್ಲಿ ನಿವೇಶನ ಅಭಿವೃದ್ಧಿಪಡಿಸಿರುವುದಾಗಿ ಜಾಹೀರಾತು ನೀಡಿದ್ದ' ಎಂದೂ ಮೂಲಗಳು ತಿಳಿಸಿವೆ.

'ಜಾಹೀರಾತು ನೋಡಿದ್ದ ಪುಷ್ಪಕುಮಾರ್, ಕಚೇರಿಗೆ ಭೇಟಿ ನೀಡಿದ್ದರು. ನಿವೇಶನ ಖರೀದಿ ಬಗ್ಗೆ ಮಾತುಕತೆ ನಡೆಸಿದ್ದರು. ಬೆಂಗಳೂರು ಹೊರವಲಯದಲ್ಲಿರುವ ಅಪರಿಚಿತರ ಜಾಗ ತೋರಿಸಿದ್ದ ಆರೋಪಿಗಳು, ತಮ್ಮದೇ ಜಾಗವೆಂದು ಹೇಳಿಕೊಂಡಿದ್ದರು. ಅದನ್ನು ನಂಬಿದ್ದ ಪುಷ್ಪಕುಮಾರ್, ₹2 ಲಕ್ಷ ಮುಂಗಡ ಹಣ ನೀಡಿದ್ದರು. ಕೆಲ ದಿನಗಳ ನಂತರ ಆರೋಪಿಗಳ ಬಗ್ಗೆ ಅನುಮಾನ ಬಂದಿತ್ತು. ನಿವೇಶನ ದಾಖಲೆಗಳನ್ನು ಪರಿಶೀಲಿಸಿದಾಗ ಆರೋಪಿಗಳ ಕೃತ್ಯ ಬಯಲಾಗಿದೆ' ಎಂದೂ ಹೇಳಿದರು.

'ಕಂಪನಿ ಹೆಸರಿನಲ್ಲಿ ಯಾವುದೇ ನಿವೇಶನ ಅಭಿವೃದ್ಧಿಪಡಿಸಿರಲಿಲ್ಲ. ಯಾರದ್ದೂ ನಿವೇಶನವನ್ನು ಗ್ರಾಹಕರಿಗೆ ತೋರಿಸಿ ಆರೋಪಿಗಳು ವಂಚಿಸುತ್ತಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ' ಎಂದೂ ತಿಳಿಸಿದರು.

ಬೈಕ್ ಸವಾರ ಸಾವು

ನೆಲಮಂಗಲ: ಸಮೀಪದ ಅಡಕಿಮಾರನಹಳ್ಳಿಯಲ್ಲಿ ದ್ವಿಚಕ್ರವಾಹನ ಸವಾರರೊಬ್ಬರ ಮೇಲೆ ಶನಿವಾರ ಬೆಳಿಗ್ಗೆ ಕಾಂಕ್ರೀಟ್ ಅವಶೇಷಗಳು ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸಿಮೆಂಟ್ ಹೆಬ್ಬಾಗಿಲಿಗೆ ಕ್ಯಾಂಟರ್ ಡಿಕ್ಕಿಯಾಗಿ, ಬೈಕ್ ಚಾಲಕನ ಮೇಲೆ ಕಾಂಕ್ರೀಟ್ ಅವಶೇಷಗಳು ಬಿದ್ದವೆ. ಪರಿಣಾಮ ಸವಾರ ನರಸಪ್ಪ ಮೃತಪಟ್ಟಿದ್ದಾರೆ. ರಾತ್ರಿ ಪಾಳಿಯ ಕೆಲಸ ಮುಗಿಸಿಕೊಂಡು ಮನೆಗೆ ಹೋಗುವಾಗ ಈ ಘಟನೆ ಸಂಭವಿಸಿದೆ. ಅವಶೇಷಗಳ ಅಡಿಯಲ್ಲಿ ಸಿಲುಕಿದ್ದು ಮೃತದೇಹವನ್ನು ಜೆಸಿಬಿ ಬಳಸಿ ಹೊರತೆಗೆಯಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಹಣ ದ್ವಿಗುಣ ಆಮಿಷವೊಡ್ಡಿ ₹71.90 ಲಕ್ಷ ವಂಚನೆ

ಬೆಂಗಳೂರು: ಹಣ ದ್ವಿಗುಣಗೊಳಿಸುವ ಆಮಿಷವೊಡ್ಡಿದ್ದ ಸೈಬರ್ ವಂಚಕರು, ನಗರದ ನಿವಾಸಿಯೊಬ್ಬರಿಂದ ₹ 71.90 ಲಕ್ಷ ಪಡೆದು ವಂಚಿಸಿದ್ದಾರೆ. ಈ ಬಗ್ಗೆ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಹೊಸಕೆರೆಹಳ್ಳಿ ನಿವಾಸಿ ಪ್ರಕಾಶ್ ಎಂಬುವರು ಇತ್ತೀಚೆಗೆ ದೂರು ನೀಡಿದ್ದಾರೆ. ಅದರನ್ವಯ ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಟೆಲಿಗ್ರಾಮ್ ಆ್ಯಪ್‌ನಲ್ಲಿ 'ಫೈವ್–ಎಕ್ಸ್ ಅಡ್ವಾನ್ಸ್ ಟ್ರೇಡಿಂಗ್ ಟೀಮ್' ಹೆಸರಿನ ಗ್ರೂಪ್ ಸೃಷ್ಟಿಸಿದ್ದ ಆರೋಪಿಗಳು, ದೂರುದಾರ ಪ್ರಕಾಶ್ ಅವರ ಮೊಬೈಲ್ ಸಂಖ್ಯೆ ಸೇರಿಸಿದ್ದರು. 'ಕಡಿಮೆ ಅವಧಿಯಲ್ಲಿ ಹಣ ದುಪ್ಪಟ್ಟು ಮಾಡಲಾಗುವುದು' ಎಂಬ ಸಂದೇಶಗಳನ್ನು ಗ್ರೂಪ್‌ನಲ್ಲಿ ಹರಿಬಿಡುತ್ತಿದ್ದರು. ಅಂಥ ಸಂದೇಶ ಗಮನಿಸಿದ್ದ ದೂರುದಾರ, ಹಣ ಹೂಡಿಕೆ ಬಗ್ಗೆ ಆಸಕ್ತಿ ಬೆಳೆಸಿಕೊಂಡಿದ್ದರು.'

'ಹೂಡಿಕೆ ಮಾಡಲು ಮುಂದಾಗಿದ್ದ ದೂರುದಾರ, ಆರೋಪಿಗಳು ಹೇಳಿದ ರೀತಿಯಲ್ಲಿ ವೈಯಕ್ತಿಕ ಮಾಹಿತಿ ನೀಡಿ ಖಾತೆ ತೆರೆದಿದ್ದರು. ಆರಂಭದಲ್ಲಿ ₹ 5,000 ಮಾತ್ರ ಹೂಡಿಕೆ ಮಾಡಿದ್ದರು. ಅದಕ್ಕೆ ಯಾವುದೇ ಲಾಭ ಬಂದಿರಲಿಲ್ಲ. ಇದಾದ ನಂತರವೂ ಆರೋಪಿಗಳು, 'ಪುನಃ ಹೂಡಿಕೆ ಮಾಡಿ. ಖಂಡಿತ ದುಪ್ಪಟ್ಟು ಹಣ ಬರುತ್ತದೆ' ಎಂದು ನಾನಾ ರೀತಿಯಲ್ಲಿ ಆಮಿಷವೊಡ್ಡಿದ್ದರು. ಅದನ್ನು ನಂಬಿದ್ದ ದೂರುದಾರ, ಹಂತ ಹಂತವಾಗಿ ₹ 71.90 ಲಕ್ಷ ಹೂಡಿಕೆ ಮಾಡಿದ್ದರು' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಹೂಡಿಕೆ ಮಾಡಿದ್ದ ಹಣಕ್ಕೆ ಆರೋಪಿಗಳು ಯಾವುದೇ ಲಾಭ ನೀಡಿರಲಿಲ್ಲ. ಬೇಸತ್ತ ದೂರುದಾರ, ಅಸಲು ಹಣ ವಾಪಸು ಕೇಳಿದ್ದರು. ಅದಕ್ಕೂ ಆರೋಪಿಗಳು ಪ್ರತಿಕ್ರಿಯಿಸಿರಲಿಲ್ಲ' ಎಂದು ಹೇಳಿವೆ.



ಯಲಹಂಕ ಬಳಿ ಶ್ರೀ ಕೃಷ್ಣದೇವರಾಯ ಶಿಕ್ಷಣ ದತ್ತಿ ವತಿಯಿಂದ ನಿರ್ಮಿಸಿರುವ ವಿದ್ಯಾಗಣಪತಿ ದೇವಾಲಯದ ಕುಂಭಾಭಿಷೇಕ ಪ್ರತಿಷ್ಠಾಪನೆಯನ್ನು ಶೃಂಗೇರಿ ಶಾರದಾಪೀಠಾಧೀಶ್ವರ ವಿಧುಶೇಖರ ಭಾರತೀ ಸ್ವಾಮೀಜಿ ನೆರವೇರಿಸಿದರು. ಸಂಸ್ಥೆಯ ಅಧ್ಯಕ್ಷ ಎ.ಸಿ.ಚಂದ್ರಶೇಖರ್ ರಾಜು, ಉಪಾಧ್ಯಕ್ಷ ಶೇಖರ್ ರಾಜು, ಕಾರ್ಯದರ್ಶಿ ಶ್ಯಾಮ್ ರಾಜು, ಖಜಾಂಚಿ ವೆಂಕಟರಮಣರಾಜು ಹಾಗೂ ಎಲ್ ಕೆ.ರಾಜು, ಕೆ. ಗೋಪಾಲ ರಾಜು ಉಪಸ್ಥಿತರಿದ್ದರು

ಮೂರು ತಿಂಗಳಲ್ಲಿ ಮದ್ಯದ ನಶೆ ಜೋರು!

ಒಂದನೇ ಪುಟದಿಂದ

'ಇದರಿಂದ ಅಬಕಾರಿ ಇಲಾಖೆಗೆ ವರಮಾನ ನಿರೀಕ್ಷೆಗಿಂತ ಹೆಚ್ಚಿನ ವರಮಾನ ಸಂಗ್ರಹವಾಗಿದೆ. ಮಾರ್ಚ್‌ನಲ್ಲಿ ₹2,600 ಕೋಟಿ, ಏಪ್ರಿಲ್‌ನಲ್ಲಿ ₹2,402 ಕೋಟಿ, ಮೇ ತಿಂಗಳಿನಲ್ಲಿ ₹2,276 ಕೋಟಿ ಸಂಗ್ರಹವಾಗಿದೆ. ಕಳೆದ ವರ್ಷದ ಏಪ್ರಿಲ್ ಮತ್ತು ಮೇ ತಿಂಗಳ ವರಮಾನಕ್ಕೆ ಹೋಲಿಸಿದರೆ ಎರಡೇ ತಿಂಗಳಲ್ಲಿ ₹1,001 ಕೋಟಿ ಹೆಚ್ಚುವರಿ ವರಮಾನ ಸಂಗ್ರಹವಾಗಿದ್ದು, ಶೇ 27.25ರಷ್ಟು ವರಮಾನ ಹೆಚ್ಚಾಗಿದೆ' ಎಂದು ಅಬಕಾರಿ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

2017–18, 2018–19ನೇ ಸಾಲಿನಲ್ಲಿ ಬಿಯರ್ ಮಾರಾಟ ಕ್ರಮವಾಗಿ ಶೇ 8.83 ಮತ್ತು ಶೇ 13.20ರಷ್ಟು ಏರಿಕೆಯಾಗಿತ್ತು. ಆದರೆ, 2019–20 ಮತ್ತು 2020–21ನೇ ಸಾಲಿನಲ್ಲಿ ಕ್ರಮವಾಗಿ ಶೇ 3.74 ಮತ್ತು ಶೇ 17.88ರಷ್ಟು ಇಳಿಕೆ ಕಂಡಿತ್ತು. 2021–22ನೇ ಸಾಲಿನಲ್ಲಿ ಬಿಯರ್ ಮಾರಾಟ ಶೇ 13.04 ರಷ್ಟು ಏರಿಕೆಯಾಗಿತ್ತು. ಪ್ರಸಕ್ತ ಸಾಲಿನಲ್ಲೂ ಬಿಯರ್ ಮಾರಾಟ ಕಳೆದ ಸಾಲಿಗಿಂತ ಹೆಚ್ಚಾಗುವ ಸಾಧ್ಯತೆ ಇದೆ ಎಂಬುದು ಅಬಕಾರಿ ಇಲಾಖೆಯ ನಿರೀಕ್ಷೆ.

ನೆಲದಡಿಯಲ್ಲಿ ವಿದ್ಯುತ್ ಪರಿವರ್ತಕ

ಒಂದನೇ ಪುಟದಿಂದ

'ಪಾದಚಾರಿ ಮಾರ್ಗದಲ್ಲಿ ನಾಲ್ಕು ಮೀಟರ್ ಅಡಿ ಆಳದಲ್ಲಿ ವಿದ್ಯುತ್ ಪರಿವರ್ತಕ ಅಳವಡಿಸಲಾಗುತ್ತಿದೆ. ಈ ವ್ಯವಸ್ಥೆಗೆ ಹೆಚ್ಚಿನ ಜಾಗದ ಅಗತ್ಯವಿಲ್ಲ. ಕಡಿಮೆ ಜಾಗದಲ್ಲಿ ಸುರಕ್ಷಿತವಾಗಿರುವ ವ್ಯವಸ್ಥೆ ಇದಾಗಿದೆ' ಎಂದು ಪ್ರತಿಪಾದಿಸುತ್ತಾರೆ.

'ವಿದ್ಯುತ್ ಪರಿವರ್ತಕವು ಸಂಪೂರ್ಣವಾಗಿ ಹವಾನಿಯಂತ್ರಣ ವ್ಯವಸ್ಥೆಯಲ್ಲಿ ಇರಲಿದೆ. ಪರಿ ವರ್ತಕ ಇರುವ ಸ್ಥಳದಲ್ಲಿ ತಾಪಮಾನ ಹೆಚ್ಚಾಗದ ರೀತಿಯ ತಂತ್ರಜ್ಞಾನ ಅಳವಡಿಸಲಾಗುತ್ತಿದೆ. ಅಗ್ನಿದುರಂತಗಳು ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಜತೆಗೆ, ಗಾಳಿಯ ವ್ಯವಸ್ಥೆಯೂ ಇರುತ್ತದೆ. ನೀರಿನ ಸಂಪು ಮಾದರಿಯಲ್ಲಿ ದಪ್ಪನೆಯ ಕಾಂಕ್ರೀಟ್‌ನ ನಾಲ್ಕು ಗೋಡೆಗಳನ್ನು ನಿರ್ಮಿಸಿ ವಿದ್ಯುತ್ ಪರಿವರ್ತಕ ಸ್ಥಾಪಿಸಲಾಗುತ್ತದೆ. ಇಲ್ಲಿ ಸ್ಲ್ಯಾಬ್ ಹಾಕುವುದರಿಂದ ನಾಗರಿಕರು ಯಾವುದೇ ರೀತಿಯ ತೊಂದರೆ ಇಲ್ಲದೆಯೇ ಈ ಸ್ಥಳದ ಮೇಲೆಯೇ ನಡೆದಾಡಬಹುದಾಗಿದೆ' ಎಂದು ವಿವರಿಸುತ್ತಾರೆ.

'ಸಾಮಾನ್ಯವಾಗಿ ಅಳವಡಿಸುವ 500 ಕೆವಿಎ ಸಾಮರ್ಥ್ಯದ ವಿದ್ಯುತ್ ಪರಿವರ್ತಕ್ಕೆ ಅಂದಾಜು ₹15 ಲಕ್ಷದವರೆಗೆ ವೆಚ್ಚವಾಗುತ್ತದೆ. ಈ ಪರಿವರ್ತಕಗಳಲ್ಲಿ ಆಯಿಲ್ ಬಳಸಲಾಗುತ್ತದೆ. ಆದರೆ, ನೆಲದಡಿಯಲ್ಲಿ ಅಳವಡಿಸುವ ವಿದ್ಯುತ್ ಪರಿವರ್ತಕಗಳಲ್ಲಿ (ಆರ್‌ಎಂಯು ಟ್ರಾನ್ಸ್‌ಫಾರ್ಮರ್) ಆಯಿಲ್ (ಡ್ರೈ ಮಾದರಿ) ಇರುವುದಿಲ್ಲ. ಇದರಿಂದ, ಹೆಚ್ಚು ಸುರಕ್ಷಿತವಾಗಿರುತ್ತದೆ' ಎಂದರು.

ಬೆಂಗಳೂರು ರೇಸ್

ಸೂಪರ್ ನ್ಯಾಚುರಲ್ ಗೆಲ್ಲುವ ನಿರೀಕ್ಷೆ

ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆ ಡಿ.ಟಿ ರೇಸಿಂಗ್ ಅಂಡ್ ಬ್ರೀಡಿಂಗ್ ಎಲ್‌ಎಲ್‌ಪಿ ಜುವೆನೈಲ್ ಮಿಲಿಯನ್ ರೇಸ್‌ನಲ್ಲಿ ಸೂಪರ್ ನ್ಯಾಚುರಲ್ ಮತ್ತು ದಿನದ ಇನ್ನೊಂದು ಪ್ರಮುಖ ರೇಸ್ ಕೆ.ಎನ್. ಗುರುಸ್ವಾಮಿ ಮೆಮೋರಿಯಲ್ ಕಪ್ ರೇಸ್‌ನಲ್ಲಿ ಸರ್ದಾರ್ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭ ವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1. ಎಂಡಾರ್ಸ್‌ಮೆಂಟ್ ಪ್ಲೇಟ್: 1400 ಮೀ.
ಆಲ್ಟೈರ್ 10, ಬ್ರಹ್ಮಾಸ್ತ್ರಮ್ 2, ಹೀಈಸ್ ದಿ ಒನ್ 7
2. ರಿಚೆಲಿಯೂ ಪ್ಲೇಟ್–ಡಿ.2; 1400 ಮೀ.
ಇನ್ ಎ ಬ್ರೀಝ್ 1, ಡ್ರಾಗನ್ಸ್ ಗೋಲ್ಸ್ 8, ಸ್ಟಾರ್‌ಡಾಮಿನೇಷನ್ 6
3. ಯಂಗ್ ರಜಪೂತ್ ಪ್ಲೇಟ್; 1600 ಮೀ.
ಸೈರೆನಿಯಸ್ 1, ಟ್ರಿಯಾಂಫಂಟ್ 4, ಸ್ಟಾರ್‌ಕೊಮೆಟ್ 7
4. ಕೆ.ಎನ್.ಗುರುಸ್ವಾಮಿ ಮೆಮೋರಿಯಲ್ ಕಪ್; 1600 ಮೀ.
ಸರ್ದಾರ್ 7, ಆಲ್ ಅಟ್ರ್ಯಾಕ್ಯನ್ 1, ಪ್ರೇಗ್ 4
5. ಡಿ ಟಿ. ರೇಸಿಂಗ್ ಆ್ಯಂಡ್ ಬ್ರೀಡಿಂಗ್ ಎಲ್‌ಎಲ್‌ಪಿ ಜುವೆನೈಲ್ ಮಿಲಿಯನ್ 1400 ಮೀ.
ಸೂಪರ್ ನ್ಯಾಚುರಲ್ 2, ಲಾಸ್ಟ್ ವಿಶ್ 1, ಅರ್ಕಾನ 3
6. ಅಸ್ಟೌಂಡಿಂಗ್ ಪ್ಲೇಟ್; 1200 ಮೀ.
ಐಸ್‌ಲ್ಯಾಂಡಿಕ್ 5, ಡೊಮಿನಾ 4, ಚುಲ್ ಬುಲ್ ರಾಣಿ 3
7. ರಿಚೆಲಿಯೂ ಪ್ಲೇಟ್–ಡಿ.1; 1400 ಮೀ.
ಓನ್ ಲೆಗಸಿ 3, ಪ್ರಿನ್ಸ್ ಅಬಿ ಆ1, ಮ್ಯೂರ್‌ಫೀಲ್ಡ್ 7

ಉತ್ತಮ ಬೆಟ್: ಇನ್ ಎ ಬ್ರೀಝ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

'ಪರಮಪೂಜ್ಯ ಹೆಡಗೇವಾರ್' ಭೈರಪ್ಪ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಪರಮಪೂಜ್ಯ ಹೆಡಗೇವಾರ್ ಅವರ ಭಾಷಣದಲ್ಲಿ ಏನು ಪ್ರಸ್ತುತತೆ ಇದೆ? ಅದನ್ನು ತೆಗೆದು ಬಿಡಿ ಎಂಬ ಆಗ್ರಹ ಎದ್ದಿದೆ. ಅದನ್ನು ತೆಗೆದು ಹಾಕುವುದು, ಇಟ್ಟುಕೊಳ್ಳುವುದು ಮುಖ್ಯವಲ್ಲ. ಅವರು ಏನು ಮಾಡಿದ್ದಾರೆ ಎಂಬುದಕ್ಕೆ ಪ್ರಧಾನಿ ನರೇಂದ್ರ ಮೋದಿ, ಪ್ರೊ.ನಂ.ವೆಂಕೋಬರಾಯರಂಥವರು ಕಣ್ಮುಂದೆ ಇದ್ದಾರೆ' ಎಂದು ಕಾದಂಬರಿಕಾರ ಎಸ್.ಎಲ್. ಭೈರಪ್ಪ ಇಲ್ಲಿ ಪ್ರತಿಪಾದಿಸಿದರು.

ಶನಿವಾರ ವೆಂಕೋಬರಾವ್ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ಈ ತಪ್ಪು, ಆ ತಪ್ಪು ಮಾಡಿದ್ದಾರೆ ಎಂದು ಇವತ್ತು ಏನು ಗದ್ದಲಗಳು ನಡೆಯುತ್ತಿವೆ, ಆ ಎಲ್ಲ ಗದ್ದಲಗಳಿಗೂ ಮೋದಿ, ವೆಂಕೋಬರಾಯರಂಥವರಲ್ಲಿ ಉತ್ತರ ಸಿಗುತ್ತದೆ. ಚರಿತ್ರೆಯನ್ನು ಓದದೇ ಬಾಯಿಗೆ ಬಂದಂತೆ ಮಾತಾಡುವ ಸಾಹಿತಿಗಳು ಚಳವಳಿಗಳನ್ನು ಮಾಡಿಕೊಂಡೇ ಇರಬೇಕಾಗುತ್ತದೆ' ಎಂದರು.

'ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ವಿವಿಧ ಹಂತಗಳಲ್ಲಿ ಕೆಲಸ ಮಾಡುತ್ತಿರುವವರು ನಿಜವಾದ ಸೇವಕರೇ ಹೊರತು, ಯಾವ ಅಧಿಕಾರವನ್ನೂ ಬಯಸಿದವರಲ್ಲ. ನರೇಂದ್ರ ಮೋದಿಯವರು ಪ್ರಧಾನಿಯಾದ ಬಳಿಕ ಸಂಸತ್ತಿನ ಹೊಸ್ತಿಲಿಗೆ ತಲೆ ಮುಟ್ಟಿಸಿ ನಮಸ್ಕರಿಸಿದ್ದರು. ಅದುವರೆಗೆ ಯಾವ ಪ್ರಧಾನಿಯೂ ಆ ಕೆಲಸ ಮಾಡಿರಲಿಲ್ಲ. ಪ್ರಧಾನಿಯಾಗುವ ಹಲವು ವರ್ಷಗಳ ಮುನ್ನ ಅಹಮದಾಬಾದ್ ರೈಲಿನ ಹವಾನಿಯಂತ್ರಿತ ಕೋಚ್‌ನಲ್ಲಿ ಐಆರ್‌ಎಸ್ ಮಹಿಳಾ ಅಧಿಕಾರಿಗಳಿಗೆ ಸ್ಥಳ ಬಿಟ್ಟು ಕೊಟ್ಟು ಮೋದಿ ನೆಲದ ಮೇಲೆ ಮಲಗಿದ್ದರು. ಅವರಲ್ಲಿ ಅಂಥ ಗುಣ, ಮನೋಧರ್ಮ ರೂಪಿಸಿದವರು ಹೆಡಗೇವಾರ್' ಎಂದರು.

'ಸರ್ಜಿಕಲ್ ಸ್ಟ್ರೈಕ್ ಮುಗಿಯುವವರೆಗೂ ಮೋದಿ ರಾತ್ರಿಯಿಡೀ ನಿದ್ದೆ ಮಾಡಿರಲಿಲ್ಲ. ಆದರೆ ನೆಹರೂ ಚೀನಾ ಯುದ್ಧದ ಸಂದರ್ಭದಲ್ಲಿ ಚೆನ್ನಾಗಿ ನಿದ್ದೆ ಮಾಡಿದ್ದರು. ಈ ಇಬ್ಬರ ನಡುವಿನ ವೈರುಧ್ಯವನ್ನು ಎಲ್ಲರೂ ಅರಿಯಬೇಕು' ಎಂದು ಪ್ರತಿಪಾದಿಸಿದರು.

'ದೇಶದ ಪ್ರತಿಯೊಬ್ಬರಲ್ಲೂ ಕೆಲವು ಮೂಲಭೂತವಾದ ಗುಣಗಳಿರಬೇಕು. ಆರ್‌ಎಸ್‌ಎಸ್‌ನ ಬಹಳಷ್ಟು ಸ್ವಯಂಸೇವಕರಿಗೆ ಇಂಥ ಗುಣಗಳು ಮೈಗೂಡಿರಲು ಹೆಡಗೇವಾರ್ ಕಾರಣ, ಅಂಥವರನ್ನು ರೂಪಿಸುವುದೇ ಇಂದು ಬಹಳ ಮುಖ್ಯ' ಎಂದರು.

ಶಿಕ್ಷಣ ಸಚಿವರ ವರದಿ ಒಪ್ಪುವುದಿಲ್ಲ: ಕಾಂಗ್ರೆಸ್ ಮುಖಂಡ ಕಿಮ್ಮನೆ ರತ್ನಾಕರ

'ಹೋರಾಟ ಮುಂದುವರಿಯಲಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಠ್ಯ ಪುಸ್ತಕ ಪರಿಷ್ಕರಣೆ ಗೊಂದಲದ ಕುರಿತಂತೆ ಸರ್ಕಾರದ ಕ್ರಮ ಸ್ವೀಕಾರಾರ್ಹವಲ್ಲ. ಹೀಗಾಗಿ, ಈ ವಿಚಾರದಲ್ಲಿ ಹೋರಾಟ ಮುಂದುವರಿಯಲಿದೆ' ಎಂದು ಕಾಂಗ್ರೆಸ್ ಮುಖಂಡ ಕಿಮ್ಮನೆ ರತ್ನಾಕರ್ ಹೇಳಿದರು.

ಪಕ್ಷದ ಶಾಸಕ ಪ್ರಿಯಾಂಕ್ ಖರ್ಗೆ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮುಖ್ಯಮಂತ್ರಿಗೆ ಶಿಕ್ಷಣ ಸಚಿವರು ಕೊಟ್ಟಿರುವ ವರದಿಯನ್ನು ನಾವು ಒಪ್ಪುವುದಿಲ್ಲ. ಹಳೆಯ ಪಠ್ಯ ಮುಂದುವರಿಸಿ, ಪರಿಷ್ಕರಣೆಗೆ ಹೊಸ ಸಮಿತಿ ರಚಿಸಬೇಕು' ಎಂದು ಆಗ್ರಹಿಸಿದರು.

'1 ರಿಂದ 10ನೇ ತರಗತಿ ವರೆಗಿನ ಪಠ್ಯ ಪುಸ್ತಕವನ್ನು ಕೇವಲ ಎರಡು ತಿಂಗಳಲ್ಲಿ ಪರಿಷ್ಕರಿಸಲು ಸಾಧ್ಯವೇ. ಇವರಿಗೆ ಬೇಕಾದವರನ್ನು ನೇಮಿಸಿ, ಇವರಿಗೆ ಪೂರಕವಾಗಿರುವ ಸಾಹಿತಿಗಳ ಬರಹ ಸೇರಿಸಿಕೊಂಡು, ಪ್ರಮುಖರ ಲೇಖನಗಳು, ಮಹಾನ್ ವ್ಯಕ್ತಿಗಳ ಇತಿಹಾಸವನ್ನು ಕೈಬಿಡುವುದು ಸಮಂಜಸವೇ' ಎಂದು ಪ್ರಶ್ನಿಸಿದರು.

'ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿಯ ಅರ್ಹತೆ ಏನು? ಯಾರೊಂದಿಗೆ ಚರ್ಚಿಸಿ ಬದಲಾವಣೆ ತಂದಿದ್ದಾರೆ ಎಂದು ಹೇಳಲಿ. ಸಾಮಾಜಿಕ ಅಸಮಾನತೆ ತೊಡೆದು ಹಾಕಲು ಬುದ್ಧ, ಬಸವಣ್ಣ, ಅಂಬೇಡ್ಕರ್, ಗಾಂಧಿ, ಲೋಹಿಯಾ, ಪೆರಿಯಾರ್, ನಾರಾಯಣ ಗುರು ಪ್ರಯತ್ನಿಸಿದ್ದರು. ಬಿಜೆಪಿ ಪರಿವಾರದವರು ಏನು ಮಾಡಿದ್ದಾರೆ? ಸಮಿತಿಯನ್ನು ವಜಾ ಮಾಡುವುದಷ್ಟೇ ಅಲ್ಲ, ಈ ಹಿಂದೆ ಇದ್ದ ಪಠ್ಯ ಜಾರಿಗೆ ತರಬೇಕು' ಎಂದರು.

ಪ್ರಿಯಾಂಕ್ ಖರ್ಗೆ ಮಾತನಾಡಿ, 'ಸಮಿತಿಯಲ್ಲಿ ಒಬ್ಬ ವಿಜ್ಞಾನಿ, ಶಿಕ್ಷಣ ತಜ್ಞ ಇದ್ದಾರಾ? ನಾವು ಪರಿಷ್ಕರಣೆ ವಿರುದ್ಧವಾಗಿಲ್ಲ. ಬದಲಾವಣೆ ಅಗತ್ಯ. ಆದರೆ, ವೈಜ್ಞಾನಿಕ ಮನೋಭಾವ ಕೊಲ್ಲಲು, ಸಂವಿಧಾನದ ಆಶಯ, ಸಾಮಾಜಿಕ ನ್ಯಾಯ, ಸಮಾನತೆ ಮರೆಮಾಚುತ್ತಿರುವುದನ್ನು ನಾವು ವಿರೋಧಿಸುತ್ತೇವೆ' ಎಂದರು.

'ನಾಡಗೀತೆ ತಿರುಚಿದ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಯಾಕೆ? ಆತ ಅಷ್ಟೊಂದು ಪ್ರಭಾವಿ ವ್ಯಕ್ತಿಯೇ? ಕುವೆಂಪು, ಬುದ್ಧ, ನಾರಾಯಣ ಗುರು, ಅಂಬೇಡ್ಕರ್‌ಗೆ ಅಪಮಾನ ಮಾಡಿದವನ ಮುಂದೆ ಮಂಡಿಯೂರುತ್ತಿರುವುದೇಕೆ' ಎಂದು ಪ್ರಶ್ನಿಸಿದ ಅವರು, 'ಪಠ್ಯ ಪುಸ್ತಕ ಸಮಿತಿ ವಿಸರ್ಜನೆಯ ಜೊತೆಗೆ ಈ ಸಮಿತಿ ನಡೆಸಿದ ಎಲ್ಲ ಪ್ರಕ್ರಿಯೆಗಳನ್ನೂ ವಿಸರ್ಜಿಸಬೇಕು' ಎಂದು ಆಗ್ರಹಿಸಿದರು.

'ಸಮಿತಿಯನ್ನಲ್ಲ, ಪರಿಷ್ಕೃತ ಪಠ್ಯ ವಿಸರ್ಜಿಸಿ'

ಬೆಂಗಳೂರು: 'ನಾಡಗೀತೆ ಮತ್ತು ರಾಷ್ಟ್ರಕವಿ ಕುವೆಂಪು ಅವರನ್ನು ಗೇಲಿ ಮಾಡಿರುವ, ಅಂಬೇಡ್ಕರ್ ಮತ್ತು ಬಸವಣ್ಣನವರನ್ನು ಅವಮಾನಿಸಿರುವ ರೋಹಿತ್ ಚಕ್ರತೀರ್ಥ ಅವರನ್ನು ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷ ಸ್ಥಾನದಿಂದ ಮಾತ್ರವಲ್ಲ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದಲೂ ಕಿತ್ತುಹಾಕಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, 'ವಿಸರ್ಜನೆ ಮಾಡಬೇಕಾಗಿರುವುದು ಅವಧಿ ಮುಗಿದಿರುವ ಪಠ್ಯಪುಸ್ತಕ ಪರಿಶೀಲನಾ ಸಮಿತಿಯನ್ನಲ್ಲ, ಪರಿಷ್ಕೃತ ಪಠ್ಯವನ್ನು. ಪೂರ್ವಗ್ರಹ ಪೀಡಿತ ಅಧ್ಯಕ್ಷನನ್ನು ಕಿತ್ತುಹಾಕಿದ ಮೇಲೆ ಸಮಿತಿ ಶಿಫಾರಸು ಮಾಡಿರುವ ಪಠ್ಯವನ್ನು ಒಪ್ಪಿಕೊಳ್ಳಲು ಹೇಗೆ ಸಾಧ್ಯ' ಎಂದಿದ್ದಾರೆ.

ಪಠ್ಯಪುಸ್ತಕ ಪರಿಷ್ಕರಣೆ ಕುರಿತು ಯಾವುದೇ ಸಮುದಾಯದಲ್ಲಿ ಒಡಕು ಮೂಡಿಸುವ ಉದ್ದೇಶ ಸರ್ಕಾರಕ್ಕಿಲ್ಲ. ಕೋಮುವಾದಿಗಳು ಗೊಂದಲ ಮೂಡಿಸುತ್ತಿದ್ದಾರೆ

ಡಾ.ಸಿ.ಎನ್. ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಸಚಿವ

'ಟ್ರೋಲರ್'ನನ್ನು ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷನನ್ನಾಗಿ ಮಾಡಿದ್ದ ಸರ್ಕಾರ, ಪಠ್ಯ ಉಳಿಸಿ ಕೊಳ್ಳುವ ಮೂಲಕ ಆ ವ್ಯಕ್ತಿಗೆ ಮಂಡಿಯೂರಿದೆ

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

ಪರಿಷ್ಕೃತ ಪಠ್ಯ: ಆಕ್ಷೇಪಣೆ ಸಲ್ಲಿಸಲು ಅವಕಾಶ

ಬೆಂಗಳೂರು: ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಪರಿಷ್ಕರಿಸಿದ ಪಠ್ಯಗಳಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಬಯಸುವವರು ಕರ್ನಾಟಕ ಪಠ್ಯ ಪುಸ್ತಕ ಸೊಸೈಟಿಗೆ ಸಲ್ಲಿಸಬಹುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಮೂಲಗಳು ತಿಳಿಸಿವೆ.

'ಸಮಿತಿ ಪರಿಷ್ಕರಿಸಿರುವ ಪಠ್ಯ ಪುಸ್ತಕದಲ್ಲಿ ಯಾವುದಾದರೂ ಆಕ್ಷೇಪಾರ್ಹ ವಿಷಯಗಳಿದ್ದರೆ ಅವುಗಳನ್ನು ಮತ್ತೊಮ್ಮೆ ಪರಿಷ್ಕರಿಸುವ ಮುಕ್ತ ಮನಸ್ಸನ್ನು ಸರ್ಕಾರ ಹೊಂದಿದೆ' ಎಂದು ಮುಖ್ಯಮಂತ್ರಿ ಶುಕ್ರವಾರ ಹೇಳಿಕೆ ನೀಡಿದ ಬೆನ್ನಲ್ಲೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ.

'ಸಲ್ಲಿಕೆಯಾದ ಆಕ್ಷೇಪಣೆಗಳನ್ನು ಸಂಬಂಧಿಸಿದ ವಿಷಯ ತಜ್ಞರು ಪರಿಶೀಲಿಸಿದ ಬಳಿಕ ಮುಂದಿನ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದೂ ಇಲಾಖೆಯ ಮೂಲಗಳು ಹೇಳಿವೆ.

'ಬಸವಣ್ಣ ಅವರ ಪಠ್ಯದ ಕುರಿತ ಆಕೇಪಣೆಗಳಿಗೆ ಸಂಬಂಧಿಸಿದಂತೆ ಲಿಂಗಾಯತ ಮಠಗಳ ಸ್ವಾಮೀಜಿಗಳ ಜೊತೆ ಶಿಕ್ಷಣ ಸಚಿವರು, ಇಲಾಖೆಯ ಅಧಿಕಾರಿಗಳು ಮತ್ತು ತಜ್ಞರ ಜೊತೆ ಸಭೆ ನಡೆಸಿದ ಬಳಿಕ ಯಾವ ವಿಷಯವನ್ನು ತೆಗೆಯಬೇಕು, ಯಾವ ವಿಷಯ ಸೇರಿಸಬೇಕು ಎಂದು ಸಲಹೆ ಪಡೆಯಲಿದ್ದಾರೆ. ಈಗಾಗಲೇ ವ್ಯಕ್ತವಾಗಿರುವ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ಎಲ್ಲ ವಿಷಯಗಳಿಗೂ ಸ್ಪಷ್ಟನೆ ನೀಡಿ ಮುಖ್ಯಮಂತ್ರಿಗೆ ವರದಿ ಸಲ್ಲಿಸಲಾಗಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಪರಿಷ್ಕರಿಸಿದ ಪಠ್ಯಪುಸ್ತಕಗಳನ್ನು ವಾಪಸು ಪಡೆಯುವ ಪ್ರಶ್ನೆಯೇ ಇಲ್ಲ. ಪಠ್ಯಪುಸ್ತಕಗಳು ಶೇ 65ರಷ್ಟು ಮುದ್ರಣಗೊಂಡಿವೆ. ಈ ಹಂತದಲ್ಲಿ ಪಠ್ಯದ ಭಾಗವನ್ನು ತೆಗೆಯಲು ಸಾಧ್ಯವಿಲ್ಲ. ಅದರ ಬದಲು ಯಾವುದನ್ನು ಮಕ್ಕಳಿಗೆ ಬೋಧಿಸಬೇಕು, ಯಾವುದನ್ನು ಬಿಡಬೇಕು ಎಂಬ ಬಗ್ಗೆ ಶಿಕ್ಷಕರಿಗೆ ಸೂಚನೆ ನೀಡಲಾಗುವುದು' ಎಂದೂ ಅವರು ಹೇಳಿದರು.

'ಹೆಡಗೇವಾರ್ ಪಾಠ ಕೈಬಿಡುವುದಿಲ್ಲ'

ಒಂದನೇ ಪುಟದಿಂದ

'ಪಠ್ಯಪುಸ್ತಕ ವಿಚಾರದಲ್ಲಿ ಚರ್ಚೆ ನಡೆದ ಬಳಿಕ ಪರಿಶೀಲಿಸುವುದಾಗಿ ಆರಂಭದಲ್ಲೇ ಹೇಳಿದ್ದೆ. ವಾಸ್ತವಾಂಶದ ಆಧಾರದ ಮೇರೆಗೆ ಕೆಲ ಬದಲಾವಣೆ ಮಾಡಲಾಗುತ್ತಿದೆ. ಮಠಾಧೀಶರ ಒತ್ತಡಕ್ಕೆ ಮಣಿದು ಈ ತೀರ್ಮಾನ ಕೈಗೊಂಡಿಲ್ಲ' ಎಂದು ಹೇಳಿದರು.

'ಪಠ್ಯಪುಸ್ತಕವನ್ನು ನಾನೂ ಗಮನಿಸಿರಲಿಲ್ಲ. ಶುಕ್ರವಾರ ಪರಿಶೀಲಿಸಿದೆ. ಪ್ರೊ.ಬರಗೂರು ರಾಮಚಂದ್ರಪ್ಪ ಪರಿಷ್ಕರಣಾ ಸಮಿತಿ ಹಾಗೂ ಈಗಿನ ಸಮಿತಿ ರಚಿಸಿರುವ ಬಸವಣ್ಣ ಪಠ್ಯದಲ್ಲಿ ಒಂದು ವಾಕ್ಯದ ವ್ಯತ್ಯಾಸವಿದೆ. ಸಾಣೇಹಳ್ಳಿಯ ಪಂಡಿತಾರಾಧ್ಯ ಸ್ವಾಮೀಜಿ ಅವರಿಗೆ ಇದನ್ನು ಮನವರಿಕೆ ಮಾಡಿಕೊಡಲಾಗಿದೆ' ಎಂದರು.

'ನಮ್ಮದು ಬಸವ ಪಥದ ಸರ್ಕಾರ ಎಂದು ಮೊದಲೇ ಹೇಳಿದ್ದೇನೆ. ಬಸವಣ್ಣನವರ ಹಲವು ಅತ್ಯುತ್ತಮ ವಚನಗಳು ಪಠ್ಯದಲ್ಲಿವೆ. ನಾಡಿನ ಮಠಾಧೀಶರು, ಸ್ವಾಮೀಜಿಗಳ ಅಭಿಪ್ರಾಯ ಪಡೆದು ಬಸವಣ್ಣನ ನಿಜ ಇತಿಹಾಸವನ್ನು ಪಠ್ಯದಲ್ಲಿ ಸೇರಿಸಲಾಗುವುದು' ಎಂದರು.

'ವಿರೋಧಿಸುವವರ ಜೊತೆ ಸಿಎಂ ಚರ್ಚಿಸಲಿ'

ಬೆಂಗಳೂರು: 'ಪಠ್ಯ ಪುಸ್ತಕ ಮರು ಪರಿಷ್ಕರಣೆ ವಿರೋಧಿಸುತ್ತಿರುವವರ ಜೊತೆ ಮುಖ್ಯಮಂತ್ರಿ ಮಾತುಕತೆ ನಡೆಸಬೇಕು' ಎಂದು ಈ ಹಿಂದಿನ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷ ಪ್ರೊ. ಬರಗೂರು ರಾಮಚಂದ್ರಪ್ಪ ಸಲಹೆ ನೀಡಿದ್ದಾರೆ.

ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಪರಿಷ್ಕರಿಸಿದ ಪಠ್ಯಗಳಿಗೆ ಸಂಬಂಧಿಸಿದ ಗೊಂದಲಗಳಿಗೆ ಮುಖ್ಯಮಂತ್ರಿ ನೀಡಿರುವ ಸ್ಪಷ್ಟನೆಗೆ ಸುದೀರ್ಘ ಪತ್ರದ ಮೂಲಕ ಪ್ರತಿಕ್ರಿಯಿಸಿರುವ ಅವರು, 'ಪ್ರತಿರೋಧಿಸುತ್ತಿರುವ ಸಂಸ್ಥೆ ಹಾಗೂ ವ್ಯಕ್ತಿಗಳ ಜೊತೆ ಚರ್ಚಿಸಿ ತೀರ್ಮಾನಕ್ಕೆ ಬರುವುದು ಪ್ರಜಾಸತ್ತಾತ್ಮಕ ಸರ್ಕಾರದ ಜವಾಬ್ದಾರಿ. ಇಲ್ಲದೇ ಇದ್ದರೆ ಏಕಪಕ್ಷೀಯವಾಗುತ್ತದೆ' ಎಂದಿದ್ದಾರೆ.

'ಬಸವಣ್ಣನವರ ವಿಷಯದಲ್ಲಿ 6ನೇ ತರಗತಿಯ ಸಮಾಜ ವಿಜ್ಞಾನ ಭಾಗ-2 ರಲ್ಲಿ ಅಲ್ಪಸ್ವಲ್ಪ ಬದಲಿಸಿ ಮರುಪರಿಷ್ಕರಣೆಯಲ್ಲಿ ಉಳಿಸಿಕೊಂಡಿದ್ದರೂ 9ನೇ ತರಗತಿಯ ಸಮಾಜ ವಿಜ್ಞಾನ ಭಾಗ-1ರಲ್ಲಿದ್ದ ವಿವರಗಳಲ್ಲಿ ಮುಖ್ಯ ಸಂಗತಿಗಳನ್ನು ಬಿಡಲಾಗಿದೆ. ಬಸವಣ್ಣನವರು ವೈದಿಕ ಮೂಲ ಮೌಲ್ಯಾಚರಣೆಗಳನ್ನು ವಿರೋಧಿಸಿದ್ದು, ಯಜ್ಞೋಪವೀತವನ್ನು ಕಿತ್ತೆಸೆದದ್ದು, ಉನ್ನತಾಧಿಕಾರದಲ್ಲಿದ್ದರೂ ಚಳವಳಿ ಕಟ್ಟಿದ್ದು, 'ದೇಹವೇ ದೇಗುಲ' ಎಂಬ ಹೊಸ ಪರಿಕಲ್ಪನೆ ನೀಡಿದ್ದು, ಜನ ಸಾಮಾನ್ಯರಿಗೆ ತಲುಪುವ ಸರಳ ಕನ್ನಡದಲ್ಲಿ ವಚನಕಾರರು ಬರೆದದ್ದು-ಮುಂತಾದ ವಿಷಯಗಳನ್ನು ಮರು ಪರಿಷ್ಕರಣೆಯಲ್ಲಿ ಬಿಡಲಾಗಿದೆ' ಎಂದಿದ್ದಾರೆ.

'ಕುವೆಂಪು ಅವರ ಪಠ್ಯದ ಬಗ್ಗೆ ಮುಖ್ಯಮಂತ್ರಿ ನೀಡಿರುವ ಸಂಖ್ಯಾ ಮಾಹಿತಿಯಿಂದ, ನಾಡಗೀತೆ, ನಾಡಧ್ವಜ, ಕನ್ನಡ ಭಾಷೆಗಳಿಗೆ ಮಾಡಿದ ಅವಮಾನಕ್ಕೆ ಖಂಡಿತ ವಿನಾಯಿತಿ ಸಿಗುವುದಿಲ್ಲ' ಎಂದಿರುವ ಬರಗೂರು, 'ಬೆಂಗಳೂರು ನಿರ್ಮಾಪಕ ಕೆಂಪೇಗೌಡರ ಬಗ್ಗೆ 7ನೇ ತರಗತಿಯ ಸಮಾಜ ವಿಜ್ಞಾನ ಭಾಗ-1ರಲ್ಲಿ 'ಯಲಹಂಕ ನಾಡಪ್ರಭುಗಳು' ಪಾಠದಲ್ಲಿ ನಾವು ಕೊಟ್ಟಿದ್ದ ವಿವರಗಳನ್ನು ಮರುಪರಿಷ್ಕರಣೆಯಲ್ಲಿ ಕಡಿತ ಮಾಡಲಾಗಿದೆ. ಮುಖ್ಯಮಂತ್ರಿ ತಿಳಿಸಿರುವ ಹೊಸ ಪಾಠ ಎಲ್ಲಿ ಸೇರಿಸಿದ್ದಾರೆಂದು ಸ್ಪಷ್ಟವಿಲ್ಲ' ಎಂದಿದ್ದಾರೆ.

'ಕನ್ನಡ ಭಾಷಾ ಪಠ್ಯಗಳಲ್ಲಿ ದೇವನೂರರನ್ನು ಹೊರತುಪಡಿಸಿ ಎಲ್ಲ ದಲಿತ ಮೂಲದ ಸಾಹಿತಿಗಳ ರಚನೆಗಳನ್ನು ತೆಗೆಯಲಾಗಿದೆ. ಬಹುಪಾಲು ಮಹಿಳಾ ಸಾಹಿತಿಗಳ ರಚನೆಗಳನ್ನು ಬಿಡಲಾಗಿದೆ. ಬುದ್ಧ, ಅಂಬೇಡ್ಕರ್ ಅಂಥವರ ವಸ್ತುವುಳ್ಳ ಕವನಗಳನ್ನೂ ಕೈ ಬಿಡಲಾಗಿದೆ. 6ನೇ ತರಗತಿಯ ಸಮಾಜ ವಿಜ್ಞಾನದಿಂದ ಬೌದ್ಧಧರ್ಮ ಮತ್ತು ಜೈನಧರ್ಮದ ವಿವರಗಳನ್ನು ತೆಗೆಯಲಾಗಿದೆ. ಸಾವಿತ್ರಿಬಾಯಿ ಫುಲೆ ಮುಂತಾದ ಸುಧಾರಕಿಯರ ಪಾಠಕ್ಕೆ ಕೊಕ್ ಕೊಡಲಾಗಿದೆ. ಅಂಬೇಡ್ಕರ್ ಅವರ ಮಹಾಡ್ ಸತ್ಯಾಗ್ರಹ, ನಾಸಿಕ್ ದೇವಾಲಯ ಪ್ರವೇಶದಂಥ ಅನೇಕ ಸಾಲುಗಳು ಮರುಪರಿಷ್ಕರಣೆಯಲ್ಲಿ ಇಲ್ಲವಾಗಿವೆ. ಇದು ದಲಿತ ವಿರೋಧಿ, ಮಹಿಳಾ ವಿರೋಧಿ ಮತ್ತು ಸಾಮಾಜಿಕ ನ್ಯಾಯ ಹಾಗೂ ಸಮಾನತೆಯ ವಿರೋಧಿ ಕ್ರಮ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಗೌಣವಾಗಿದೆ. ಅಷ್ಟೇ ಅಲ್ಲ, ಬಸವಣ್ಣ, ಕುವೆಂಪು ಅವರ ಆದರ್ಶಕ್ಕೂ ವಿರುದ್ಧವಾಗಿದೆ' ಎಂದಿದ್ದಾರೆ.

'ಮೀಸಲಾತಿಯಿಂದ ಅನ್ಯಾಯವಾಗದು'

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆಯ ಡಾ.ಸಿ.ಎನ್.ಮಂಜುನಾಥ್ ಅವರಿಗೆ 'ಭಗೀರಥ ರತ್ನ', ಬಿಹಾರದ ಉಪಮುಖ್ಯಮಂತ್ರಿ ರೇಣುದೇವಿ ಮತ್ತು ಕೇಂದ್ರದ ಪಂಚಾಯತ್‌ರಾಜ್ ರಾಜ್ಯ ಸಚಿವ ಕಪಿಲ್ ಮೋರೇಶ್ವರ್ ಪಾಟೀಲ್ ಅವರಿಗೆ 'ಭಗೀರಥ ಶ್ರೀ' ಪ್ರಶಸ್ತಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರದಾನ ಮಾಡಿದರು. ಭಗೀರಥ ಗುರುಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ, ಶಿವಮೂರ್ತಿ ಮುರುಘಾ ಶರಣರು, ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಇದ್ದಾರೆ. – ಪ್ರಜಾವಾಣಿ ಚಿತ್ರ

ಮಧುರೆ (ಚಿತ್ರದುರ್ಗ): 'ಉಪ್ಪಾರ ಸಮುದಾಯಕ್ಕೆ ಪರಿಶಿಷ್ಟ ಪಂಗಡದ ಮೀಸಲಾತಿ ಸೌಲಭ್ಯ ಕಲ್ಪಿಸಲು ಕುಲಶಾಸ್ತ್ರೀಯ ಅಧ್ಯಯನ ವರದಿ ಅಂಗೀಕರಿಸಿ ನ್ಯಾಯ ಒದಗಿಸಲು ಪ್ರಾಮಾಣಿಕವಾಗಿ ಯತ್ನಿಸುವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಹೊಸದುರ್ಗ ತಾಲ್ಲೂಕಿನ ಬ್ರಹ್ಮ ವಿದ್ಯಾನಗರದಲ್ಲಿ ಭಗೀರಥ ಗುರುಪೀಠ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಏರ್ಪಡಿಸಿದ್ದ ರಾಜ್ಯ ಮಟ್ಟದ ಭಗೀರಥ ಜಯಂತಿಯಲ್ಲಿ ಅವರು ಮಾತನಾಡಿದರು.

'ಮೀಸಲಾತಿ ಕುರಿತ ಕುಲಶಾಸ್ತ್ರೀಯ ಅಧ್ಯಯನದ ವರದಿಯನ್ನು ಸಂಬಂಧಿಸಿದ ಇಲಾಖೆಗೆ ಕಳುಹಿಸಲಾಗುವುದು. ಮೀಸಲಾತಿ ಕುರಿತ ತೀರ್ಪುಗಳನ್ನು ಪರಿಶೀಲಿಸಿ ನ್ಯಾಯಕೊಡುತ್ತೇವೆ. ಬೇರೆ ವರ್ಗಗಳಿಗೆ ತೊಂದರೆ ಆಗದಂತೆ ನೋಡಿಕೊಳ್ಳುವೆ' ಎಂದರು.

'ಭದ್ರಾ ನಾಲೆಗೆ ಭಗೀರಥ ಮಹರ್ಷಿ ಹೆಸರಿಡಲಾಗುವುದು. ಭಗೀರಥ ಏಕಶಿಲಾ ಮೂರ್ತಿ, ಥೀಮ್ ಪಾರ್ಕ್ ಹಾಗೂ ಉಪ್ಪಾರ ಅಭಿವೃದ್ಧಿ ನಿಗಮಕ್ಕೆ ಅನುದಾನ ಒದಗಿಸಲಾಗುವುದು' ಎಂದು ತಿಳಿಸಿದರು.

ಭಗೀರಥ ಗುರುಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ, 'ಉಪ್ಪಾರ ಸಮುದಾಯ ಶೈಕ್ಷಣಿಕ, ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕಿದ್ದು, ಪರಿಶಿಷ್ಟ ಪಂಗಡದ ಮೀಸಲಾತಿ ಕಲ್ಪಿಸಬೇಕಿದೆ. ಕೆ.ಮೇತ್ರಿ ಅವರು ಕುಲಶಾಸ್ತ್ರೀಯ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಇದನ್ನು ಅಂಗೀಕರಿಸಿ ಕೇಂದ್ರಕ್ಕೆ ಶಿಫಾರಸು ಮಾಡಬೇಕು' ಎಂದು ಮನವಿ ಮಾಡಿದರು.

'ಎಸ್. ನಿಜಲಿಂಗಪ್ಪ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಮಠಕ್ಕೆ 500 ಎಕರೆ ಜಮೀನು ಮಂಜೂರು ಮಾಡಿದ್ದರು. ಈ ಜಮೀನಿನ ಗುತ್ತಿಗೆ ಅವಧಿ 2011ಕ್ಕೆ ಮುಕ್ತಾಯವಾಗಿದೆ. ಇದನ್ನು ಗುರುಪೀಠಕ್ಕೆ ಶಾಶ್ವತವಾಗಿ ಮಂಜೂರು ಮಾಡಬೇಕು' ಎಂದರು.

ಪ್ರಶಸ್ತಿ ಪ್ರದಾನ: ಬಿಹಾರದ ಉಪಮುಖ್ಯಮಂತ್ರಿ ರೇಣುದೇವಿ, ಕೇಂದ್ರ ಸಚಿವ ಕಪಿಲ್ ಮೋರೇಶ್ವರ್ ಪಾಟೀಲ್ ಅವರಿಗೆ 'ಭಗೀರಥ ಶ್ರೀ', ಜಯದೇವ ಹೃದ್ರೋಗ ಆಸ್ಪತ್ರೆಯ ಸಿ.ಎನ್.ಮಂಜುನಾಥ್ ಅವರಿಗೆ 'ಭಗೀರಥ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶಿವಮೂರ್ತಿ ಮುರುಘಾ ಶರಣರು, ಕೇಂದ್ರ ಸಚಿವ ಎ. ನಾರಾಯಣಸ್ವಾಮಿ, ಸಚಿವರಾದ ಗೋವಿಂದ ಎಂ. ಕಾರಜೋಳ, ಕೋಟ ಶ್ರೀನಿವಾಸ ಪೂಜಾರಿ, ಬೈರತಿ ಬಸವರಾಜ, ಬಿ.ಸಿ. ನಾಗೇಶ್, ಬಿ.ಸಿ.ಪಾಟೀಲ ಇದ್ದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಭೂ ಪರಿವರ್ತನೆಗೆ ಮೂರು ದಿನವಲ್ಲ, ತಿಂಗಳೇ ಬೇಕು

● ಬಾಲಕೃಷ್ಣ ಪಿ.ಎಚ್.

ದಾವಣಗೆರೆ: ಮೂರೇ ದಿನಗಳಲ್ಲಿ ಭೂ ಪರಿವರ್ತನೆಯಾಗುತ್ತಿದೆ ಎಂಬುದು ಕಂದಾಯ ಸಚಿವರ ಭಾಷಣಕ್ಕೆ ಸೀಮಿತವಾಗಿದೆ. ಎಲ್ಲ ದಾಖಲೆಗಳು ಸರಿ ಇದ್ದರೂ ಭೂಪರಿವರ್ತನೆಗೆ ಕನಿಷ್ಠ ಒಂದು ತಿಂಗಳಾದರೂ ಬೇಕಾಗುತ್ತಿದೆ.

‘ನಾನು ಪೋಡಿ ಮಾಡಲು ತಾಲ್ಲೂಕು ಕಚೇರಿಗೆ ಹೋಗಿದ್ದೆ. ಆನ್‌ಲೈನ್ ಮೂಲಕ ಮಾಡಿದರೆ ಬೇಗ ಆಗುತ್ತದೆ. ತಾಲ್ಲೂಕು ಕಚೇರಿಗೆ ಅಲೆದಾಡುವುದು ತಪ್ಪಲಿದೆ ಎಂದು ಅಲ್ಲಿ ತಿಳಿಸಿದರು. ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ 20 ದಿನ ದಾಟಿತು. ಕೆಲಸ ಇನ್ನೂ ಆಗಿಲ್ಲ. ಮತ್ತೆ ತಾಲ್ಲೂಕು ಕಚೇರಿಗೆ ಹೋಗಬೇಕು. ಕಂದಾಯ ಇಲಾಖೆಯಲ್ಲಿ ಯಾವುದೂ ಬೇಗ ಆಗುತ್ತಿಲ್ಲ’ ಎಂದು ದಾವಣಗೆರೆಯ ಶೌಕತ್ ಅಲಿ ಬೇಸರ ವ್ಯಕ್ತಪಡಿಸಿದರು.

‘ನೇರವಾಗಿ ಹೋದರೆ ಯಾವುದೇ ಕೆಲಸವಾಗುವುದಿಲ್ಲ. ಬ್ರೋಕರ್‌ಗಳ ಮೂಲಕ ಲಂಚ ತಲುಪಿಸಿದರೂ ಕೆಲಸ ಆಗಲು ಒಂದೆರಡು ತಿಂಗಳು ತಗಲುತ್ತದೆ. ಯಾರ ಮೂಲಕ ಹೋದರೂ 3 ದಿನಗಳಲ್ಲಿ ಕೆಲಸ ಆಗುವ ವ್ಯವಸ್ಥೆ ಇನ್ನೂ ಬಂದಿಲ್ಲ’ ಎಂದು ಸಾಮಾಜಿಕ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್ ವಿವರಿಸಿದರು.

‘ಕಂದಾಯ ಸಚಿವ ಆರ್.ಅಶೋಕ ಅವರ ಗ್ರಾಮ ವಾಸ್ತವ್ಯದ ಬಳಿಕ, ಹೊನ್ನಾಳಿ ತಾಲ್ಲೂಕಿನ ಕುಂದೂರಿನಲ್ಲಿ ಎರಡು ಭೂ ಪರಿವರ್ತನೆಗಳನ್ನು ಮಾಡಲಾಗಿದೆ’ ಎಂದು ತಹಶೀಲ್ದಾರ್ ಕಚೇರಿಯ ಕಂದಾಯ ವಿಭಾಗದ ಸಿಬ್ಬಂದಿ ರವಿ ಮಾಹಿತಿ ನೀಡಿದರು.

‘ಮೂರೇ ದಿನಗಳಲ್ಲಿ ಭೂಪರಿವರ್ತನೆ ಮಾಡಿಕೊಡುವ ಸಾಫ್ಟ್‌ವೇರ್ ಅನ್ನು ನಮಗೆ ಸರ್ಕಾರ ನೀಡಿಲ್ಲ. ಅರ್ಜಿಗಳು ಬಂದಾಗ ಇಟ್ಟು-ಕೊಳ್ಳುವುದಿಲ್ಲ. ಹಿಂದಿನ ಪದ್ಧತಿಯಲ್ಲೇ ವಿಲೇವಾರಿ ಮಾಡುತ್ತಿದ್ದೇವೆ. ಅದಕ್ಕೆ ಕನಿಷ್ಠ ಒಂದು ತಿಂಗಳು ಸಮಯ ಹಿಡಿಯುತ್ತದೆ’ ಎಂದು ತಿಳಿಸಿದರು.

‘ಅರ್ಜಿ ಬಂದಾಗ ದಾಖಲೆಗಳು ಸರಿ ಇವೆಯೇ ಎಂದು ಪರಿಶೀಲಿಸಬೇಕು. ಅವೆಲ್ಲ ಸರಿ ಇದ್ದರೆ ಮೇಲಧಿಕಾರಿಗಳಿಗೆ ಕಳುಹಿಸಿ ಅನುಮತಿ ಪಡೆಯಬೇಕು. ಅವರ ಒಪ್ಪಿಗೆ ಸಿಕ್ಕಿದ ಮೇಲೆ ಪರಿವರ್ತನೆಗೆ ಕ್ರಮ ಕೈಗೊಳ್ಳಬೇಕು. ಇವುಗಳನ್ನು ಮೂರು ದಿನಗಳಲ್ಲಿ ಮಾಡಲು ಸಾಧ್ಯವಿಲ್ಲ. ಮುಂದೆ ಸುಲಭ ವಿಧಾನಗಳು ಬರಬಹುದು’ ಎಂದು ನ್ಯಾಮತಿ ತಾಲ್ಲೂಕು ಸುರಹೊನ್ನೆಯ ಕಂದಾಯ ನಿರೀಕ್ಷಕ ಸುಧೀರ್ ವಿವರಿಸಿದರು.

ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ

ಭಾರಿ ಪ್ರಚಾರದೊಂದಿಗೆ ಆರಂಭವಾದ ‘ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ’ ಕಾರ್ಯಕ್ರಮದಡಿ ಈ ಕೆಳಕಂಡ ಫಲಾನುಭವಿಗಳಿಗೆ ಪ್ರಯೋಜನ ಲಭಿಸಿದೆ.

18,063 ಪಿಂಚಣಿ

3,747 ಪೌತಿ ಖಾತೆ

4,188 ಪಹಣಿ ತಿದ್ದುಪಡಿ

1,719 ಪಡಿತರ ಚೀಟಿ ವಿತರಣೆ

5,088 ಆಧಾರ್ ತಿದ್ದುಪಡಿ


33,045 ಇತರೆ ಇಲಾಖೆ ಫಲಾನುಭವಿಗಳು

286 ಸ್ಮಶಾನಕ್ಕಾಗಿ ಕಾಯ್ದಿರಿಸಿದ ಜಮೀನು

42,418 ಕಂದಾಯ ಇಲಾಖೆಯ ಒಟ್ಟು ಫಲಾನುಭವಿಗಳು

(ಕಂದಾಯ ಇಲಾಖೆಯ ಮಾಹಿತಿ)

ಜನರ ಸಂಪರ್ಕಕ್ಕೆ ಸಿಗದ ಸಹಾಯವಾಣಿ



ಭಾವು ಪತ್ತಾರ್

ಕಲಬುರಗಿ: ಕಂದಾಯ ಇಲಾಖೆಯ ಮಹತ್ವಾಕಾಂಕ್ಷೆಯ, 72 ಗಂಟೆಗಳಲ್ಲಿ ಮನೆ ಬಾಗಿಲಿಗೆ ಪಿಂಚಣಿ ತಲುಪಿಸುವ ‘ಹಲೋ ಕಂದಾಯ ಸಚಿವರೇ’ ಸಹಾಯವಾಣಿ ಗಡಿ ಜಿಲ್ಲೆ ಬೀದರ್‌ನಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ.

ಮಧ್ಯವರ್ತಿಗಳ ಹಾವಳಿ ತಪ್ಪಿಸಲು ದೂರವಾಣಿ ಕರೆ ಮೂಲಕ ವಿವಿಧ ಪಿಂಚಣಿ ಸೌಲಭ್ಯ ಪಡೆಯಲು ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ವಡಗಾಂವ (ಡಿ) ಗ್ರಾಮದಲ್ಲಿ ನಡೆದ ಕಂದಾಯ ಸಚಿವರ ಗ್ರಾಮ ವಾಸ್ತವ್ಯದ ವೇಳೆ ಪ್ರತ್ಯೇಕ ಸಹಾಯವಾಣಿ ಕೌಂಟರ್ ತೆರೆಯಲಾಗಿತ್ತು.

ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿದಾಗ ಸಂಪರ್ಕಕ್ಕೆ ಸಿಗಲಿಲ್ಲ. ನಿರಂತರವಾಗಿ ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಇಲಾಖೆಯ ಮಳಿಗೆಯಲ್ಲಿದ್ದ ಸಿಬ್ಬಂದಿ ಸಹ ಕರೆಗೆ ಪ್ರಯತ್ನಿಸಿ ಕೈ ಚೆಲ್ಲಿದರು.

‘ತಾಲ್ಲೂಕು ಗಡಿ ಭಾಗವಾಗಿರುವುದರಿಂದ ನೆಟ್‌ವರ್ಕ್ ಸಮಸ್ಯೆ ಹೆಚ್ಚಿದೆ. ಆ ಬಗ್ಗೆ ಜನರಲ್ಲಿ ಜಾಗೃತಿ ಅಗತ್ಯ. ಫೋನ್ ಮಾಡಿ ಪಿಂಚಣಿ ಸೌಲಭ್ಯ ಸಿಗುತ್ತದೆ ಎನ್ನುವುದು ಇನ್ನೂ ಬಹಳ ಜನರಿಗೆ ತಿಳಿದಿಲ್ಲ. ಈಗಾಗಲೇ ಗ್ರಾಮ ಸೇವಕರು, ಕಂದಾಯ ನಿರೀಕ್ಷಕರ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. ಪಿಂಚಣಿಗಾಗಿ ಬೇಡಿಕೆ ಸಲ್ಲಿಸಿದವರಿಗೆ ಕರೆ ಮಾಡಿ ಕೋರಿಕೆ ಸಲ್ಲಿಸುವಂತೆ ತಿಳಿವಳಿಕೆ ನೀಡುತ್ತಿದ್ದೇವೆ’ ಎಂದು ಔರಾದ್ ತಹಶೀಲ್ದಾರ್ ಅರುಣಕುಮಾರ ಕುಲಕರ್ಣಿ ಹೇಳಿದರು.

ಗ್ರಾಮ ವಾಸ್ತವ್ಯದಲ್ಲಿ ಸಲ್ಲಿಸಲಾದ 647 ಬೇಡಿಕೆಗಳ ಪೈಕಿ 335 ಫಲಾನುಭವಿಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸಲಾಗಿದೆ.

ಯಾದಗಿರಿ ಜಿಲ್ಲೆಯಲ್ಲಿ ‘ಹಲೋ ಕಂದಾಯ ಸಚಿವರೆ’ ಸಹಾಯವಾಣಿಗೆ ಜಿಲ್ಲೆಯಲ್ಲಿ ಜಾಗೃತಿ ಕೊರತೆ ಇದೆ.

ಮೇ 14ರಿಂದ ಮೇ 25ರವರೆಗೆ ಯಾದಗಿರಿ, ಶಹಾಪುರ ತಾಲ್ಲೂಕಿನಿಂದ ಮಾತ್ರ 6 ಅರ್ಜಿಗಳು ಬಂದಿವೆ. ಉಳಿದ ತಾಲ್ಲೂಕುಗಳಾದ ಗುರುಮಠಕಲ್, ಸುರಪುರ, ವಡಗೇರಾ, ಹುಣಸಗಿ ತಾಲ್ಲೂಕಿನಿಂದ ಒಂದೂ ಕರೆ ಬಂದಿಲ್ಲ.

ಬರೀ ಪ್ರಚಾರ: ಸಿಗದ ಪರಿಹಾರ

ಒಂದನೇ ಪುಟದಿಂದ

ಕ್ರಾಂತಿಕಾರಿ ಬದಲಾವಣೆಯಾಗಿಲ್ಲ: ಸ್ಥಳೀಯ ಅಧಿಕಾರಿಗಳ ಹಂತದಲ್ಲಿ ಆಗಬಹುದಾದ ಕೆಲವು ಸಣ್ಣಪುಟ್ಟ ಕೆಲಸಗಳಷ್ಟೇ ನಡೆದಿವೆ. ಒತ್ತುವರಿ, ಭೂಪರಿವರ್ತನೆ, ಅಕ್ರಮ ಸಾಗುವಳಿ ಸಕ್ರಮಗೊಳಿಸುವುದು, ಆಶ್ರಯ ಯೋಜನೆ, ರೈತರಿಗೆ ಜಮೀನು ಹಂಚಿಕೆಗೆ ಸಂಬಂಧಿಸಿದಂತೆ ಸರ್ಕಾರದ ಹಂತದಲ್ಲಿ ಆದೇಶ, ಕಾಯ್ದೆಗಳಿಗೆ ತಿದ್ದುಪಡಿ ಮೊದಲಾದವುಗಳೂ ನಡೆದಿಲ್ಲ.

‘ಕ್ರಾಂತಿಕಾರಿ ಬದಲಾವಣೆ’ ಸಾಧ್ಯ ವಾಗಿಲ್ಲ. ಉಡುಪಿಯ ಕೆಂಜೂರಿನಲ್ಲಿರುವ ಕರಾವಳಿಯ ಅತ್ಯಂತ ಹಿಂದುಳಿದಿರುವ ಕುಡುಬಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿ ಹಕ್ಕುಪತ್ರ ವಿತರಿಸುವ ಮತ್ತು ಭೂ ಮಂಜೂರಾತಿ ಮಾಡಿಕೊಡುವುದಕ್ಕೆ ಸಂಬಂಧಿಸಿ ಅಶೋಕ್ ನೀಡಿದ್ದ ಆಶ್ವಾಸನೆ ಮಾತುಗಳಲ್ಲಷ್ಟೆ ಉಳಿದಿರುವುದು ಇದಕ್ಕೆ ಜ್ವಲಂತ ಉದಾಹರಣೆ.

‘ಪರಿಹಾರ ವಿತರಣೆಯಲ್ಲಿ ಅನ್ಯಾಯ ವಾಗಿದೆ’ ಎಂದು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಅಚವೆಯ ನೆರೆ ಸಂತ್ರಸ್ತರು ಸಚಿವರೆದುರು ಅಳಲು ತೋಡಿಕೊಂಡಿದ್ದರು. ಕಾರ್ಯಕ್ರಮ ನಡೆದ ವಸತಿನಿಲಯದ ಹಳೆಯ ಚಾವಣಿ ಬದಲಾಯಿಸಿಕೊಡುವ ಭರವಸೆಯನ್ನೂ ಸಚಿವರು ಮರೆತಿದ್ದಾರೆ. ಗ್ರಾಮಕ್ಕೆ ಬಸ್ ಸೌಲಭ್ಯ ಕಲ್ಪಿಸಬೇಕು, ಶೇ 64ರಷ್ಟು ಅರಣ್ಯ ಅತಿಕ್ರಮಣಕಾರರಿಗೆ ಹಕ್ಕುಪತ್ರ ವಿತರಿಸಬೇಕು ಎಂಬ ಬೇಡಿಕೆಗಳಿಗೆ ಸಿಕ್ಕ ಸ್ಪಂದನೆ ಶೂನ್ಯ!

ತಂತ್ರಾಂಶವೇ ಸಿದ್ಧವಾಗಿಲ್ಲ: ‘ಮೂರೇ ದಿನಗಳಲ್ಲಿ ಭೂ ಪರಿವರ್ತನೆ ಮಾಡಿಕೊಡಲಾಗುವುದು’ ಎಂಬ ಸಚಿವರ ಆಶ್ವಾಸನೆಯೂ ಅನುಷ್ಠಾನವಾಗಿಲ್ಲ. ಎಂದಿನಂತೆ ಅಧಿಕಾರಿಗಳು ಹೆಚ್ಚಿನ ಸಮಯ ತೆಗೆದುಕೊಳ್ಳುತ್ತಿದ್ದಾರೆ; ಅಲೆದಾಡಿ ಸುತ್ತಿದ್ದಾರೆ ಎಂಬ ದೂರುಗಳಿವೆ. ‘ಸಚಿವರು ಹೇಳಿದ್ದನ್ನು ಮಾಡಲು ತಂತ್ರಾಂಶವೇ ಸಿದ್ಧವಾಗಿಲ್ಲ’ ಎನ್ನುವುದು ಅಧಿಕಾರಿಗಳ ಸಮಜಾಯಿಷಿ.

ಇನ್ನೊಂದೆಡೆ, 72 ಗಂಟೆಗಳಲ್ಲಿ ಮನೆ ಬಾಗಿಲಿಗೆ ಪಿಂಚಣಿ ತಲುಪಿಸುವ ‘ಹಲೋ ಕಂದಾಯ ಸಚಿವರೇ’ ಸಹಾಯವಾಣಿಯಿಂದಲೂ ನಿರೀಕ್ಷಿತ ಪ್ರಯೋಜನವಾಗಿಲ್ಲ. ಆ ಸೇವೆ ಬಗ್ಗೆ ಪ್ರಚಾರದ ಕೊರತೆಯೂ ಇದೆ.

ವಾಸ್ತವ್ಯ ಕಾರ್ಯಕ್ರಮವು ಹಳ್ಳಿಗಳಲ್ಲಿನ ಜನರ ಸಮಸ್ಯೆಗಳಿಗೆ ಕನ್ನಡಿ ಹಿಡಿಯುತ್ತಿದೆ. ಆದರೆ, ಪರಿಹಾರ ಎನ್ನುವುದು ಕನ್ನಡಿಯೊಳಗಿನ ಗಂಟಿ ನಂತಾಗಿಯೇ ಉಳಿದಿರುವುದು ಕಟು ವಾಸ್ತವ. ಇದಕ್ಕೆ, ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರರು ನಡೆಸುವ ವಾಸ್ತವ್ಯ ಕಾರ್ಯಕ್ರಮವೂ ಹೊರತಾಗಿಲ್ಲ ಎನ್ನುವುದು ಹಳ್ಳಿಗಳ ಚಿತ್ರಣ ಸಾರಿ ಸಾರಿ ಹೇಳುತ್ತಿದೆ.

(ಪೂರಕ ಮಾಹಿತಿ:ಹುಬ್ಬಳ್ಳಿ, ಮಂಗಳೂರು, ಕಲಬುರಗಿ, ದಾವಣಗೆರೆ, ಬೆಂಗಳೂರು ಬ್ಯೂರೊ)

ಶಾಲೆಯಾಗಲಿಲ್ಲ, ಬಸ್ ಬಂತು..

ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕಿನ ಛಬ್ಬಿಯ ಜನ ಪ್ರೌಢಶಾಲೆಗಾಗಿ ಮಂಡಿಸಿದ್ದ ಬೇಡಿಕೆ ಹಾಗೆಯೇ ಉಳಿದಿದೆ. ‘ಶೆರೇವಾಡ ಗ್ರಾಮದಲ್ಲಿ 6.50 ಎಕರೆ ಜಾಗ ನೀಡಿ, ಸಮಾಜ ಕಲ್ಯಾಣ ಇಲಾಖೆಯಿಂದ ₹ 28 ಕೋಟಿ ಅನುದಾನದಲ್ಲಿ ಡಾ.ಅಂಬೇಡ್ಕರ್ ವಸತಿ ಶಾಲೆ ನಿರ್ಮಿಸಲಾಗುವುದು’ ಎಂದು ಸಚಿವರು ನೀಡಿದ್ದ ಭರವಸೆಗೆ ವರ್ಷದ ಮೇಲೆ 2 ತಿಂಗಳಾಗಿದೆ!

‘ಆರು ಕಿ.ಮೀ.ದೂರದ ಬೂಅರಳಿಕಟ್ಟಿ ಪ್ರೌಢಶಾಲೆಗೆ ನಡೆದುಕೊಂಡು ಹೋಗಲು ಕಷ್ಟವಾಗುತ್ತಿದೆ’ ಎಂದು ಅದೇ ಗ್ರಾಮದ ವಿದ್ಯಾರ್ಥಿನಿಯರು ಅಲವತ್ತುಕೊಂಡ ಮರುದಿನದಿಂದಲೇ ಬಸ್ ಕಾರ್ಯಾಚರಣೆ ಆರಂಭವಾಗಿದೆ.

ಗ್ರಾಮ ವಾಸ್ತವ್ಯ ಎಲ್ಲೆಲ್ಲಿ ನಡೆಯಿತು?

- ಹೊಸಳ್ಳಿ ಗ್ರಾಮ (ಬೆಂಗಳೂರು ಗ್ರಾಮಾಂತರ ಜಿಲ್ಲೆ)
- ಛಬ್ಬಿ ಗ್ರಾಮ (ಧಾರವಾಡ ಜಿಲ್ಲೆ)
- ಸುರಹೊನ್ನೆ ಗ್ರಾಮ ನ್ಯಾಮತಿ ತಾಲ್ಲೂಕು (ದಾವಣಗೆರೆ ಜಿಲ್ಲೆ)
- ಕೊಕ್ಕರ್ಣೆ ಗ್ರಾಮ (ಉಡುಪಿ ಜಿಲ್ಲೆ) (ಕುಣಬಿ, ಕೊರಗ ಜನಾಂಗದವರ ಮನೆಗೆ ಭೇಟಿ ನೀಡಿ ಉಪಾಹಾರ ಸೇವನೆ ಮಾಡಿದ್ದರು) ಕೊರಗ ಜನಾಂಗದ ಒಬ್ಬರಿಗೆ ಗ್ರಾಮ ಸಹಾಯಕ ಹುದ್ದೆಗೆ ನೇಮಕಾತಿ ಪತ್ರ ನೀಡಿದರು.
- ಸುರಪುರ, ದೇವತ್ಕಲ್ ಗ್ರಾಮ (ಯಾದಗಿರಿ ಜಿಲ್ಲೆ)
- ಹೊಲನಗದ್ದೆ, ಆಚವೆ- ಹಿಲ್ಲೂರು ಗ್ರಾಮ (ಉತ್ತರಕನ್ನಡ ಜಿಲ್ಲೆ) (ಸಿದ್ದಿ ಮತ್ತು ಗೌಳಿ ಜನಾಂಗ) ಸಿದ್ದಿ ಜನಾಂಗದ ಒಬ್ಬ ಮಹಿಳೆಗೆ ಗ್ರಾಮ ಸಹಾಯಕ ಹುದ್ದೆಗೆ ನೇಮಕಾತಿ ಪತ್ರ ನೀಡಿದರು.
- ವಡಗಾಂವ್ (ದೇ) ಗ್ರಾಮ (ಬೀದರ್ ಜಿಲ್ಲೆ, ಔರಾದ್ ತಾಲ್ಲೂಕು)
- ಕಂದಾಯ ಸಚಿವ ಆರ್. ಅಶೋಕ ಅವರು ಬೆಂಗಳೂರು ಗ್ರಾಮಾಂತರ, ಧಾರವಾಡ, ದಾವಣಗೆರೆ, ಉಡುಪಿ, ಯಾದಗಿರಿ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ವಾಸ್ತವ್ಯ ಹೂಡಿದ್ದ ಸಂದರ್ಭದಲ್ಲಿ ಒಟ್ಟು **8,791** ಅರ್ಜಿಗಳು ಸ್ವೀಕೃತಗೊಂಡಿದ್ದ-ವು. ಈ ಪೈಕಿ **8,298** ಅರ್ಜಿಗಳನ್ನು ವಿಲೇವಾರಿ ಆಗಿವೆ. ಬಾಕಿ 493 ಅರ್ಜಿಗಳನ್ನು ವಿಲೇವಾರಿ ಮಾಡಲು ಸಂಬಂಧಪಟ್ಟ ಇಲಾಖೆಗಳಿಗೆ ವರ್ಗಾಯಿಸಲಾಗಿದೆ.
- ದೂರವಾಣಿ ಮೂಲಕ **1,576** ಜನರಿಗೆ ಪಿಂಚಣಿ ಮಂಜೂರು

ರೈತರೇ ಪೋಡಿ ಮಾಡಿಕೊಳ್ಳಲು ಆಗಲ್ಲ

ಮೊಬೈಲ್ ಆ್ಯಪ್ ಸಿದ್ಧವಿಲ್ಲ!

ದೊಡ್ಡಬಳ್ಳಾಪುರ: ಸರ್ವೆ, ಪೋಡಿ, ವಸತಿ ಉದ್ದೇಶದ ಭೂ ಪರಿವರ್ತನೆ ಸೇರಿದಂತೆ ಕಂದಾಯ ಇಲಾಖೆಯ ಬಹುತೇಕ ಸೇವೆಗಳನ್ನು ಆನ್‌ಲೈನ್ ಮೂಲಕ ರೈತರೇ ಮಾಡಿಕೊಳ್ಳುವಂತೆ ಸರಳೀಕರಿಸಲಾಗಿದೆ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳುತ್ತಲೇ ಇದ್ದಾರೆ. ಆದರೆ ವಾಸ್ತವದಲ್ಲಿ ಆ ಮೊಬೈಲ್ ಆ್ಯಪ್ ಇನ್ನೂ ಸಿದ್ಧವಾಗಿಯೇ ಇಲ್ಲ!

ಕಾರ್ಯಕ್ರಮಗಳಲ್ಲಿ ಅವರು ನೀಡಿದ ಭರವಸೆ ಈಡೇರಿಲ್ಲ. ರೈತರೇ ಪೋಡಿ ಮಾಡಿಕೊಳ್ಳಲು ಇದುವರೆಗೂ ಸಾಧ್ಯವಾಗಿಲ್ಲ.

‘ಸದ್ಯ, ರೈತರಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲಾಗಿದೆ. ಇದು ಸಹ ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿಲ್ಲ’ ಎಂಬುದು ಗ್ರಾಮಸ್ಥರ ದೂರು.

‘ರೈತರು ಪೋಡಿ ಮಾಡಿಕೊಳ್ಳಲು ಆನ್ ಮೂಲಕ ಅರ್ಜಿ ಸಲ್ಲಿಗೆ ಲಿಂಕ್ https:// bhoomojini.karnataka.gov.in ಇದು. ‘ಆದರೆ ಈ ಲಿಂಕ್ ತೆರೆದು ಪೋಡಿ ಪ್ರಕ್ರಿಯೆ ನಡೆಸುವುದು ಸದ್ಯಕ್ಕಂತೂ ಅಸಾಧ್ಯ. ಹೀಗಾಗಿ ಭರವಸೆ ನೀಡುವುದನ್ನು ಸಚಿವರು ತಕ್ಷಣಕ್ಕೆ ನಿಲ್ಲಿಸಬೇಕು’ ಎಂದು ಬೆಂಗಳೂರು ಗ್ರಾಮಾಂತರ ರೈತ ಸಂಘದ ಜಿಲ್ಲಾ ಮುಖಂಡ ತಿಪ್ಪೂರು ಮುತ್ತೇಗೌಡ ಆಗ್ರಹಿಸಿದರು.

‘ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಹತ್ತಾರು ಬಾರಿ ಪ್ರಯತ್ನ ಪಟ್ಟರೂ ಓಟಿಪಿ ಬರುವುದೇ ಇಲ್ಲ. ಓಟಿಪಿ ಬಾರದ ಹೊರತು ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣವಾಗುವುದಿಲ್ಲ. ಹೀಗಾಗಿ ರೈತರು ತಾವೇ ತಮ್ಮ ಜಮೀನು ಪೋಡಿ ಮಾಡಿಕೊಳ್ಳಬಹುದು ಎನ್ನುವ ಮಾತು ಹೇಳಿಕೆಗೆ ಮಾತ್ರವೇ ಸೀಮಿತವಾಗಿದೆ. ಕಂದಾಯ ಸಚಿವರ ಹೇಳಿಕೆಗಳು ವಾಸ್ತವದಲ್ಲಿ ಜಾರಿಗೆ ಬಂದರಷ್ಟೇ ರೈತರಿಗೆ ಅನುಕೂಲವಾಗುತ್ತದೆ ಎಂದು ದೂರಿದರು.

‘ರಾಷ್ಟ್ರೋತ್ಥಾನ ಸಾಹಿತ್ಯ’ಕ್ಕೆ ‘ಅತ್ಯುತ್ತಮ ಪ್ರಕಾಶನ ಪ್ರಶಸ್ತಿ’

ಕಾಪಸೆ, ಆಳ್ವಗೆ ಪುಸ್ತಕ ಪ್ರಾಧಿಕಾರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರವು 2021ನೇ ಸಾಲಿನ ವಿವಿಧ ವಾರ್ಷಿಕ ಪ್ರಶಸ್ತಿಗಳನ್ನು ಶನಿವಾರ ಪ್ರಕಟಿಸಿದೆ. ₹ 75 ಸಾವಿರ ನಗದು ಬಹುಮಾನ ಹೊಂದಿರುವ ‘ಡಾ.ಎಂ.ಎಂ. ಕಲಬುರ್ಗಿ ಮಾನವಿಕ ಅಧ್ಯಯನ ಪ್ರಶಸ್ತಿ’ಗೆ ಧಾರವಾಡದ ಸಾಹಿತಿ ಗುರುಲಿಂಗ ಕಾಪಸೆ ಆಯ್ಕೆಯಾಗಿದ್ದಾರೆ.

ಪ್ರಾಧಿಕಾರದ ಅಧ್ಯಕ್ಷ ಡಾ.ಎಂ.ಎನ್. ನಂದೀಶ್ ಹಂಚೆ ಅವರ ನೇತೃತ್ವದಲ್ಲಿ ಈ ಆಯ್ಕೆಗಳು ನಡೆದಿವೆ.

‘ಅತ್ಯುತ್ತಮ ಪ್ರಕಾಶನ ಪ್ರಶಸ್ತಿ’ಗೆ ಬೆಂಗಳೂರಿನ ‘ರಾಷ್ಟ್ರೋತ್ಥಾನ ಸಾಹಿತ್ಯ’ ಭಾಜನವಾಗಿದೆ. ಈ ಪ್ರಶಸ್ತಿಯು ₹ 1 ಲಕ್ಷ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ‘ಡಾ.ಜಿ.ಪಿ. ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ’ಗೆ ಮೂಡುಬಿದಿರೆಯ ಡಾ.ಎಂ. ಮೋಹನ್ ಆಳ್ವ ಅವರನ್ನು ಆಯ್ಕೆ ಮಾಡಲಾಗಿದೆ.

‘ಡಾ.ಅನುಪಮಾ ನಿರಂಜನ ವೈದ್ಯಕೀಯ ಹಾಗೂ ವಿಜ್ಞಾನ ಸಾಹಿತ್ಯ ಪ್ರಶಸ್ತಿ’ಗೆ ಬೆಂಗಳೂರಿನ ಡಾ.ನಾ. ಸೋಮೇಶ್ವರ ಅವರು ಭಾಜನರಾಗಿದ್ದಾರೆ. ಈ ಪ್ರಶಸ್ತಿಗಳು ಕ್ರಮವಾಗಿ ₹ 50 ಸಾವಿರ ಹಾಗೂ ₹ 25 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿವೆ.

2021ನೇ ಸಾಲಿನ ಕನ್ನಡ ಪುಸ್ತಕ ಸೊಗಸು ಹಾಗೂ ಮುದ್ರಣ ಸೊಗಸು ಬಹುಮಾನವನ್ನೂ ಪ್ರಕಟಿಸಲಾಗಿದೆ.


ಗುರುಲಿಂಗ ಕಾಪಸೆ


ಡಾ.ನಾ. ಸೋಮೇಶ್ವರ


ಎಂ. ಮೋಹನ್ ಆಳ್ವ

ಪುಸ್ತಕ ಸೊಗಸು ಹಾಗೂ ಮುದ್ರಣ ಸೊಗಸು ಬಹುಮಾನದ ವಿಜೇತರು

ಬಹುಮಾನ	ನಗದು ಮೊತ್ತ (₹ಗಳಲ್ಲಿ)	ಕೃತಿ	ಲೇಖಕರು	ಪ್ರಕಾಶನ ಸಂಸ್ಥೆ
ಮೊದಲನೇ ಬಹುಮಾನ	25 ಸಾವಿರ	ನಮ್ಮ ದೇಹದ ವಿಜ್ಞಾನ	ಡಾ.ಟಿ.ಆರ್. ಅನಂತರಾಮು, ಡಾ.ನಾ. ಸೋಮೇಶ್ವರ	ನವಕರ್ನಾಟಕ
ಎರಡನೇ ಬಹುಮಾನ	20 ಸಾವಿರ	ಅಜ್ಜಿ ಮನೆ ಸವಿ	ಉದ್ಯಾವರ ವಿಜಯಲಕ್ಷ್ಮಿ ಶೆಣೈ	ವಿಶೇಷ ಪಬ್ಲಿಕೇಷನ್ಸ್
ಮೂರನೇ ಬಹುಮಾನ	10 ಸಾವಿರ	ಮಹಾತ್ಮರ ಚರಿತಾಮೃತ	ಪ್ರಭುಚನ್ನಬಸವ ಸ್ವಾಮೀಜಿ	ಗುರುಚನ್ನಬಸವೇಶ್ವರ ಗ್ರಂಥಮಾಲೆ
ಮಕ್ಕಳ ಪುಸ್ತಕ ಸೊಗಸು ಬಹುಮಾನ	8 ಸಾವಿರ	ನೋಟ್‌ಬುಕ್-ಮಕ್ಕಳ ಕಥೆಗಳು	ಡಾ.ಕೆ. ಶಿವಲಿಂಗಪ್ಪ ಹಂದಿಹಾಳು	ಕವನ ಪ್ರಕಾಶನ
ಮುಖಪುಟ ಚಿತ್ರ ವಿನ್ಯಾಸ ಬಹುಮಾನ	10 ಸಾವಿರ	ಅಲ್ಪಸಂಖ್ಯಾತರು ಮತ್ತು ಜಾತಿ ವ್ಯವಸ್ಥೆ	ಡಾ. ಮುಜಾಫರ್ ಅಸ್ಸಾದಿ	ಜಿ. ಅರುಣ ಕುಮಾರ್ (ಬಹುಮಾನಿತ ಕಲಾವಿದ)
ಮುಖಪುಟ ಚಿತ್ರಕಲೆಯ ಬಹುಮಾನ	8 ಸಾವಿರ	ರೂಬಿಕ್ಸ್ ಕ್ಯೂಬ್ ಮತ್ತಿತರ ನಾಟಕಗಳು ಕ್ಲೀನ್ ಆ್ಯಂಡ್ ಕ್ಲಿಯರ್ ಪಾಯಖಾನೆ ಮತ್ತು ಆಯಾಮ	ಬೇಲೂರು ರಘುನಂದನ್	ಮಂಜುನಾಥ ವಿ.ಎಂ. (ಬಹುಮಾನಿತ ಕಲಾವಿದ)
ಪುಸ್ತಕ ಮುದ್ರಣ ಸೊಗಸು ಬಹುಮಾನ	5 ಸಾವಿರ	ಸಿರಿ ಬೆಳಕು	ಶಿ.ರಾ. ಹೂಗಾರ	ಗದಗದ ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್

25 ವರ್ಷಗಳ ಹಿಂದೆ — ಗುರುವಾರ, 5-6-1997

● **ಸೇಂಟ್ ಕಿಟ್ಸ್: ಪಿವಿಎನ್, ತಿವಾರಿ ಆರೋಪ ಮುಕ್ತಿ**

ನವದೆಹಲಿ, ಜೂನ್ 4 (ಪಿಟಿಐ, ಯುಎನ್‌ಐ) – ಸೇಂಟ್ ಕಿಟ್ಸ್ ವಂಚನೆ ಪ್ರಕರಣದಲ್ಲಿ ಮಾಜಿ ಪ್ರಧಾನಿ ಪಿ.ವಿ. ನರಸಿಂಹ ರಾವ್ ಹಾಗೂ ಮಾಜಿ ಕೇಂದ್ರ ಸಚಿವ ಕೆ.ಕೆ. ತಿವಾರಿಯವರನ್ನು ಆರೋಪದಿಂದ ಮುಕ್ತರನ್ನಾಗಿಸಿರುವ ದೆಹಲಿ ನ್ಯಾಯಾಲಯ ವಿವಾದಿತ ಸಾಧು ಚಂದ್ರ ಸ್ವಾಮಿ ಹಾಗೂ ಆತನ ಆಪ್ತ ಸಹಾಯಕ ಕೈಲಾಶ್ ನಾಥ್ ಅಗರ್ ವಾಲ್‌ಅವರನ್ನು ತಪ್ಪಿತಸ್ಥರೆಂದು ಘೋಷಿಸಿದೆ. ಭಾರತೀಯ ದಂಡ ಸಂಹಿತೆ ಸೆಕ್ಷನ್ 195 (ಸುಳ್ಳು ಸಾಕ್ಷ್ಯ ನೀಡಿಕೆ), 120 (ಬಿ) (ಪಿತೂರಿ) ಹಾಗೂ 469 (ಘನತೆಗೆ ಚ್ಯುತಿ ತರಲು ವಂಚನೆ) ಅನ್ವಯ ಚಂದ್ರಸ್ವಾಮಿ ಹಾಗೂ ಕೈಲಾಶ್‌ನಾಥ್ ಅವರ ವಿರುದ್ಧ ಈ ತೀರ್ಪು ನೀಡಿದೆ.

50 ವರ್ಷಗಳ ಹಿಂದೆ — ಸೋಮವಾರ, 5-6-1972

● **ಕಾವೇರಿ ಜಲವಿವಾದ: ಮೊಕದ್ದಮೆ ವಾಪಸಿಗೆ ತಮಿಳುನಾಡು ನಿರ್ಧಾರ**

ಮದರಾಸು, ಜೂನ್ 4 – ‘ಕಾವೇರಿ ಜಲವಿವಾದದ ಬಗ್ಗೆ ಈಚೆಗೆ ತಮಿಳು ನಾಡು, ಮೈಸೂರು ಮತ್ತು ಕೇರಳ ರಾಜ್ಯಗಳ ಮುಖ್ಯಮಂತ್ರಿಗಳ ನಡುವೆ ದೆಹಲಿಯಲ್ಲಿ ಒಪ್ಪಂದವಾದ ಕಾರಣ, ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟು ಮುಂದೆ ಇರುವ ತನ್ನ ಮೊಕದ್ದಮೆಯನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಿದೆ. ವಿಧಾನ ಸಭೆ ಪಕ್ಷಗಳ ನಾಯಕರ ಸಭೆಯಲ್ಲಿ ಇಂದು ಈ ನಿರ್ಧಾರ ಕೈಗೊಳ್ಳಲಾಗಿದೆ. ವಿವಾದವನ್ನು ಆರು ತಿಂಗಳೊಳಗೆ ಸಂಧಾನಗಳ ಮೂಲಕ ಇತ್ಯರ್ಥ ಪಡಿಸಿಕೊಳ್ಳಲು ನೀರಾವರಿ ಸಚಿವ ಕೆ.ಎಲ್. ರಾವ್ ಅವರ ಸಮ್ಮುಖದಲ್ಲಿ ನಡೆದ ಮಾತುಕತೆಯಲ್ಲಿ ಮೂವರು ಮುಖ್ಯಮಂತ್ರಿಗಳೂ ಸಮ್ಮತಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜೂನ್ 5, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ–ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಷಷ್ಠಿ ಅಹೋರಾತ್ರ ನಕ್ಷತ್ರ: ಆಶ್ಲೇಷ ಗಂ. 24-25 ಯೋಗ: ವ್ಯಾಘಾತ ಗಂ. 28-48, ಕರಣ: ಕೌಲವ ಗಂ. 17-50, ವೃಷಭ ಮಾಸದ 21 ನೇ ದಿನ. ರಾಹುಕಾಲ: ಸಾಯಂಕಾಲ 04:30 – 06:00
ಸೂರ್ಯೋದಯ : 06-06 ಸೂರ್ಯಾಸ್ತ : 06-52 ಮುಸ್ಲಿಂ ದಿನಾಂಕ : 05 ಜುಲ್ಕಾಯಿದ್
ದಿನ ವಿಶೇಷ : ವಿಂಧ್ಯಾವಾಸಿನಿ ಪೂಜಾ, ಅರಣ್ಯ ಷಷ್ಠಿ (ಬಂಗಾಳ) ಅಥವಾ ಜಮಾತ್ರಿ ಷಷ್ಠಿ, ವೈಟ್ ಭಾನುವಾರ-ಪೆಂಟೆಕೋಸ್ಟ್ (ಕ್ರಿಶ್ಚಿಯನ್)
ಅದೃಷ್ಟ ಸಂಖ್ಯೆ : 7, 11

ಮೇಷ: ರಾಜಕೀಯ ಚಟುವಟಿಕೆಗಳ ಹೆಚ್ಚಳ. ಪ್ರಮುಖ ಸ್ಥಾನ ಪಡೆಯಲು ಹೆಚ್ಚಿನ ತಯಾರಿ. ಆರೋಗ್ಯದಲ್ಲಿ ಗಮನಾರ್ಹ ಸುಧಾರಣೆ. ವ್ಯವಹಾರದಲ್ಲಿ ಸೋದರನನ್ನು ಸೇರಿಸಿಕೊಂಡು ನೂತನ ಘಟಕಗಳನ್ನು ಆರಂಭಿಸಬಹುದು.

ವೃಷಭ: ಸ್ನೇಹಿತರೊಂದಿಗೆ ಅಧ್ಯಾತ್ಮಿಕ ಮಾತುಕತೆಗಳಲ್ಲಿ ತೊಡಗುವಿರಿ. ವೈಯಕ್ತಿಕ ವಿಚಾರಗಳನ್ನು ಆಪ್ತರೊಬ್ಬರಲ್ಲಿ ಹೇಳಿಕೊಳ್ಳಲೇಬೇಕಾದ ಸಂದರ್ಭ. ದೇವತಾ ಕಾರ್ಯಗಳನ್ನು ನಡೆಸುವ ಬಗ್ಗೆ ತಂದೆಯವರಲ್ಲಿ ಮಾತನಾಡಿ.

ಮಿಥುನ: ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸುವಿರಿ. ಆತಂಕವಿಲ್ಲದೆ ಕೆಲಸಗಳು ಸಾಗುವುದು. ಆಫೀಸಿನ ಕೆಲಸಗಳೂ ಬೇಗನೇ ಮುಗಿಯುವುದು. ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿ ಲಾಭ. ಆರೋಗ್ಯದಲ್ಲಿ ಉತ್ತಮ.

ಕರ್ಕಾಟಕ: ಉದ್ಯೋಗದಲ್ಲಿ ಮೇಲಧಿಕಾರಿಗಳಿಂದ ಪ್ರಶಂಸೆ, ಭಡ್ತಿ. ಅನಿರೀಕ್ಷಿತ ಧನಲಾಭ. ವೈದ್ಯರ ತಪಾಸಣೆಯಿಂದ ಬಂದ ಫಲಿತಾಂಶದಿಂದ ಆತಂಕ. ಇನ್ನೊಬ್ಬರ ಅಭಿಪ್ರಾಯ ಪಡೆದು ಚಿಕಿತ್ಸೆ ತೆಗೆದುಕೊಳ್ಳಿ.

ಸಿಂಹ: ತಮ್ಮಂದಿರ ಓದಿನಲ್ಲಿ ಉತ್ತಮ ಪ್ರಗತಿ. ಅನಿರೀಕ್ಷಿತವಾಗಿ ಹಳೆಯ ಸ್ನೇಹಿತರ ಭೇಟಿ. ಬಂಧುಗಳ ಮನೆಯ ಶುಭಕಾರ್ಯಗಳಲ್ಲಿ ಹೆಚ್ಚಿನ ಜವಾಬ್ದಾರಿ ಮತ್ತು ಓಡಾಟವಿರುವುದು. ಮನೆಯ ಹಿರಿಯರ ಆರೋಗ್ಯ ಉತ್ತಮ.

ಕನ್ಯಾ: ಕಾರ್ಖಾನೆಯಲ್ಲಿ ಹೊಸ ವಿದ್ಯುತ್ ಉಪಕರಣಗಳ ಅಳವಡಿಕೆಗೆ ಅಧಿಕ ಹಣ ಹೂಡುವಿರಿ. ಹಿರಿಯ ಅಧಿಕಾರಿ ಭೇಟಿಯಿಂದ ಎಲ್ಲ ಕಾರ್ಯಗಳು ಸರಾಗ. ಶ್ರೀಕ್ಷೇತ್ರಕ್ಕೆ ಹೋಗುವ ಯೋಜನೆಯನ್ನು ಕಾರ್ಯರೂಪಕ್ಕೆ ತನ್ನಿ.

ತುಲಾ: ಸಣ್ಣ ಪುಟ್ಟ ವಿಚಾರಗಳನ್ನೂ ಉಪೇಕ್ಷಿಸದೆ ಮನೆಯವರೊಂದಿಗೆ ಮಾತನಾಡುವಿರಿ. ನಡೆಯಬೇಕಾದ ಶುಭ ಕಾರ್ಯಗಳನ್ನು ಹಿರಿಯರೊಂದಿಗೆ ಕುಳಿತು ನಿಶ್ಚಯ ಮಾಡಬಹುದು. ದೇವರ ದರ್ಶನದಿಂದ ಆತ್ಮವಿಶ್ವಾಸ.

ವೃಶ್ಚಿಕ: ಸಹೋದರನ ಮೂಲಕ ಜಮೀನಿನ ಖರೀದಿ ವಿಚಾರದ ಮಾತುಕತೆ. ಸಮೀಪವರ್ತಿಗಳ ಸಹಾಯದಿಂದ ಬಾಕಿ ಇದ್ದ ಕೆಲಸಗಳನ್ನು ಪೂರ್ಣ. ಸ್ವಂತ ಉದ್ಯೋಗದವರು ಅಧಿಕ ಬಂಡವಾಳವನ್ನು ಹಾಕುವುದರಿಂದ ನಷ್ಟ.

ಧನು: ಉನ್ನತ ಓದಿನೆಡೆಗೆ ಹೆಚ್ಚಿನ ಗಮನ ನೀಡಬೇಕು. ಚಿತ್ರಕಲೆಯ ಹೆಚ್ಚಿನ ಕಲಿಕೆಗಾಗಿ ವಿಶೇಷ ತರಗತಿಗೆ ಕಳುಹಿಸಲು ತಂದೆಯವರಿಂದ ಒಪ್ಪಿಗೆ ಸಿಗಲಿದೆ. ಕಾರ್ಯದೊತ್ತಡ ಕಡಿಮೆಯಾಗುವುದರಿಂದ ಮನಸ್ಸಿಗೆ ನಿರಾಳ.

ಮಕರ: ಕೆಲಸದಲ್ಲಿದ್ದ ಸಣ್ಣ ಪುಟ್ಟ ತೊಡಕು ನಿವಾರಿಸಿಕೊಳ್ಳುವುದನ್ನು ಅಭ್ಯಾಸಿಸಿ. ದೇವಸ್ಥಾನದಲ್ಲಿನ ವಿಶೇಷ ಕಾರ್ಯಕ್ರಮಗಳಿಗೆ ನಿಮ್ಮಿಂದ ಸಹಾಯ ಅಪೇಕ್ಷಿಸುವವರ ವಿಚಾರದಲ್ಲಿ ಮುಂಜಾಗ್ರತೆ ಇರಲಿ. ಹಳದಿ ಬಣ್ಣ ಅಶುಭ.

ಕುಂಭ: ಮಕ್ಕಳ ಕೆಲಸಗಳ ಬಗ್ಗೆ ನೆರೆಯವರಿಂದ ಪ್ರಶಂಸೆಯ ಮಾತು ಕೇಳಿ ಆನಂದವಾಗುತ್ತದೆ. ಅಪರೂಪದ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭ. ನೃತ್ಯಾಭ್ಯಾಸ ಮುಂದುವರೆಸುವಂತೆ ಅಧ್ಯಾಪಕರಿಂದ ಒತ್ತಾಯ.

ಮೀನ: ಮಗನ ಸಹಾಯದಿಂದ ಸಂಬಂಧಿಕರೊಬ್ಬರ ಕೆಲಸ ಸುಗಮ, ಮನಸ್ಸಿಗೆ ಹೆಚ್ಚಿನ ಸಂತಸ. ಆಡಳಿತಾತ್ಮಕ ವಿಚಾರದಲ್ಲಿ ಭಾರಿ ಬದಲಾವಣೆಗಳ ಅಗತ್ಯಗಳನ್ನು ಸಂಸ್ಥಾಪಕರಿಗೆ ಮನವರಿಕೆ ಮಾಡಿಕೊಡುವಿರಿ.

ಗುಂಡಣ್ಣ




ಪದಬಂಧ 4979 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬೇಧಿಯಾಗಲು ಕೊಡುವ ಔಷಧ (4)
3.ಈತ ಮುಪ್ಪಿಲ್ಲದವನು (3)
4.ಜೊತೆಯಲ್ಲಿ ವಾಸಿಸುವಿಕೆ (4)
6.ಪುಸ್ತಕದ ಹಾಳೆಯ ಒಂದು ಮಗ್ಗುಲು (2)
7.ಗಂಡು ಕೋಳಿಯಿದು (2)
8.ಹಿರಿಯ ಸಹೋದರಿ ಇಲ್ಲಿದ್ದಾಳೆ (2)
9.ಹಂಗಿಗೆ ಒಳಗಾದವನು (2)
10.ಪ್ರತಿಭೆಯಲ್ಲಿ ಹೊಮ್ಮಿದ ಕಾಂತಿ (2)
11.ಮಾತುಲನಾಡಿದ ನುಡಿ (2)
13.ಪದಗಳ ಅರ್ಥವನ್ನು ವಿವರಿಸುವ ಗ್ರಂಥ (4)
15.ಬಣವೆ ಹಾಕುವಾಗಿನ ತೊಂದರೆ (3)
16.ದೇವರಲ್ಲಿ ನಂಬಿಕೆ ಇಲ್ಲದವ (4)

ಮೇಲಿಂದ ಕೆಳಕ್ಕೆ

1.ಅಗಲಿಕೆ ಈ ತರಹ ಬಂದಿದೆ (3)
2.ಕನಸಲ್ಲಿರುವ ಗಲೀಜು! (2)
3.ನಿಷೇಧಿಸಿರುವ ಸ್ಥಳಕ್ಕೆ ಪ್ರವೇಶ ಮಾಡುವುದು (7)
5.ಸಮಾಜವನ್ನು ತಿದ್ದುವುದು (7)
6.ಹಕ್ಕಿಗಳ ಹಿಂಬದಿಯ ಗರಿ (2)
9.ಎರಡೆರಡು ತಿಂಗಳುಗಳ ಕಾಲದ ಅವಧಿ (2)
12.ಕೊನೆಗೆ ಬರ ಬಂದಾಗ ನೋಡಿದ ಆಕಾಶ (3)
14.ಕಾಟ ಕೊಡುವ ಗ್ರಹವೇ ಇದು? (2)



4978ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿತರಕ 3.ಸನ್ಮತಿ 5.ಮರುಕ 7.ಉಪಾಯ 8.ಕಾಲಹರಣ 11.ಸಾರಣೆ 12.ಮಲ್ಲಿಗೆ 15.ನಗರ 16.ಸಮುದಾಯ

ಮೇಲಿಂದ ಕೆಳಕ್ಕೆ: 1.ವಿಲೋಮ 2.ಕಥ 3.ಸಮಯ 4.ತಿರುಮಂತ್ರ 6.ಕಳಂಕಾ 7.ಉದಾಹರಣೆ 9.ಣರಮ 10.ಉಪಮಾನ 11.ಸಾವಿರ 13.ಗೆಳೆಯ 14.ಮೋಸ

ಸುಡೊಕು 5365

		5	8				1	
2								
		4			2	8		6
3		6			8	5		9
		1				3		7
4			6		1		9	
	3				5	7		8
6		8		3			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5364 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ನಾಡಗೀತೆ: ವಾರದೊಳಗೆ ತೀರ್ಮಾನ– ಸುನೀಲ್ ಕುಮಾರ್

ಬೀದರ್: 'ನಾಡಗೀತೆಯಲ್ಲಿ ಯಾವ ಅಂಶ ಉಳಿಸಿಕೊಳ್ಳಬಹುದು ಅಥವಾ ಕೈಬಿಡಬಹುದು ಎಂಬ ಬಗ್ಗೆ ಒಂದು ವಾರದಲ್ಲಿ ತೀರ್ಮಾನಿಸಲಾಗುವುದು' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸುನೀಲ್ ಕುಮಾರ್ ಹೇಳಿದರು.

'ರಾಷ್ಟ್ರಕವಿ ಕುವೆಂಪು ಅವರ ನಾಡಗೀತೆ ವಿರೂಪಗೊಳಿಸಿದವರ ವಿರುದ್ಧ ಕ್ರಮಜರುಗಿಸುವ ಮತ್ತು ಪಠ್ಯಪುಸ್ತಕ ಪರಿಷ್ಕರಣ ಸಮಿತಿ ವಿಸರ್ಜನೆ ಕುರಿತು ಮುಖ್ಯಮಂತ್ರಿ ಹೇಳಿದ್ದಾರೆ. ಈ ಬಗ್ಗೆ ಮಾತನಾಡುವುದಿಲ್ಲ' ಎಂದರು.

'ಎಲ್ಲ ಚಡ್ಡಿಗಳಿಗೂ ಬೆಂಕಿ ಹಚ್ಚುವುದಾಗಿ ಮೊಹಮ್ಮದ್ ನಲಪಾಡ್ ಹೇಳಿದ್ದು ಖಂಡನೀಯ. ಜವಾಹರಲಾಲ್ ನೆಹರೂ ಮೊದಲಿಗೆ ಆರ್‌ಎಸ್‌ಎಸ್ ನಿಷೇಧಿಸಿದ್ದರು. ಆದರೆ, ಆರ್‌ಎಸ್‌ಎಸ್ ಇನ್ನಷ್ಟು ಬೆಳೆಯಿತು. ಅವರಿಂದ ಕಲಿಯಬೇಕಾದದ್ದು ಏನೂ ಇಲ್ಲ' ಎಂದರು.

ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ಅವರನ್ನು ಕುಟುಕಿದ ಎಚ್‌ಡಿಕೆ

'ಅಡ್ಡ ಮತದಾನ ಸುಲಭವಲ್ಲ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ, ಜೆಡಿಎಸ್‌ನ ಹೆಚ್ಚುವರಿ ಮತಗಳನ್ನು ಅಡ್ಡ ಮತದಾನದ ಮೂಲಕ ಪಡೆದು 2ನೇ ಅಭ್ಯರ್ಥಿ ಗೆಲ್ಲಿಸಿಕೊಳ್ಳಬಹುದು ಎಂದು ಲೆಕ್ಕಾಚಾರ ಹಾಕಿರುವ ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ತಮ್ಮ ಮೇಲೆ ತಾವೇ ಚಪ್ಪಡಿ ಕಲ್ಲು ಎಳೆದುಕೊಂಡಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಕುಟುಕಿದರು.

'ಅವರು ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆದಿದ್ದಾರೋ ಅಥವಾ ತಾವೇ ಕಲ್ಲು ಎಳೆದುಕೊಂಡಿದ್ದಾರೆಯೋ ಎನ್ನುವುದು ಫಲಿತಾಂಶದ ದಿನ ಗೊತ್ತಾಗಲಿದೆ. ಇದು ಮುಕ್ತ ಚುನಾವಣೆಯಾಗಿರುವುದರಿಂದ ಅಡ್ಡ ಮತದಾನ ಅಷ್ಟು ಸುಲಭ ಅಲ್ಲ. ನಮ್ಮ ಪಕ್ಷದ 32 ಮತಗಳು ನಮ್ಮ ಅಭ್ಯರ್ಥಿಗೆ ಸಿಗಲಿದೆ ಎನ್ನುವ ವಿಶ್ವಾಸ ತಮಗಿದೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಈಗ ನಾಲ್ಕನೇ ಅಭ್ಯರ್ಥಿ ಗೆಲುವಿಗೆ ಪೈಪೋಟಿ ಏರ್ಪಟ್ಟಿದೆ. ಕಾಂಗ್ರೆಸ್‌ನ ಎರಡನೇ ಅಭ್ಯರ್ಥಿ ಗೆಲ್ಲಲು ಸಾಧ್ಯವಿಲ್ಲ. ಇದು ಸಿದ್ದರಾಮಯ್ಯ ಅವರಿಗೆ ಗೊತ್ತಿದ್ದರೂ ಜೆಡಿಎಸ್ ಅಭ್ಯರ್ಥಿ ಸೋಲಿಸಲು, ಬಿಜೆಪಿಯ ಮೂರನೇ ಅಭ್ಯರ್ಥಿ ಗೆಲ್ಲಿಸಲು ಅಭ್ಯರ್ಥಿ ಕಣಕ್ಕಿಳಿಸಿದ್ದಾರೆ' ಎಂದು ಅವರು ಹೇಳಿದರು.

'ಜೆಡಿಎಸ್ ಪಕ್ಷದ ಅಭ್ಯರ್ಥಿ ಕುಪೇಂದ್ರ ರೆಡ್ಡಿ ಹಾಗೂ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಬಹುಕಾಲದ ಸ್ನೇಹಿತರು. ಹೀಗಾಗಿ ಖರ್ಗೆ ಅವರು ತಮ್ಮ ಪಕ್ಷದ ಹೈಕಮಾಂಡ್ ಮಟ್ಟದಲ್ಲಿ ರೆಡ್ಡಿ ಪರ ವಕಾಲತ್ತು ವಹಿಸಿದ್ದರು. ನಾವು ಖರ್ಗೆ ಅವರನ್ನು ಕೇಳಿರಲಿಲ್ಲ. ಖರ್ಗೆ ಮುಖ್ಯಮಂತ್ರಿ ಅಭ್ಯರ್ಥಿಯಾಗುವುದಾದರೆ ದೇವೇಗೌಡರ ಬೆಂಬಲವಿದೆ ಎಂಬ ಮಾತುಗಳು ಸುಳ್ಳು' ಎಂದು ಹೇಳಿದರು.

> **ರಾಜ್ಯಸಭೆ ಚುನಾವಣೆಯಲ್ಲಿ ಗೆದ್ದರೆ ಪಕ್ಷಕ್ಕೆ ಶಕ್ತಿ ಬರುತ್ತದೆ. ಗೆಲ್ಲದಿದ್ದರೆ ನಷ್ಟವೇನಿಲ್ಲ. ನನ್ನ ಗುರಿ ರಾಜ್ಯಸಭೆ ಅಲ್ಲ. 2023ರ ವಿಧಾನಸಭೆ ಚುನಾವಣೆಯಲ್ಲಿ 123 ಸ್ಥಾನ ಗೆಲ್ಲುವುದೇ ಗುರಿ**
> **ಎಚ್‌.ಡಿ.ಕುಮಾರಸ್ವಾಮಿ** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

> **ರಾಜ್ಯಸಭೆ ಚುನಾವಣೆಯಲ್ಲಿ ಎರಡನೇ ಅಭ್ಯರ್ಥಿ ಹಾಕಿರುವ ಕಾಂಗ್ರೆಸ್‌ನವರು, ನಮ್ಮ ವೋಟು ಕೇಳಲ್ಲ ಎಂದಿದ್ದಾರೆ. ಬಹುಶಃ ಬಿಜೆಪಿ ವೋಟ್ ಕೇಳ್ತಾರೊ ಗೊತ್ತಿಲ್ಲ**
> **ಎಚ್‌.ಡಿ.ರೇವಣ್ಣ,** ಶಾಸಕ

ಕಾಂಗ್ರೆಸ್‌ಗೆ ಜೆಡಿಎಸ್ ಬೆಂಬಲ ನೀಡಬೇಕು: ಎಚ್. ಸಿ. ಮಹದೇವಪ್ಪ

ಬೆಂಗಳೂರು: 'ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಎರಡನೇ ಅಭ್ಯರ್ಥಿಗೆ ಜೆಡಿಎಸ್ ಬೆಂಬಲ ನೀಡಬೇಕು' ಎಂದು ಕಾಂಗ್ರೆಸ್ ಮುಖಂಡ ಎಚ್‌.ಸಿ. ಮಹದೇವಪ್ಪ ಹೇಳಿದ್ದಾರೆ.

'ರಾಜ್ಯಸಭೆಯಲ್ಲಿ ಗೆಲ್ಲಲು ಬೇಕಾದಷ್ಟು ಬೆಂಬಲ ಇಲ್ಲದಿದ್ದರೂ ತಮ್ಮ ಅಭ್ಯರ್ಥಿಯನ್ನು ಚುನಾವಣೆಗೆ ನಿಲ್ಲಿಸಿದ್ದು ಯಾವ ಕಾರಣಕ್ಕೆ ಎಂಬುದನ್ನು ದೇವೇಗೌಡ ಅವರು ಸ್ಪಷ್ಟಪಡಿಸಬೇಕು' ಎಂದಿದ್ದಾರೆ.

'ಕಳೆದ ಲೋಕಸಭಾ ಚುನಾವಣೆಯಲ್ಲಿ ಮೈತ್ರಿಯ ನಂತರದಲ್ಲಿ ತುಮಕೂರು ಕ್ಷೇತ್ರವನ್ನು ಪಡೆದಿದ್ದ ದೇವೇಗೌಡರು, ಅಲ್ಲಿ ಸೋತರು ಎಂಬ ಕಾರಣಕ್ಕೆ ಹಿರಿಯ ನಾಯಕರು ಎಂಬ ಗೌರವ ಇಟ್ಟುಕೊಂಡು ಕಾಂಗ್ರೆಸ್ ಹೈಕಮಾಂಡ್ ಅವರಿಗೆ ರಾಜ್ಯಸಭೆಯಲ್ಲಿ ಅವಕಾಶವನ್ನು ಕಲ್ಪಿಸಿದೆ. ಹೀಗಿರುವಾಗ ತಾನು ಕಾಂಗ್ರೆಸ್ ಪರವಾಗಿ ನಿಲ್ಲಬೇಕಾದ್ದು ನ್ಯಾಯಯುತವಾದ ನಡೆ ಎಂದು ದೇವೇಗೌಡರಿಗೆ ಅನಿಸಬೇಕಿತ್ತು' ಎಂದಿದ್ದಾರೆ.

ಸುದ್ದಿ 2 ನಿಮಿಷ

ಅರುಣ್ ಸಿಂಗ್ ನೇತೃತ್ವದಲ್ಲಿ ಇಂದು ಸರಣಿ ಸಭೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಎಂಟು ವರ್ಷಗಳನ್ನು ಪೂರೈಸಿರುವ ಪ್ರಯುಕ್ತ ಪ್ರಚಾರ ಅಭಿಯಾನ, ಪಕ್ಷ ಸಂಘಟನೆ, ರಾಜ್ಯಸಭೆ ಮತ್ತು ವಿಧಾನ ಪರಿಷತ್ ಚುನಾವಣೆ ಕುರಿತಂತೆ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ನೇತೃತ್ವದಲ್ಲಿ ಭಾನುವಾರ ಸರಣಿ ಸಭೆಗಳು ನಡೆಯಲಿವೆ.



ಪಕ್ಷದರಾಜ್ಯ ಘಟಕದ ಕಚೇರಿ ಜಗನ್ನಾಥ ಭವನಕ್ಕೆ ಭಾನುವಾರ ಬೆಳಿಗ್ಗೆಯೇ ಬರಲಿರುವ ಅರುಣ್ ಸಿಂಗ್, ವಿವಿಧ ಜಿಲ್ಲಾ ಘಟಕಗಳ ಪ್ರಮುಖರ ಜತೆ ಆನ್‌ಲೈನ್ ಮೂಲಕ ಸಭೆ ನಡೆಸುವರು. ಕೇಂದ್ರ ಸರ್ಕಾರದ ಸಾಧನೆಗಳ ಕುರಿತ ಪ್ರಚಾರ ಅಭಿಯಾನದ ಪ್ರಗತಿ ಬಗ್ಗೆ ಮಾಹಿತಿ ಪಡೆಯುವರು. ಬಳಿಕ ವಿವಿಧ ಘಟಕಗಳ ಪ್ರಮುಖರ ಜತೆಗೂ ಆನ್‌ಲೈನ್ ಮೂಲಕ ಸಭೆ ನಡೆಸುವರು ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ರಾಜ್ಯಸಭೆ ಮತ್ತು ವಿಧಾನ ಪರಿಷತ್ ಚುನಾವಣೆಗೆ ಸಂಬಂಧಿಸಿದಂತೆ ಅಧಿಕೃತವಾಗಿ ಯಾವುದೇ ಸಭೆ ನಿಗದಿಯಾಗಿಲ್ಲ. ಆದರೆ, ಸಚಿವರು ಮತ್ತು ಶಾಸಕರ ಜತೆ ಅನೌಪಚಾರಿಕವಾಗಿ ಚರ್ಚೆ ನಡೆಸುವ ಸಾಧ್ಯತೆ ಇದೆ ಎಂದು ಹೇಳಿವೆ.

ಎಲ್ಲಿಯೇ ನಿಂತರೂ ಚಡ್ಡಿ ನಿಮ್ಮನ್ನು ಸೋಲಿಸಲಿದೆ: ಈಶ್ವರಪ್ಪ

ಶಿವಮೊಗ್ಗ: 'ಸಿದ್ದರಾಮಯ್ಯ ಅವರೇ, ಚಡ್ಡಿಗೆ ಬೆಂಕಿ ಹಚ್ಚಿ ನೋಡಿ ನಿಮ್ಮ ಬುಡವೇ ಬೆಂದು ಬೂದಿಯಾಗುತ್ತದೆ. ಆರ್‌ಎಸ್‌ಎಸ್ ತಂಟೆಗೆ ಬರಬೇಡಿ' ಎಂದು ಶಾಸಕ ಕೆ.ಎಸ್.ಈಶ್ವರಪ್ಪ ಶನಿವಾರ ಎಚ್ಚರಿಕೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಎನ್‌ಎಸ್‌ಯುಐ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿರುವ ಗೂಂಡಾಗಳ ಬಂಧಿಸದಿದ್ದರೆ ಚಡ್ಡಿ ಸುಡುವ ಪ್ರತಿಭಟನೆ ನಡೆಸುತ್ತೇವೆ' ಎಂಬ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆಗೆ ಹೀಗೇ ಹೇಳಿದರು.

'ರಾವಣ ಹನುಮನ ಬಾಲಕ್ಕೆ ಬೆಂಕಿ ಹಚ್ಚಿದ... ಲಂಕೆಯೇ ಸುಟ್ಟು ಹೋಯಿತು. ಕಾಂಗ್ರೆಸ್ ಪಕ್ಷವನ್ನು ಚಟ್ಟದಲ್ಲಿಟ್ಟಾಗಿದೆ. ಇನ್ನು ಬೆಂಕಿ ಹಚ್ಚುವುದೊಂದೇ ಬಾಕಿ ಇದೆ. ಆ ಕೆಲಸ ನಿಮಗಿಂತ ಚೆನ್ನಾಗಿ ಇನ್ಯಾರು ಮಾಡಲು ಸಾಧ್ಯ' ಎಂದು ಪ್ರಶ್ನಿಸಿದರು.

'ಆರ್‌ಎಸ್‌ಎಸ್ ಚಡ್ಡಿ ಸುದ್ದಿಗೆ ಬಂದರೆ ಹುಷಾರ್. ನಿಮ್ಮ ಈ ಹುಚ್ಚು ಹೇಳಿಕೆಗಳನ್ನು ನಿಲ್ಲಿಸಿ. ನೀವು ಎಲ್ಲಿಯೇ ಚುನಾವಣೆಗೆ ನಿಂತರೂ ಈ ಚಡ್ಡಿಯೇ ನಿಮ್ಮನ್ನು ಸೋಲಿಸುತ್ತದೆ' ಎಂದು ಎಚ್ಚರಿಕೆ ನೀಡಿದರು.

ಕಾರಿಡಾರಿನಲ್ಲೂ ಹಿಜಾಬ್ ನಿಷೇಧ

ಉಪ್ಪಿನಂಗಡಿ (ದಕ್ಷಿಣ ಕನ್ನಡ): ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಾರಿಡಾರ್‌ನಲ್ಲೂ ಹಿಜಾಬ್ ನಿಷೇಧಿಸಿ ಶಾಸಕ ಸಂಜೀವ ಮಠಂದೂರು ಅಧ್ಯಕ್ಷತೆಯಲ್ಲಿ ನಡೆದ ಕಾಲೇಜು ಅಭಿವೃದ್ಧಿ ಸಮಿತಿಯ (ಸಿಡಿಸಿ) ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಇದನ್ನು ವಿರೋಧಿಸಿ ವಿದ್ಯಾರ್ಥಿನಿಯರು ಪ್ರತಿಭಟನೆ ನಡೆಸಿದರು. ಬುರ್ಖಾ ಧರಿಸಿಕೊಂಡು ವಿಶ್ರಾಂತಿ ಕೊಠಡಿಯಲ್ಲಿ ಕುಳಿತ ವಿದ್ಯಾರ್ಥಿನಿಯರು ಮಧ್ಯಾಹ್ನದ ನಂತರ ಮನೆಗೆ ತೆರಳಿದರು.

ಹಿಜಾಬ್‌ಗೆ ಸಂಬಂಧಿಸಿದ ಕೋರ್ಟ್ ತೀರ್ಪು ತರಗತಿ ಕೊಠಡಿಯೊಳಗೆ ಮಾತ್ರ ಅನ್ವಯಿಸುತ್ತದೆ ಎಂದು ವಾದಿಸಿ, ವಿದ್ಯಾರ್ಥಿನಿಯರು ಕಾರಿಡಾರ್‌ನಲ್ಲಿ ಹಿಜಾಬ್ ಧರಿಸಿ ಸುತ್ತಾಡುತ್ತಿರುವುದರಿಂದ ಸಮಸ್ಯೆ ಉಂಟಾಗಿದೆ ಎಂಬ ಕಾರಣಕ್ಕೆ ಕಾರಿಡಾರ್‌ನಲ್ಲೂ ಹಿಜಾಬ್‌ಗೆ ನಿಷೇಧ ಹೇರಲಾಗಿದೆ ಎಂಬುದು ಸಮಿತಿಯ ಹೇಳಿಕೆ.

ಈ ನಡುವೆ ಹಿಜಾಬ್ ವಿವಾದಕ್ಕೆ ಸಂಬಂಧಿಸಿ ಪತ್ರಕರ್ತರ ವಿರುದ್ಧ ಕೆಲ ವಿದ್ಯಾರ್ಥಿನಿಯರು ದಾಖಲಿಸಿರುವ ಪ್ರಕರಣವನ್ನು ವಾಪಸ್ ಪಡೆಯುವಂತೆ ಶಾಸಕ ಸಂಜೀವ ಮಠಂದೂರು ಅವರು, ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಕೋರಿದ್ದಾರೆ.

ಕಾಶ್ಮೀರ: ಹಿಜ್ಬುಲ್ ಕಮಾಂಡರ್ ಹತ್ಯೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಅನಂತ್‌ನಾಗ್ ಜಿಲ್ಲೆಯಲ್ಲಿ ಶನಿವಾರ ರಾತ್ರಿ ಭದ್ರತಾ ಪಡೆಗಳು ಮತ್ತು ಉಗ್ರರ ನಡುವೆ ನಡೆದ ಎನ್‌ಕೌಂಟರ್‌ನಲ್ಲಿ ಹಿಜ್ಬುಲ್ ಮುಜಾಹಿದ್ದೀನ್ (ಎಚ್‌ಎಂ) ಉಗ್ರ ಸಂಘಟನೆಯ ಕಮಾಂಡರ್‌ನನ್ನು ಹತ್ಯೆ ಮಾಡಲಾಗಿದೆ. ಘಟನೆಯಲ್ಲಿ ಮೂವರು ಸೈನಿಕರು ಹಾಗೂ ನಾಗರಿಕರೊಬ್ಬರಿಗೆ ಗಾಯಗಳಾಗಿವೆ.

ಹತ್ಯೆಗೀಡಾದ ಉಗ್ರನನ್ನು ನಿಸಾರ್ ಖಾಂಡೆ ಎಂದು ಗುರುತಿಸಲಾಗಿದೆ. ಗಾಯಗೊಂಡ ಸೈನಿಕರು ಮತ್ತು ನಾಗರಿಕರೊಬ್ಬರನ್ನು ಶ್ರೀನಗರದ ಸೇನಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಸ್ಥಿತಿ ಸ್ಥಿರವಾಗಿದೆ ಎಂದು ಮೂಲಗಳು ತಿಳಿಸಿವೆ.

'ಅನಂತ್‌ನಾಗ್‌ನಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ನಿಸಾರ್ ಖಾಂಡೆ ಎಂಬಾತನನ್ನು ಹತ್ಯೆ ಮಾಡಲಾಗಿದೆ. ಸ್ಥಳದಲ್ಲಿ ಒಂದು ಎಕೆ 47 ರೈಫಲ್ ಸೇರಿದಂತೆ ಇತರ ಶಸ್ತ್ರಾಸ್ತ್ರ, ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಾರ್ಯಾಚರಣೆ ಪ್ರಗತಿಯಲ್ಲಿದೆ' ಎಂದು ಕಾಶ್ಮೀರ ವಲಯ ಪೊಲೀಸರು ಟ್ವೀಟ್ ಮಾಡಿದ್ದಾರೆ. ಶುಕ್ರವಾರ ಅನಂತ್‌ನಾಗ್‌ನ ರಿಷಿಪೋರಾ ಗ್ರಾಮದಲ್ಲಿ ಭದ್ರತಾ ಪಡೆಗಳು ಮತ್ತು ಉಗ್ರರ ನಡುವೆ ಗುಂಡಿನ ಚಕಮಕಿ ನಡೆದಿತ್ತು. ಉಗ್ರರು ಪರಾರಿಯಾಗುವ ಮುನ್ನವೇ ಭದ್ರತಾ ಪಡೆಗಳು ಮತ್ತೆ ಕಾರ್ಯಾಚರಣೆ ಕೈಗೊಂಡು ಉಗ್ರನನ್ನು ಹತ್ಯೆ ಮಾಡಿವೆ.

ಏಕಬಳಕೆಯ ಪ್ಲಾಸ್ಟಿಕ್ ನಿಷೇಧ: ಕೇಂದ್ರದ ಮಾರ್ಗಸೂಚಿ

ನವದೆಹಲಿ (ಪಿಟಿಐ): ಏಕ ಬಳಕೆಯ ಪ್ಲಾಸ್ಟಿಕ್ ಉತ್ಪನ್ನಗಳ ನಿಷೇಧ ಆದೇಶ ಜಾರಿಗೆ ಒತ್ತು ನೀಡುವಂತೆ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಶನಿವಾರ ಸೂಚಿಸಿದೆ. 'ಸ್ವಚ್ಛ ಹಾಗೂ ಹಸಿರು' ಕಾರ್ಯಕ್ರಮದಡಿ ವಾತಾವರಣ ಶುದ್ಧೀಕರಣಕ್ಕೆ ಕೊಡುಗೆ ನೀಡುವಂತೆ ಸೂಚಿಸಲಾಗಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ಪರಿಸರ ಸಚಿವಾಲಯದ ಸೂಚನೆಯನ್ವಯ 4,704 ನಗರ ಸ್ಥಳೀಯ ಸಂಸ್ಥೆಗಳ ಪೈಕಿ 2,591 ಘಟಕಗಳು ಈಗಾಗಲೇ ಏಕಬಳಕೆಯ ಪ್ಲಾಸ್ಟಿಕ್ ನಿಷೇಧಿಸಿ ಆದೇಶ ಹೊರಡಿಸಿವೆ. ಆದರೆ ಉಳಿದ 2,113 ನಗರ ಸ್ಥಳೀಯ ಸಂಸ್ಥೆಗಳು ಇದೇ ಜೂನ್ 30ರೊಳಗೆ ಇದೇ ಕ್ರಮವನ್ನು ಅನುಸರಿಸಲು ಆಯಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಕ್ರಮ ತೆಗೆದುಕೊಳ್ಳಬೇಕು ಎಂದು ಕೇಂದ್ರ ನಿರ್ದೇಶಿಸಿದೆ.

ವಿಶ್ವ ಪರಿಸರ ದಿನಾಚರಣೆಯ ಮುನ್ನಾದಿನ ಪ್ರಕಟಣೆ ಹೊರಡಿಸಿರುವ ಕೇಂದ್ರ ವಸತಿ ಹಾಗೂ ನಗರಾಭಿವೃದ್ಧಿ ಸಚಿವಾಲಯ, ದೇಶವನ್ನು ಏಕಬಳಕೆಯ ಪ್ಲಾಸ್ಟಿಕ್ ಮುಕ್ತಗೊಳಿಸಲು ನಿಗದಿಪಡಿಸಿರುವ ವಿವಿಧ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳುವಂತೆ ಸೂಚಿಸಿದೆ.

ಬೃಹತ್ ಪ್ರಮಾಣದಲ್ಲಿ ಪ್ಲಾಸ್ಟಿಕ್ ಕಸ ಸಂಗ್ರಹ ಅಭಿಯಾನ, ವಿದ್ಯಾರ್ಥಿಗಳು, ಸ್ವಯಂ ಸೇವಕರು, ಎನ್‌ಜಿಒ ಹಾಗೂ ನಾಗರಿಕರ ಜೊತೆಗೂಡಿ ಗಿಡನೆಡುವ ಯೋಜನೆಗಳನ್ನು ಹಮ್ಮಿಕೊಳ್ಳುವಂತೆ ಸೂಚಿಸಲಾಗಿದೆ.

ಕೈಗಾರಿಕಾ ನಗರದಿಂದ ಉಕ್ರೇನ್ ಸೇನೆ ವಾಪಸ್?

ಮಾಸ್ಕೊ/ ಕೀವ್ (ಎಎಫ್‌ಪಿ): ಪೂರ್ವ ಉಕ್ರೇನ್‌ನ ಪ್ರಮುಖ ನಗರ ಸೆವೆರೊಡೊನೆಟ್‌ಸ್ಕ್‌ನಿಂದ ಉಕ್ರೇನ್ ಸೇನೆ ತನ್ನ ಕೆಲವು ಪಡೆಗಳನ್ನು ಹಿಂಪಡೆಯುತ್ತಿದೆ ಎಂದು ರಷ್ಯಾ ಸೇನೆ ಶನಿವಾರ ಹೇಳಿದೆ.

'ಸೆವೆರೊಡೊನೆಟ್‌ಸ್ಕ್ ಮೇಲಿನ ನಿಯಂತ್ರಣಕ್ಕೆ ನಡೆಯುತ್ತಿರುವ ನಿರ್ಣಾಯಕ ಹೋರಾಟದಲ್ಲಿ ಉಕ್ರೇನ್ ಸೇನಾ ಪಡೆ ಭಾರಿ ನಷ್ಟ ಅನುಭವಿಸಿದ ನಂತರ, ಕೆಲವು ತುಕಡಿಗಳನ್ನು ಹಿಂಪಡೆದು, ಲೈಸಿಚಾನ್‌ಸ್ಕ್ ಕಡೆಗೆ ನಿಯೋಜಿಸುತ್ತಿದೆ' ಎಂದು ಅದು ಹೇಳಿದೆ.

'ಅಜೋಟ್ ಕಾರ್ಖಾನೆಯಲ್ಲಿ ನೈಟ್ರೇಟ್ ಮತ್ತು ನೈಟ್ರಿಕ್ ಆಮ್ಲದ ಟ್ಯಾಂಕ್‌ಗಳನ್ನು ಸ್ಫೋಟಕವಾಗಿ ಬಳಸಲು ಅವರ ಸೇನೆಗೆ ಅಧಿಕಾರಿಗಳು ಆದೇಶಿಸಿ, ಈ ಪ್ರದೇಶದಲ್ಲಿ ವಿಷಾನಿಲ ಹರಡುವ ಮೂಲಕ ನಮ್ಮ ಸೇನಾ ಕಾರ್ಯಾಚರಣೆಯನ್ನು ಹಿಮ್ಮೆಟ್ಟಿಸಲು ಯತ್ನಿಸಿದರು' ಎಂದು ರಷ್ಯಾ ಹೇಳಿದೆ. ಶನಿವಾರ ರಷ್ಯಾ ವಾಯುಪಡೆ ಉಕ್ರೇನ್ ಪೂರ್ವ ಪ್ರದೇಶದಲ್ಲಿ ದಾಳಿ ತೀವ್ರಗೊಳಿಸಿದೆ.

ಕವಿ ಎಚ್‌.ಎಸ್‌. ಶಿವಪ್ರಕಾಶ್ ಆಶಯ • 'ಮಲೆಗಳಲ್ಲಿ ಮದುಮಗಳು' ಅನುವಾದಿತ ಕೃತಿ ಬಿಡುಗಡೆ

'ಜಗತ್ತಿನ ಭಾಷೆಗಳನ್ನು ಕುವೆಂಪು ಸಾಹಿತ್ಯ ತಲುಪಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುವೆಂಪು ಅವರ ಕೃತಿಗಳಲ್ಲಿ ನಮ್ಮ ಸಂಸ್ಕೃತಿಯ ಸಮಗ್ರ ದರ್ಶನವಿದೆ. ಅವರ ಕೃತಿಗಳು ಜಗತ್ತಿನ ಪ್ರಮುಖ ಭಾಷೆಗಳಿಗೆ ಅನುವಾದವಾಗಬೇಕು' ಎಂದು ಕವಿ ಎಚ್‌.ಎಸ್. ಶಿವಪ್ರಕಾಶ್ ಅಭಿಪ್ರಾಯಪಟ್ಟರು.

ಕುಪ್ಪಳ್ಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ಶನಿವಾರ ಇಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಅನುವಾದಿತ 'ದಿ ಬ್ರೈಡ್ ಇನ್ ದಿ ರೈನಿ ಮೌಂಟೆನ್ಸ್' ಹಾಗೂ ಕಡಿದಾಳ್ ಪ್ರಕಾಶ್ ಅವರ 'ಕಟ್ಟುವ ಹಾದಿಯಲ್ಲಿ...' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಕುವೆಂಪು ಅವರ ಕೃತಿಗಳು ವಿಶ್ವದಸೊತ್ತು. ಅವರ ಕೃತಿಗಳು ಜಗತ್ತಿನಲ್ಲಿ ಹೆಚ್ಚಿನ ಓದುಗರಿರುವ ಸ್ಪ್ಯಾನಿಷ್, ಲ್ಯಾಟಿನ್, ಚೀನಿ ಹಾಗೂ ಅರೇಬಿಕ್ ಭಾಷೆಗೂ ಕೃತಿಗಳು ಅನುವಾದವಾಗಬೇಕು. ಬಂಗಾಳಿ ಭಾಷೆಯಲ್ಲಿ ಕುವೆಂಪು ಅವರು ಕೃತಿಗಳನ್ನು ಬರೆದಿದ್ದರೆ ನೊಬೆಲ್ ಪ್ರಶಸ್ತಿ ಸಿಗುತ್ತಿತ್ತು. ರವೀಂದ್ರನಾಥ ಟ್ಯಾಗೋರ್ ಅವರಿಗೆ ಸಮಾನ ಪ್ರತಿಭೆ ಕುವೆಂಪು' ಎಂದು ಹೇಳಿದರು.

'ಕನ್ನಡದ ಶ್ರೇಷ್ಠ ಕೃತಿಗಳು ಅನ್ಯ ಭಾಷೆಗಳಿಗೆ ಅನುವಾದವಾಗಬೇಕು. ಆದರೆ, ನಮ್ಮವರು ಅನುವಾದದಲ್ಲಿ ನಿರಾಸಕ್ತಿ ತಾಳಿದ್ದಾರೆ. ವಚನಗಳು ತೆಲುಗು, ತಮಿಳು ಭಾಷೆಗೆ ಅನುವಾದಗೊಂಡಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ವಿಶ್ವಮಾನವ ಸಂದೇಶ: ಕುವೆಂಪು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಪಿ. ವೀರಭದ್ರಪ್ಪ, 'ಕುವೆಂಪು ಶಾಂತಿಯ ಮಂತ್ರ ಪಠಿಸಿದ್ದರು. ವಿಶ್ವಮಾನವ ಸಂದೇಶದಲ್ಲಿ ನಾವೆಲ್ಲರೂ ಕನ್ನಡಿಗರು ಎಂದು ಸಾರಿದ್ದಾರೆ. ಕುವೆಂಪು ಪ್ರತಿಷ್ಠಾನದ ಅಧ್ಯಕ್ಷರ ವಿಚಾರವಾಗಿ ರಾಜ್ಯ ಸರ್ಕಾರ ಕೂಡಲೇ ತೀರ್ಮಾನ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಅನುವಾದಿತ ಕೃತಿಯ ಬಗ್ಗೆ ಮಾತನಾಡಿದ ವಿಮರ್ಶಕ ರಾಜೇಂದ್ರ ಚೆನ್ನಿ, 'ಅನುವಾದ ಮತ್ತು ಭಾಷಾಂತರ ಕ್ರಿಯಾಶೀಲ ಕೆಲಸ. ಕುವೆಂಪು ಜಗತ್ತಿನ ಶ್ರೇಷ್ಠ ಕಥನಕಾರರು. ಇಂಗ್ಲಿಷ್ ಮೂಲಕ ಅನೇಕ ಸಂಸ್ಕೃತಿಯನ್ನು ಈ ಕಾದಂಬರಿ ತಲುಪಬೇಕು. ವಿಶ್ವದ ಭಾಷೆಗಳಿಗೆ ಕಾದಂಬರಿ ಅನುವಾದಗೊಂಡರೆ ಮನುಷ್ಯ ಬದುಕಿನ ನೋಟದ ಕ್ರಮ ಬದಲಾಗುತ್ತದೆ' ಎಂದು ಹೇಳಿದರು.

ವಿಮರ್ಶಕ ಬಸವರಾಜ ಕಲ್ಗುಡಿ, 'ಕುವೆಂಪು ಅವರ ಎಲ್ಲ ಕೃತಿಗಳಲ್ಲಿ ಚಲನೆಯನ್ನು ಕಾಣಬಹುದು. ಕನ್ನಡ ಭಾಷೆಯನ್ನು ಕಟ್ಟಿದ ಅವರನ್ನು ಗೌರವದಿಂದ ಕಾಣದ ಭಾಷಾ ಸಮೂಹವಿದ್ದರೆ ಅದಕ್ಕಿಂತ ಅಗೌರವ ಬೇರೆಯಿಲ್ಲ' ಎಂದರು.



ಎಚ್‌.ಎಸ್‌. ಶಿವಪ್ರಕಾಶ್ (ಎಡದಿಂದ ನಾಲ್ಕನೆಯವರು) ಅವರು 'ದಿ ಬ್ರೈಡ್ ಇನ್ ದಿ ರೈನಿ ಮೌಂಟೆನ್ಸ್' ಕೃತಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರಿಗೆ ಹಸ್ತಾಂತರಿಸಿದರು. (ಎಡದಿಂದ) ರಾಜೇಂದ್ರ ಚೆನ್ನಿ, ಪ್ರೊ. ಬಿ.ಪಿ. ವೀರಭದ್ರಪ್ಪ ಮತ್ತು ಬಸವರಾಜ ಕಲ್ಗುಡಿ ಇದ್ದಾರೆ ಪ್ರಜಾವಾಣಿ ಚಿತ್ರ

ಪ್ರೇಕ್ಷಕರ ಸಾಲಲ್ಲಿ ಕುಳಿತ ಹಂಪನಾ

ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ಹಂ.ಪ.ನಾಗರಾಜಯ್ಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿಲ್ಲ. ಅವರ ಬದಲಿಗೆ ಕುವೆಂಪು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಪಿ. ವೀರಭದ್ರಪ್ಪ ಅಧ್ಯಕ್ಷತೆ ವಹಿಸಿದರು. ಹಂ.ಪ. ನಾಗರಾಜಯ್ಯ ಅವರು ಪ್ರೇಕ್ಷಕರ ಸಾಲಿನಲ್ಲಿ ಕುಳಿತು, ಕಾರ್ಯಕ್ರಮ ವೀಕ್ಷಿಸುವ ಮೂಲಕ ಸರ್ಕಾರದ ಕ್ರಮವನ್ನು ಪ್ರತಿಭಟಿಸಿದರು. ಕಮಲಾ ಹಂಪನಾ ಇದ್ದರು.

'ಪೂರ್ವ ನಿಗದಿಯಂತೆ ಹಂ.ಪ. ನಾಗರಾಜಯ್ಯ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಬೇಕಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ ಅವರು, ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವುದಿಲ್ಲ ಎಂದು ಮೊದಲೇ ತಿಳಿಸಿದ್ದರು. ಹಾಗಾಗಿ, ಅವರನ್ನು ವೇದಿಕೆಗೆ ಆಹ್ವಾನಿಸಲಿಲ್ಲ' ಎಂದು ಆಯೋಜಕರು ತಿಳಿಸಿದರು.

ಪುಸ್ತಕ ಪರಿಚಯ

ಪುಸ್ತಕ: 'ಕಟ್ಟುವ ಹಾದಿಯಲ್ಲಿ...'
ಲೇಖಕರು: ಕಡಿದಾಳ್ ಪ್ರಕಾಶ್
ಪ್ರಕಾಶನ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ
ಪುಟಗಳು: 288
ಬೆಲೆ: ₹500

ಪುಸ್ತಕ ಪರಿಚಯ

ಪುಸ್ತಕ: 'ದಿ ಬ್ರೈಡ್ ಇನ್ ದಿ ರೈನಿ ಮೌಂಟೆನ್ಸ್' (ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಅನುವಾದ)
ಅನುವಾದಕರು: ಡಾ.ಕೆ.ಎಂ. ಶ್ರೀನಿವಾಸಗೌಡ, ಜಿ.ಕೆ. ಶ್ರೀಕಂಠಮೂರ್ತಿ
ಪ್ರಕಾಶನ: ಐಬಿಎಚ್ ಪ್ರಕಾಶನ
ಪುಟಗಳು: 736
ಬೆಲೆ: ₹ 800

ಕೋವಿಡ್: 3962 ಹೊಸ ಪ್ರಕರಣ ಪತ್ತೆ

ನವದೆಹಲಿ (ಪಿಟಿಐ): ಶನಿವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ ಕಳೆದ 24 ತಾಸುಗಳ ಅವಧಿಯಲ್ಲಿ ದೇಶದಲ್ಲಿ 3,962 ಕೊರೊನಾ ಪ್ರಕರಣಗಳು ದೃಢ ಪಟ್ಟಿವೆ, 26 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 22,416ಕ್ಕೆ ಏರಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ರಾಹುಲ್‌ಗೆ ಇ.ಡಿ ಸಮನ್ಸ್: 13ರಂದು ಹಾಜರಾಗಲು ಸೂಚನೆ

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದ ವಿಚಾರಣೆಗೆ ಜೂನ್ 13ರಂದು ಹಾಜರಾಗಬೇಕು ಎಂದು ಸೂಚಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಕಾಂಗ್ರೆಸ್ ಸಂಸದ ರಾಹುಲ್‌ಗಾಂಧಿ ಅವರಿಗೆ ಸಮನ್ಸ್ ಜಾರಿಮಾಡಿದೆ.

ಈ ಮೊದಲು ಜೂನ್ 2ರಂದು ಹಾಜರಾಗಲು ಸೂಚಿಸಿ ಸಮನ್ಸ್ ನೀಡಲಾಗಿತ್ತು. ಆದರೆ, ದೇಶದ ಹೊರಗೆ ಇರುವುದರಿಂದ ಇನ್ನೊಂದು ದಿನ ನಿಗದಿಪಡಿಸಬೇಕು ಎಂದು ರಾಹುಲ್‌ಗಾಂಧಿ ಕೋರಿದ್ದರು. ಇದೇ ಪ್ರಕರಣಕ್ಕೆ ಸಂಬಂಧಿಸಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಅವರಿಗೆ ಜೂ.8ರಂದು ಹಾಜರಾಗಲು ಸೂಚಿಸಿ ಸಮನ್ಸ್ ನೀಡಲಾಗಿತ್ತು. ಆದರೆ, ಅವರಿಗೆ ಕೋವಿಡ್ ಸೋಂಕು ತಗುಲಿದ್ದು, ನಿಗದಿತ ದಿನಾಂಕದಂದು ಹಾಜರಾಗಲು ಸಾಧ್ಯವಾಗದು ಎಂದು ಪಕ್ಷ ತಿಳಿಸಿದೆ.

ವಿಷಾದ

ಶನಿವಾರದ ಸಂಚಿಕೆಯಲ್ಲಿ, ರಾಹುಲ್‌ಗೆ ಇ.ಡಿ. ಹೊಸ ಸಮನ್ಸ್: 13ರಂದು ಹಾಜರಾಗಲು ಸೂಚನೆ – ಈ ಶೀರ್ಷಿಕೆಯಡಿ ಉತ್ತರಾಖಂಡದ ಸಿಎಂಗೆ ದಾಖಲೆ ಅಂತರದ ಗೆಲುವು ಸುದ್ದಿ ಪ್ರಕಟವಾಗಿದೆ. ಈ ಪ್ರಮಾದಕ್ಕಾಗಿ ವಿಷಾದಿಸುತ್ತೇವೆ.

–ಸಂ

ಅತ್ಯಾಚಾರ: 2 ಬಾಲಾರೋಪಿಗಳ ವಶ

ಆರೋಪಿಗಳಲ್ಲಿ ಒಬ್ಬ ಟಿಆರ್‌ಎಸ್ ಪಕ್ಷದ ಮುಖಂಡನ ಪುತ್ರ: ವರದಿ

ಪ್ರಜಾವಾಣಿ ವಾರ್ತೆ

ಹೈದರಾಬಾದ್/ನವದೆಹಲಿ: 17 ವರ್ಷದ ಬಾಲಕಿ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಶನಿವಾರ ಇಬ್ಬರು ಬಾಲಾರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಬ್ಬರು ಬಾಲಾರೋಪಿಗಳನ್ನು ಬಾಲಾಪರಾಧಗಳ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವುದು. ಇನ್ನೊಬ್ಬ ಆರೋಪಿ ಸಾದುದ್ದೀನ್ ಮಲ್ಲಿಕ್ (18) ಎಂಬಾತನನ್ನು ಶುಕ್ರವಾರವೇ ಬಂಧಿಸಲಾಗಿದೆ. ಪ್ರಕರಣದಲ್ಲಿ ಭಾಗಿಯಾಗಿರುವ ಐವರು ಆರೋಪಿಗಳ ಗುರುತು ಪತ್ತೆಹಚ್ಚಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಾರೋಪಿ ಟಿಆರ್‌ಎಸ್ ಪಕ್ಷದ ಮುಖಂಡರ ಪುತ್ರ: ಬಾಲಕಿ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಪೊಲೀಸರು ವಶಕ್ಕೆ ಪಡೆದಿರುವ ಇಬ್ಬರು ಬಾಲಾರೋಪಿಗಳಲ್ಲಿ ಒಬ್ಬಾತ, ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಅವರ ತೆಲಂಗಾಣ ರಾಷ್ಟ್ರ ಸಮಿತಿ ಪಕ್ಷದ ಮುಖಂಡರೊಬ್ಬರ ಪುತ್ರ ಎಂದು 'ಎನ್‌ಡಿ ಟಿವಿ' ವರದಿ ಮಾಡಿದೆ.

ಪ್ರಕರಣ ಮುಚ್ಚಿಹಾಕಲು ಪೊಲೀಸರ ಯತ್ನ: ಬಿಜೆಪಿ ಆರೋಪ

ಈ ಪ್ರಕರಣದಲ್ಲಿ ಆಡಳಿತಾರೂಢ ತೆಲಂಗಾಣ ರಾಷ್ಟ್ರ ಸಮಿತಿಯ ಮಿತ್ರ ಪಕ್ಷ ಎಐಎಂಐಎಂ ಶಾಸಕನ ಮಗನ ಪಾತ್ರ ಇದ್ದು, ಪ್ರಕರಣ ಮುಚ್ಚಿಹಾಕಲು ತೆಲಂಗಾಣ ಪೊಲೀಸರು ಯತ್ನಿಸುತ್ತಿದ್ದಾರೆ ಎಂದು ಬಿಜೆಪಿ ಶನಿವಾರ ಆರೋಪಿಸಿದೆ.

'ಸಾಮೂಹಿಕ ಅತ್ಯಾಚಾರ ನಡೆದಿರುವುದು ಕೆಂಪು ಬಣ್ಣದ ಬೆಂಜ್ ಕಾರಿನಲ್ಲಿ. ಆದರೆ, ಆರೋಪಿಗಳು ಇನೊವಾ ಕಾರಿನಲ್ಲಿ ಇದ್ದರು ಎಂದು ಬಿಂಬಿಸಲು ಪೊಲೀಸರು ಪ್ರಯತ್ನಿಸುತ್ತಿದ್ದಾರೆ. ಕೃತ್ಯಕ್ಕೆ ಬಳಸಿರುವ ಟಿಎಸ್ 9 ಎಫ್‌ಎಲ್ 6460 ನೋಂದಣಿ ಸಂಖ್ಯೆಯ ಬೆಂಜ್ ಕಾರು, ಎಐಎಂಐಎಂ ಶಾಸಕನ ತಂಗಿಯ ಹೆಸರಿನಲ್ಲಿದೆ. ದೂರು ಹಿಂಪಡೆದು ನಗರ ತೊರೆಯುವಂತೆ ಸಂತ್ರಸ್ತೆಯ ಕುಟುಂಬಕ್ಕೆ ಬೆದರಿಕೆ ಒಡ್ಡಲಾಗಿದೆ' ಎಂದು ಬಿಜೆಪಿ ಶಾಸಕ ರಘುನಂದನ್ ರಾವ್ ದೂರಿದ್ದಾರೆ.

ಇದನ್ನು ಪುಷ್ಟೀಕರಿಸಲು, ಮರ್ಸಿಡಿಸ್ ಬೆಂಜ್ ಕಾರಿನಲ್ಲಿ ಸಂತ್ರಸ್ತೆಗೆ ಒಬ್ಬ ಬಾಲಕ ಮುತ್ತಿಡುತ್ತಿರುವ ದೃಶ್ಯಗಳನ್ನು ಇತರ ಆರೋಪಿಗಳು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದರು ಎನ್ನಲಾದ ಕೆಲವು ಫೋಟೊಗಳು ಮತ್ತು ವಿಡಿಯೊ ತುಣುಕುಗಳು ಬಹಿರಂಗಗೊಂಡಿವೆ.

'ಶಾಸಕರ ಮಗ ಈ ಪ್ರಕರಣದಲ್ಲಿ ಭಾಗಿಯಾಗಿದ್ದಾನೆ ಎನ್ನುವ ಆರೋಪ ಸುಳ್ಳು' ಎಂದು ಪಶ್ಚಿಮ ವಲಯದ ಡಿಸಿಪಿ ಜೋಯೆಲ್ ಡೇವಿಸ್ ನೀಡಿರುವ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿರುವ ರಘುನಂದನ್ ರಾವ್, 'ನಮ್ಮ ಬಳಿ ಸಾಕ್ಷ್ಯಗಳಿವೆ. ಹೈಕೋರ್ಟ್ ನ್ಯಾಯಮೂರ್ತಿಯಿಂದ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ಮೊರೆ ಹೋಗುತ್ತೇವೆ' ಎಂದು ರಾವ್ ಹೇಳಿದ್ದಾರೆ.

ಬಿಜೆಪಿ ರಾಜ್ಯ ಅಧ್ಯಕ್ಷ ಮತ್ತು ಸಂಸದ ಬಂಡಿ ಸಂಜಯ್ ಕುಮಾರ್, ಮುಖ್ಯಮಂತ್ರಿಗೆ ಬರೆದಿರುವ ಬಹಿರಂಗ ಪತ್ರದಲ್ಲಿ, ಸಿಬಿಐ ತನಿಖೆಗೆ ಒತ್ತಾಯಿಸಿದ್ದಾರೆ.

ವಿವರಣೆ ಕೇಳಿದ ಎನ್‌ಸಿಪಿಸಿಆರ್: ಬಾಲಕಿ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಲು ಮೂರು ದಿನ ವಿಳಂಬ ಮಾಡಿರುವುದಕ್ಕೆ ಮಕ್ಕಳ ಹಕ್ಕುಗಳ ರಕ್ಷಣೆಯ ರಾಷ್ಟ್ರೀಯ ಆಯೋಗವು (ಎನ್‌ಸಿಪಿಸಿಆರ್) ನಗರ ಪೊಲೀಸರಿಂದ ವಿವರಣೆ ಕೇಳಿದೆ.

ವಯಸ್ಕರಲ್ಲದವರಿಗೆ ಪ್ರವೇಶ ನೀಡಿರುವುದಕ್ಕೆ ಪಬ್‌ನ ಮಾಲೀಕರ ವಿರುದ್ಧವೂ ಎಫ್‌ಐಆರ್ ದಾಖಲಿಸಲು ಮತ್ತು ಸಂತ್ರಸ್ತ ಬಾಲಕಿಯ ಗುರುತು ಬಹಿರಂಗಪಡಿಸದಂತೆ, ಪ್ರಕರಣ ಸಂಬಂಧ ಏಳು ದಿನಗಳೊಳಗೆ ವಿವರಣೆ ನೀಡಬೇಕು ಎಂದು ಆಯೋಗವು ಹೈದರಾಬಾದ್ ಪೊಲೀಸರಿಗೆ ಬರೆದಿರುವ ಪತ್ರದಲ್ಲಿ ಸೂಚಿಸಿದೆ.

ಹೈದರಾಬಾದ್ ನಗರದ ಜುಬಿಲಿ ಬಂಜಾರಾ ಹಿಲ್ಸ್‌ನ ಪಬ್‌ವೊಂದರಲ್ಲಿ ಪಾರ್ಟಿ ಮುಗಿಸಿ ಮನೆಗೆ ವಾಪಸಾಗುತ್ತಿದ್ದ ಬಾಲಕಿಯನ್ನು ಕಾರಿನಲ್ಲಿ ಕರೆದೊಯ್ದು, ಮೂವರು ಬಾಲಕರು ಸೇರಿ ಐವರು ಸಾಮೂಹಿಕ ಅತ್ಯಾಚಾರ ಎಸಗಿದ್ದರು.

ಬೂಸ್ಟರ್ ಡೋಸ್: ಕೊರ್ಬೆವ್ಯಾಕ್ಸ್‌ಗೆ ಅನುಮತಿ

ಹೈದರಾಬಾದ್ (ಪಿಟಿಐ): ಬಯಾಲಾಜಿಕಲ್–ಇ ಸಂಸ್ಥೆ ಅಭಿವೃದ್ಧಿಪಡಿಸಿರುವ ಕೊರ್ಬೆವ್ಯಾಕ್ಸ್ ಲಸಿಕೆಯನ್ನು ಬೂಸ್ಟರ್ ಡೋಸ್ ಆಗಿ ಬಳಕೆ ಮಾಡಲು ಭಾರತೀಯ ಔಷಧ ಮಹಾ ನಿಯಂತ್ರಕರು (ಡಿಸಿಜಿಐ) ಅನುಮತಿ ನೀಡಿದ್ದಾರೆ ಎಂದು ಸಂಸ್ಥೆ ಶನಿವಾರ ತಿಳಿಸಿದೆ.

ಕೋವಿಶೀಲ್ಡ್ ಅಥವಾ ಕೋವ್ಯಾಕ್ಸಿನ್ ಲಸಿಕೆಯ ಮೊದಲ ಎರಡು ಡೋಸ್‌ಗಳನ್ನು ಪಡೆದಿರುವ ವ್ಯಕ್ತಿಗಳಿಗೆ ಮೂರನೇ ಡೋಸ್ ಆಗಿ ಕೊರ್ಬೆವ್ಯಾಕ್ಸ್ ಲಸಿಕೆಯನ್ನು ನೀಡಬಹುದು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ. ಬೇರೆ ಕಂಪನಿಗಳ ಮೊದಲ ಎರಡು ಡೋಸ್ ಲಸಿಕೆಗಳನ್ನು ಪಡೆದಿರುವ ವ್ಯಕ್ತಿಗೆ ಮತ್ತೊಂದು ಕಂಪನಿಯ ಲಸಿಕೆಯನ್ನು ಬೂಸ್ಟರ್ ಡೋಸ್ ಆಗಿ ಬಳಸಲು ಅನುಮತಿ ಸಿಕ್ಕಿರುವುದು ಭಾರತದಲ್ಲಿ ಇದೇ ಮೊದಲು ಎಂದು ಸಂಸ್ಥೆ ತಿಳಿಸಿದೆ.

ಮೂಸೆವಾಲಾ ಹತ್ಯೆ ಪ್ರಕರಣ ನ್ಯಾಯಮೂರ್ತಿ ನಿಯೋಜನೆಗೆ ಹೈಕೋರ್ಟ್ ಅಸಮ್ಮತಿ

ಚಂಡೀಗಡ (ಪಿಟಿಐ): ಗಾಯಕ ಸಿಧು ಮೂಸೆವಾಲಾ ಹತ್ಯೆ ಪ್ರಕರಣ ಕುರಿತು ಹಾಲಿ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಬೇಕು ಎಂಬ ಪಂಜಾಬ್ ಸರ್ಕಾರದ ಕೋರಿಕೆಯನ್ನು ಹೈಕೋರ್ಟ್ ಒಪ್ಪಿಲ್ಲ ಎಂದು ಮೂಲಗಳು ತಿಳಿಸಿವೆ.

ಹೈಕೋರ್ಟ್‌ನಿಂದ ಈ ಕುರಿತು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಪ್ರಕರಣದ ತನಿಖೆಯ ಉದ್ದೇಶಕ್ಕಾಗಿ ನ್ಯಾಯಮೂರ್ತಿಯೊಬ್ಬರನ್ನು ನಿಯೋಜಿಸಲಾಗದು ಎಂದು ತಿಳಿಸಿರುವುದಾಗಿ ಮೂಲಗಳು ಹೇಳಿವೆ.

ಹೈಕೋರ್ಟ್‌ನಲ್ಲಿ ಸುಮಾರು 4.50 ಲಕ್ಷ ಪ್ರಕರಣಗಳ ವಿಚಾರಣೆ ಬಾಕಿ ಇದೆ. ಸದ್ಯ, ನ್ಯಾಯಮೂರ್ತಿಗಳ 38 ಹುದ್ದೆಗಳು ಖಾಲಿ ಇವೆ ಎಂದು ಹೈಕೋರ್ಟ್ ಆಡಳಿತ ಕಾರಣ ನೀಡಿದೆ. ಈ ಕುರಿತು ತಕ್ಷಣಕ್ಕೆ ಸರ್ಕಾರದ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ.

ಪಂಜಾಬ್‌ನ ಮಾನ್ಸಾ ಜಿಲ್ಲೆಯಲ್ಲಿ ಮೇ 29ರಂದು ದುಷ್ಕರ್ಮಿಗಳು ಮೂಸೆವಾಲಾ ಅವರನ್ನು ಹತ್ಯೆ ಮಾಡಿದ್ದರು. ಈ ಪ್ರಕರಣದ ತನಿಖೆಗೆ ಹಾಲಿ ನ್ಯಾಯಮೂರ್ತಿ ನೇತೃತ್ವದಲ್ಲಿ ಆಯೋಗ ರಚಿಸುವ ತೀರ್ಮಾನವನ್ನು ಸರ್ಕಾರ ಪ್ರಕಟಿಸಿತ್ತು.

ಟ್ವಿಟರ್, ಯೂಟ್ಯೂಬ್‌ಗೆ ಪತ್ರ ಬರೆದ ಸಚಿವಾಲಯ 'ಸ್ತ್ರೀದ್ವೇಷಿ' ಜಾಹೀರಾತು ಸ್ಥಗಿತಗೊಳಿಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾಮೂಹಿಕ ಅತ್ಯಾಚಾರವನ್ನು ಸಂಭ್ರಮಿಸುವ ಸ್ತ್ರೀದ್ವೇಷಿ ಧೋರಣೆಯ ಜಾಹೀರಾತನ್ನು ತೆಗೆದು ಹಾಕುವಂತೆ ಸಾಮಾಜಿಕ ಜಾಲತಾಣಗಳಾದ ಯೂಟ್ಯೂಬ್ ಹಾಗೂ ಟ್ವಿಟರ್‌ಗೆ ಸರ್ಕಾರ ಸೂಚಿಸಿದೆ. ಜನರು, ಸಾಮಾಜಿಕ ಕಾರ್ಯಕರ್ತರ ಆಕ್ರೋಶಕ್ಕೆ ಕಾರಣವಾಗಿದ್ದ ಈ ಜಾಹೀರಾತಿನ ವಿರುದ್ಧ ಕ್ರಮಕ್ಕೆ ಮುಂದಾಗಿರುವ ಮಾಹಿತಿ ಮತ್ತು ತಂತ್ರಜ್ಞಾನ ಸಚಿವಾಲಯ, ನಿಯಮಗಳನ್ನು ಈ ಜಾಹೀರಾತು ಉಲ್ಲಂಘಿಸಿದೆ ಎಂದು ಹೇಳಿದೆ.

ಮಹಿಳೆಯರ ವಿರುದ್ಧ ಲೈಂಗಿಕ ದೌರ್ಜನ್ಯಕ್ಕೆ ಪ್ರೇರಣೆ ನೀಡುತ್ತಿರುವ ಈ ಜಾಹೀರಾತು ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರವಾಗುತ್ತಿದೆ. ಅಸಹ್ಯಕರ ಧಾಟಿಯಲ್ಲಿರುವ ಇದು, ಜಾಹೀರಾತು ನಿಯಮಾವಳಿಗಳನ್ನು ಉಲ್ಲಂಘಿಸಿದೆ ಎಂದು ಭಾರತೀಯ ಜಾಹೀರಾತು ಗುಣ ಮಟ್ಟ ಮಂಡಳಿ (ಎಎಸ್‌ಸಿಐ) ಹೇಳಿದೆ.

'ಎಎಸ್‌ಸಿಐ ರೂಪಿಸಿರುವ ನಿಯಮಗಳನ್ನು ಈ ಜಾಹೀರಾತು ಉಲ್ಲಂಘಿಸಿದೆ' ಎಂದು ಎಎಸ್‌ಸಿಐ ಹೇಳಿದೆ. ಜಾಹೀರಾತು ಪ್ರಸಾರವನ್ನು ತಕ್ಷಣವೇ ಸ್ಥಗಿತಗೊಳಿಸುವಂತೆ ಜಾಹೀರಾತುದಾರರಿಗೆ ಸೂಚನೆ ನೀಡಿದೆ.

1994ರ ಕೇಬಲ್ ಟೆಲಿವಿಷನ್ ನೆಟ್‌ವರ್ಕ್ ನಿಯಮ ಆಧಾರದಲ್ಲಿ, ಟಿ.ವಿ. ವಾಹಿನಿಗಳಲ್ಲಿ ಜಾಹೀರಾತುಗಳಿಗೆ ಸಂಬಂಧಿಸಿ ಸ್ವಯಂ ನಿಯಂತ್ರಣ ಕುರಿತ ನಿಯಮಾವಳಿಗಳನ್ನು ಎಎಸ್‌ಸಿಐ ರೂಪಿಸಿದೆ.

ಡಿಜಿಟಲ್ ಮಾಧ್ಯಮ ವಿಭಾಗದ ಸಹಾಯಕ ನಿರ್ದೇಶಕರಾದ ಕ್ಷಿತಿಜ್ ಅಗರ್‌ವಾಲ್ ಅವರು ಟ್ವಿಟರ್ ಹಾಗೂ ಯೂಟ್ಯೂಬ್‌ಗೆ ಪತ್ರ ಬರೆದಿದ್ದು, ಮಹಿಳೆಯರನ್ನು ಕೆಟ್ಟದಾಗಿ ಬಿಂಬಿಸುವ ವಿಡಿಯೊಗಳು 'ಮಾಹಿತಿ ತಂತ್ರಜ್ಞಾನ (ಮಧ್ಯಂತರ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೀತಿಸಂಹಿತೆ) ನಿಯಮಗಳು 2021ರ ನಿಯಮ 3 (1) (ಬಿ) (2)' ಅನ್ನು ಉಲ್ಲಂಘಿಸುತ್ತವೆ ಎಂದು ಪತ್ರದಲ್ಲಿ ಹೇಳಿದ್ದಾರೆ.

ಲಿಂಗತ್ವದ ಆಧಾರದಲ್ಲಿ ಅಪಮಾನಿಸುವ ಅಥವಾ ಕಿರುಕುಳ ನೀಡುವ ಯಾವುದೇ ಮಾಹಿತಿಯನ್ನು ಪ್ರಸಾರ ಮಾಡುವುದನ್ನು ಈ ನಿಯಮ ಸ್ಪಷ್ಟವಾಗಿ ನಿರ್ಬಂಧಿಸುತ್ತದೆ.

ಹಿಂಸಾಚಾರ: ಸಂಚುಕೋರನ ಬಂಧನ

ಪ್ರಜಾವಾಣಿ ವಾರ್ತೆ



ಕಾನ್ಪುರದ ಗಲಭೆಪೀಡಿತ ಪ್ರದೇಶಗಳಲ್ಲಿ ಶನಿವಾರ ಪೊಲೀಸರು ಪಥಸಂಚಲನ ನಡೆಸಿದರು –ಪಿಟಿಐ ಚಿತ್ರ

ಕಾನ್ಪುರ/ಲಖನೌ: ಉತ್ತರಪ್ರದೇಶದ ಕಾನ್ಪುರದಲ್ಲಿ ನಡೆದ ಕೋಮು ಘರ್ಷಣೆಯ ಹಿಂದಿನ ಪ್ರಮುಖ ಸಂಚುಕೋರ ಹಯಾತ್ ಜಫರ್ ಹಶ್ಮಿ ಮತ್ತು ಆತನ ಜತೆಗಿದ್ದ ಇತರ ನಾಲ್ವರು ಆರೋಪಿಗಳನ್ನು ಶನಿವಾರ ಬಂಧಿಸಿದ್ದು, ಸಂಚುಕೋರ ಹಶ್ಮಿಗೆ ಪಿಎಫ್‌ಐ ಸಂಘಟನೆ ಜತೆಗೆ ಸಂಪರ್ಕ ಇದೆಯೇ ಎನ್ನುವುದರ ಬಗ್ಗೆ ಪೊಲಿಸರು ತನಿಖೆ ನಡೆಸುತ್ತಿದ್ದಾರೆ.

'ಆರೋಪಿ ಹಶ್ಮಿ ಮತ್ತು ಇತರ ನಾಲ್ವರು ಆರೋಪಿಗಳನ್ನು ಲಖನೌನಲ್ಲಿನ ಹಶ್ಮಿಯ ಯೂಟ್ಯೂಬ್ ಚಾನೆಲ್ ಕಚೇರಿಯಿಂದ ಬಂಧಿಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿ ಈವರೆಗೆ 23 ಆರೋಪಿಗಳನ್ನು ಬಂಧಿಸಿದಂತಾಗಿದೆ. ಸಾವಿರಕ್ಕೂ ಹೆಚ್ಚಿನ ಜನರ ವಿರುದ್ಧ ಪ್ರಕರಣ ದಾಖಲಾಗಿದ್ದು, 50 ಜನರನ್ನು ವಶಕ್ಕೆ ಪಡೆಯಲಾಗಿದೆ' ಎಂದು ಕಾನ್ಪುರ ಪೊಲೀಸ್ ಆಯುಕ್ತ ವಿಜಯ್ ಸಿಂಗ್ ಮೀನಾ ತಿಳಿಸಿದ್ದಾರೆ.

'ಹಿಂಸಾಚಾರ ಪ್ರಚೋದಿಸಲು ಹಶ್ಮಿ ಸಂಚು ರೂಪಿಸಿದ್ದ. ಹಿಂಸಾಚಾರದ ನಂತರ ಪರಾರಿಯಾಗಿ ಲಖನೌದಲ್ಲಿ ತಲೆಮರೆಸಿಕೊಂಡಿದ್ದ. ಬಿಜೆಪಿ ವಕ್ತಾರೆ ನೂಪುರ್ ಶರ್ಮಾ ಹೇಳಿಕೆ ವಿರೋಧಿಸಿ ಮಣಿಪುರ ಮತ್ತು ಪಶ್ಚಿಮ ಬಂಗಾಳದಲ್ಲಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಬಂದ್‌ಗೆ ಕರೆ ನೀಡಿತ್ತು. ಹಾಗಾಗಿ, ಈ ಸಂಘಟನೆಯ ಜೊತೆಗೆ ಹಶ್ಮಿಯ ಸಂಪರ್ಕ ಇರುವ ಸಾಧ್ಯತೆ ಕುರಿತು ತನಿಖೆ ನಡೆಸಲಾಗುತ್ತಿದೆ. ವಿವಾದಾತ್ಮಕ ಪೌರತ್ವ ತಿದ್ದುಪಡಿ ಕಾಯ್ದೆಯ ನಂತರ ಕಾನ್ಪುರದಲ್ಲಿ ನಡೆದ ಹಿಂಸಾಚಾರದಲ್ಲಿ ಪಿಎಫ್‌ಐ ಕೈವಾಡ ಕಂಡುಬಂದಿತ್ತು' ಎಂದು ಅವರು ಮಾಹಿತಿ ನೀಡಿದ್ದಾರೆ.

ಘರ್ಷಣೆಯಲ್ಲಿ 20 ಮಂದಿ ಪೊಲೀಸರು ಸೇರಿ ಕನಿಷ್ಠ 40 ಜನರು ಗಾಯಗೊಂಡಿದ್ದಾರೆ. 'ಕಾನ್ಪುರದ ಹಿಂಸಾಚಾರದಲ್ಲಿ ತೊಡಗಿದ್ದವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು' ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಕಾನೂನು ಮತ್ತು ಸುವ್ಯವಸ್ಥೆ) ಪ್ರಶಾಂತ್ ಕುಮಾರ್ ತಿಳಿಸಿದ್ದಾರೆ.

ಚಿನ್ನ, ಬೆಳ್ಳಿ (ಬೆಂಗಳೂರು)	
ಸ್ಟ್ಯಾಂಡರ್ಡ್ ಚಿನ್ನ (10 ಗ್ರಾಂ)	₹52,860
ಆಭರಣ ಚಿನ್ನ (1 ಗ್ರಾಂ)	₹4,916
ಬೆಳ್ಳಿ (ಕೆ.ಜಿಗೆ)	₹63,300

ಖಾದ್ಯ ತೈಲ ಮುಂಬೈ (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1620 (1630)
ಸೋಯಾ (ರಿಫೈನ್ಡ್)	₹1505 (1505)
ಸೂರ್ಯಕಾಂತಿ (ರಿಫೈನ್ಡ್)	₹1775 (1790)
ಪಾಮೋಲಿನ್	₹1480 (1480)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹495
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹497

ರಾಮನಗರ ರೇಷ್ಮೆಗೂಡು ಧಾರಣೆ	
ಮಿಶ್ರತಳಿ (ಸಿ.ಬಿ)	₹400-656
ದ್ವಿತಳಿ (ಬಿ.ವಿ)	₹455-866

ಸಂಕ್ಷಿಪ್ತ ಸುದ್ದಿ

ವಿಮಾನದ ಶೌಚಾಲಯದಿಂದ ಚಿನ್ನದ ಗಟ್ಟಿ ವಶ

ಚೆನ್ನೈ (ಪಿಟಿಐ) : ಇಲ್ಲಿನ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ದುಬೈನಿಂದ ಬಂದ ವಿಮಾನ ವೊಂದರ ಶೌಚಾಲಯದಿಂದ ₹4.21 ಕೋಟಿ ಮೌಲ್ಯದ 60 ಚಿನ್ನದ ಗಟ್ಟಿಗಳನ್ನು ಕಸ್ಟಮ್ಸ್ ಅಧಿಕಾರಿಗಳು ಶನಿವಾರ ವಶಪಡಿಸಿಕೊಂಡಿದ್ದಾರೆ.

ಒಟ್ಟು 9 ಕೆ.ಜಿ. ಚಿನ್ನ ವಶಪಡಿಸಿ ಕೊಂಡಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇನ್ನೊಂದು ಪ್ರಕರಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ₹25.87 ಲಕ್ಷ ಮೌಲ್ಯದ ಚಿನ್ನದ ಕಡ್ಡಿಗಳನ್ನು ವಶಪಡಿಸಿಕೊಂಡಿದ್ದಾರೆ.

ದುಬೈನಿಂದ ಬಂದ 61 ವರ್ಷದ ಪ್ರಯಾಣಿಕರೊಬ್ಬರನ್ನು ಈ ಸಂಬಂಧ ಬಂಧಿಸಲಾಗಿದೆ. ಇವರು ತಮಿಳುನಾಡಿನ ಪುದುಕೋಟೆ ಜಿಲ್ಲೆಯವರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ಬಾಯ್ಲರ್ ಸ್ಫೋಟ: 12ಮಂದಿ ಸಾವು

ಹಾಪುರ್ (ಉತ್ತರ ಪ್ರದೇಶ): ಉತ್ತರ ಪ್ರದೇಶದ ಹಾಪುರ್ ಜಿಲ್ಲೆಯ ಕಾರ್ಖಾನೆ ಯೊಂದರಲ್ಲಿ ಶನಿವಾರ ಮಧ್ಯಾಹ್ನ ಬಾಯ್ಲರ್ ಸ್ಫೋಟಗೊಂಡ ಪರಿಣಾಮ 12 ಕಾರ್ಮಿಕರು ಮೃತಪಟ್ಟಿದ್ದು, 21 ಮಂದಿ ಗಾಯಗೊಂಡಿದ್ದಾರೆ.

ಘಟನೆ ನಡೆದಾಗ ಧೋಲಾನಾದ ಯುಪಿಎಸ್‌ಐಡಿಸಿ ಕೈಗಾರಿಕಾ ಪ್ರದೇಶದಲ್ಲಿನ ಕಾರ್ಖಾನೆಯಲ್ಲಿ ಸುಮಾರು 30 ಜನರಿದ್ದರು. ಸ್ಫೋಟದ ತೀವ್ರತೆಗೆ ಕೈಗಾರಿಕಾ ಪ್ರದೇಶದ ಹಲವು ಕಾರ್ಖಾನೆಗಳ ಛಾವಣಿಗಳು ಹಾನಿಗೊಂಡಿವೆ. ಬೆಂಕಿ ನಂದಿಸಲು ಅಗ್ನಿ ಶಾಮಕ ದಳಕ್ಕೆ ಮೂರು ತಾಸು ಬೇಕಾಯಿತು. ರಕ್ಷಣಾ ಮತ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಜಾಗತಿಕ ಮಟ್ಟದಲ್ಲಿ ಬಡ್ಡಿದರ ಏರಿಕೆ, ಡಾಲರ್ ಮೌಲ್ಯ ವೃದ್ಧಿ ಪರಿಣಾಮ

ಎಫ್‌ಪಿಐ: ₹1.77 ಲಕ್ಷ ಕೋಟಿ ಹಿಂತೆಗೆತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಭಾರತದ ಮಾರುಕಟ್ಟೆಗಳಿಂದ ಬಂಡವಾಳ ಹಿಂದಕ್ಕೆ ಪಡೆಯುವ ಪ್ರಕ್ರಿಯೆಯು ಸತತ ಆರನೇ ತಿಂಗಳಿನಲ್ಲಿಯೂ ಮುಂದುವರಿದಿದೆ.


ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ 2022ರ ಜನವರಿಯಿಂದ ಜೂನ್ 3ರವರೆಗಿನ ಅವಧಿಯಲ್ಲಿ ಷೇರುಪೇಟೆ ಮತ್ತು ಸಾಲಪತ್ರ ಮಾರುಕಟ್ಟೆಯಿಂದ ಒಟ್ಟಾರೆ ₹1.77 ಲಕ್ಷ ಕೋಟಿಗೂ ಅಧಿಕ ಮೊತ್ತವನ್ನು ಹಿಂದಕ್ಕೆ ಪಡೆದಿದ್ದಾರೆ.

ದೇಶಿ ಮತ್ತು ಜಾಗತಿಕ ವಿದ್ಯಮಾನಗಳು ಎಫ್‌ಪಿಐ ಹೊರಹರಿವಿಗೆ ಕಾರಣವಾಗುತ್ತಿವೆ. ಡಾಲರ್ ಮೌಲ್ಯ ವೃದ್ಧಿ, ಅಮೆರಿಕದ ಬಾಂಡ್ ಗಳಿಕೆ ಹೆಚ್ಚಾಗುತ್ತಿರುವುದು, ಹಾಗೂ ಅಮೆರಿಕದ ಕೇಂದ್ರೀಯ ಬ್ಯಾಂಕ್, ಫೆಡರಲ್ ರಿಸರ್ವ್‌ನಿಂದ ಬಡ್ಡಿದರ ಏರಿಕೆಯು ಬಂಡವಾಳ ಹೊರಹರಿವಿಗೆ ಪ್ರಮುಖ ಕಾರಣಗಳಾಗಿವೆ.

2021–22ನೇ ಹಣಕಾಸು ವರ್ಷದಲ್ಲಿ ಭಾರತದ ಬಂಡವಾಳ ಮಾರುಕಟ್ಟೆಗಳಿಂದ ದಾಖಲೆಯ ₹1.4 ಲಕ್ಷ ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ. ಈ ಹಿಂದೆ, 2018–19ರಲ್ಲಿ ₹88 ಕೋಟಿ, 2015–16ರಲ್ಲಿ ₹14,171 ಕೋಟಿ ಮತ್ತು 2008–09ರಲ್ಲಿ ₹47,706 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದರು.

ಕಚ್ಚಾ ತೈಲ ದರ ಏರಿಕೆ, ಹಣದುಬ್ಬರ ಹೆಚ್ಚಳ ಮತ್ತು ಕೇಂದ್ರೀಯ ಬ್ಯಾಂಕ್ ತನ್ನ ಹಣಕಾಸು ನೀತಿಯನ್ನು ಬಿಗಿಗೊಳಿಸಿರುವ ಕಾರಣ ಮುಂಬರುವ ದಿನಗಳಲ್ಲಿಯೂ ಎಫ್‌ಪಿಐ ಒಳಹರಿವು ಅಸ್ಥಿರವಾಗಿರಲಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಏಷ್ಯಾದಿಂದಲೂ ಹೊರಹರಿವು: ಏಷ್ಯಾದ ಷೇರುಪೇಟೆಗಳಿಂದಲೂ ಬಂಡವಾಳ ಹೊರಹರಿವು ಹೆಚ್ಚಾಗುತ್ತಿದೆ. ಭಾರತ, ತೈವಾನ್, ದಕ್ಷಿಣ ಕೊರಿಯಾ, ಫಿಲಿಪ್ಪೀನ್ಸ್, ವಿಯೆಟ್ನಾಂ, ಇಂಡೊನೇಷ್ಯಾ ಮತ್ತು ಥಾಯ್ಲೆಂಡ್ ದೇಶಗಳ ಷೇರುಪೇಟೆಗಳ ಮಾಹಿತಿ ಪ್ರಕಾರ, ಮೇ ತಿಂಗಳಿನಲ್ಲಿ ₹28,634 ಕೋಟಿ ಹಿಂದಕ್ಕೆ ಪಡೆಯಲಾಗಿದೆ.



ಸಂಪತ್ತು ₹ 4 ಲಕ್ಷ ಕೋಟಿ ವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಷೇರು ಪೇಟೆಗಳ ವಾರದ ವಹಿವಾಟು ಸಕಾರಾತ್ಮಕವಾಗಿ ಅಂತ್ಯವಾಗಿದೆ. ಮುಂಬೈ ಷೇರುಪೇಟೆಯಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹4 ಲಕ್ಷ ಕೋಟಿ ಹೆಚ್ಚಾಗಿದೆ. ಇದರಿಂದ ಒಟ್ಟಾರೆ ಬಂಡವಾಳ ಮೌಲ್ಯವು ₹ 257 ಲಕ್ಷ ಕೋಟಿಗೆ ತಲುಪಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ವಾರದ ವಹಿವಾಟಿನಲ್ಲಿ 885 ಅಂಶ ಏರಿಕೆ ಕಂಡಿದ್ದರೆ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 232 ಅಂಶ ಹೆಚ್ಚಾಗಿದೆ.

ಮೇ ತಿಂಗಳ ಜಿಎಸ್‌ಟಿ ಸಂಗ್ರಹ ಶೇ 44ರಷ್ಟು ಹೆಚ್ಚಾಗಿರುವುದು, ತಯಾರಿಕಾ ವಲಯದ ಬೆಳವಣಿಗೆಯು ಸತತ ಹನ್ನೊಂದನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಮಟ್ಟದಲ್ಲಿಯೇ ಇರುವುದು ಷೇರುಪೇಟೆಯ ವಹಿವಾಟು ಹೆಚ್ಚಳಕ್ಕೆ ಬೆಂಬಲ ನೀಡಿದವು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ವಾರದ ವಹಿವಾಟಿನಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ (ಆರ್‌ಐಎಲ್) ಬಂಡವಾಳ ಮೌಲ್ಯವು ₹1.38 ಲಕ್ಷ ಕೋಟಿ ಹೆಚ್ಚಾಗಿದ್ದು, ಒಟ್ಟಾರೆ ಬಂಡವಾಳ ಮೌಲ್ಯ ₹18.80 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಟಿಸಿಎಸ್ ಮಾರುಕಟ್ಟೆ ಮೌಲ್ಯವು ₹ 64,618 ಕೋಟಿ ಹೆಚ್ಚಾಗಿದ್ದು, ಒಟ್ಟಾರೆ ಮೌಲ್ಯವು ₹12.58 ಲಕ್ಷ ಕೋಟಿಗೆ ತಲುಪಿದೆ. ಅದೇ ರೀತಿ, ಇನ್ಫೊಸಿಸ್, ಐಸಿಐಸಿಐ ಬ್ಯಾಂಕ್ ಮತ್ತು ಭಾರ್ತಿ ಏರ್‌ಟೆಲ್ ಕಂಪನಿಗಳ ಬಂಡವಾಳ ಮೌಲ್ಯದಲ್ಲಿಯೂ ಏರಿಕೆ ಕಂಡುಬಂದಿದೆ.

ರಾಜ್ಯದ ಇನ್‌ಕ್ಯುಬೇಟರ್‌ಗಳಿಗೆ ಅಗ್ರಸ್ಥಾನ: ಸಮೀಕ್ಷೆ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಯೋ ಸ್ಪೆಕ್ಟ್ರಂ ನಿಯತಕಾಲಿಕೆ ನಡೆಸಿರುವ ವಾರ್ಷಿಕ ಸಮೀಕ್ಷೆಯಲ್ಲಿ ಸಾರ್ವಜನಿಕ ವಲಯದ 'ಇನ್‌ಕ್ಯುಬೇಟರ್'ಗಳ ವಿಭಾಗದಲ್ಲಿ ಬಯೋ ಇನೋವೇಷನ್ ಸೆಂಟರ್ (ಬಿಐಸಿ) ಮತ್ತು ಸೆಂಟರ್ ಫಾರ್ ಸೆಲ್ಯುಲರ್ ಆ್ಯಂಡ್ ಮಾಲಿಕ್ಯೂಲರ್ ಪ್ಲಾಟ್‌ಫಾರ್ಮ್ಸ್ (ಸಿ- ಕ್ಯಾಂಪ್) ಪ್ರಥಮ ಮತ್ತು ದ್ವಿತೀಯ ಸ್ಥಾನ ಗಳಿಸಿವೆ ಎಂದು ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ಮಾಹಿತಿ ನೀಡಿರುವ ಅವರು, 'ಬಿಐಸಿ ಮತ್ತು ಸಿ- ಕ್ಯಾಂಪ್‌ಗಳನ್ನು ರಾಜ್ಯದ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಇಲಾಖೆಯ ಸಹಯೋಗದಲ್ಲಿ ಆರಂಭಿಸಲಾಗಿದೆ. ಕರ್ನಾಟಕ ಆವಿಷ್ಕಾರ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್) ಮೂಲಕ ಈ ಎರಡೂ ಇನ್‌ಕ್ಯುಬೇಟರ್‌ಗಳಿಗೆ ಬೆಂಬಲ ನೀಡಲಾಗುತ್ತಿದೆ. ಸಮೀಕ್ಷೆಯಲ್ಲಿ ಈ ಎರಡೂ ಕೇಂದ್ರಗಳು ಅಗ್ರಸ್ಥಾನ ಗಳಿಸಿರುವುದು ಸಂತೋಷದ ಸಂಗತಿ' ಎಂದಿದ್ದಾರೆ.

ಕಿಟ್ಸ್ ಬೆಂಬಲ ಹೊಂದಿರುವ 'ಮಣಿಪಾಲ್ ಬಯೋ ಇನ್‌ಕ್ಯುಬೇಟರ್' ಸಂಸ್ಥೆಯು ಖಾಸಗಿ ವಲಯದಡಿಯಲ್ಲಿ ಐದನೇ ಸ್ಥಾನ ಗಳಿಸಿದೆ. ಈ ವರ್ಷದ ರಾಷ್ಟ್ರೀಯ ಬಯೋ ಸ್ಪೆಕ್ಟ್ರಂ ಸಮೀಕ್ಷೆಯಲ್ಲಿ 40 ಇನ್‌ಕ್ಯುಬೇಟರ್‌ಗಳನ್ನು ಅಂತಿಮ ಸುತ್ತಿನಲ್ಲಿ ಪರಿಗಣಿಸಲಾಗಿತ್ತು. ಅವುಗಳ ಪೈಕಿ ರಾಜ್ಯದ ಇನ್‌ಕ್ಯುಬೇಟರ್‌ಗಳಿಗೆ ಅಗ್ರಸ್ಥಾನ ದೊರಕಿರುವುದು ಇಲ್ಲಿ ನವೋದ್ಯಮಗಳಿಗೆ ಪೂರಕವಾದ ವಾತಾವರಣ ಇರುವುದಕ್ಕೆ ಸಾಕ್ಷಿ ಎಂದು ಅವರು ಹೇಳಿದ್ದಾರೆ.

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹172.5
ಆರ್‌ಎಸ್‌ಎಸ್-5	₹165.50
ಗುಡ್ ಲಾಟ್	₹158

ತೆಂಗು ಧಾರಣೆ (ಸಾವಿರಕ್ಕೆ) ಮಂಗಳೂರು	
1ನೇ ದರ್ಜೆ	₹16000-26000
2ನೇ ದರ್ಜೆ	₹10000-15000

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಚಿತ್ರದುರ್ಗ	
ಆಪಿ	49439-49869
ಬೆಟೆ	38419-38889
ಕೆಂಪುಗೋಟು	29109-29510
ರಾಶಿ	48929-49359
ಮಂಗಳೂರು	
ಹಳತು	51000-54500
ಹೊಸತು	38000-45000
ಕೋಕ	20000-25000
ಕಾರ್ಕಳ	
ಹೊಸತು	40000-45000
ಹಳತು	46000-54500
ಕುಂದಾಪುರ	
ಹೊಸಚಾಲಿ	43500-44500
ಶಿರಸಿ	
ಬೆಟ್ಟೆ	37609-43699
ಬಿಳಿಗೋಟು	22199-32199
ಚಾಲಿ	35518-37899
ರಾಶಿ	46098-47499
ತಿಪಟೂರು ಕೊಬ್ಬರಿ	
ಕನಿಷ್ಠ	12000
ಗರಿಷ್ಠ	13113
ಮಾದರಿ	12600

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16750	16300	16450	232.40 ಸೆಂಟ್ಸ್
ಎಸಿ	9100	8600	9075	
ಆರ್‌ಪಿ	9750	10000	10100	ಲಂಡನ್
ಆರ್‌ಸಿ	4700	4500	4650	--- ಡಾಲರ್ಸ್

ಮುಂಬೈ ಧಾರಣೆ

ಶೇಂಗಾ 4-6-2022	
ಜಾವಾ 70/80(ಹೊಸ)	10750-10800
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	11150-11200
ದಪ್ಪ ಗುಜರಾತ್(ಹೊಸ)	10350-10400

ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1630 (1635)
ಒಂದು ವಾರದ ಡೆಲಿವರಿ	1625 (1630)
ಸೋಯಾ ಕಚ್ಚಾ	1460 (1440)
ಪಾಮ್ ವಾರದ ಡೆಲಿವರಿ	1478 (1478)
ಸೂರ್ಯಕಾಂತಿ ಎಣ್ಣೆ ಕಚ್ಚಾ	1740 (1750)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	50,950 (51,250)
ಬೆಳ್ಳಿ ಕೆ.ಜಿ	61,500 (62,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ



ಮರಗಳಿಗೆ ಜೋಡಿಸಿದ ಇಸಿಜಿ ಉಪಕರಣ

ಇಲ್ಲಿ ಕಾಡಿಗೆ ಕಾಡೇ ಪ್ರಯೋಗಶಾಲೆ

ಭೂಮಿಗೆ ಜ್ವರ ಬಂದಿದೆ ಹೌದು; ಆದರೆ, ಕಾಯಿಲೆ ಎಷ್ಟು ಗಂಭೀರ? ಶಿರಸಿ ಬಳಿಯ ಕಾಡಿನಲ್ಲಿ ಗಿಡಮರ, ಮಣ್ಣುಮಸಿಗಳಿಗೆ ಇಸಿಜಿ ಉಪಕರಣ, ಥರ್ಮಾಮೀಟರ್, ರಿಮೋಟ್ ಕ್ಯಾಮೆರಾ ಇಟ್ಟು ಜಾಗತಿಕ ಮಟ್ಟದ ಪರೀಕ್ಷೆ ನಡೆಯುತ್ತಿದೆ. ಪಶ್ಚಿಮಘಟ್ಟಗಳ ಮೇಲೆ ತಾಪಮಾನ ಏರಿಕೆಯ ಪರಿಣಾಮ ಹೇಗಾಗುತ್ತಿದೆ ಎಂಬುದರ ಡೇಟಾ ಸಂಗ್ರಹದ ಕೆಲಸವನ್ನು ಅಲ್ಲಿಯ ರೈತವಿಜ್ಞಾನಿಯೊಬ್ಬರಿಗೆ ವಿವಿಧ ದೇಶಗಳ ವಿಜ್ಞಾನಿಗಳು ಒಪ್ಪಿಸಿದ್ದಾರೆ. ಅಲ್ಲಿ ಏನೇನು ನಡೆಯುತ್ತಿದೆ?



ಇಡೀ ಅರಣ್ಯದ ಮೇಲೆ ಕಣ್ಣಿಟ್ಟಿರುವ ದೂರಸಂವೇದಿ ಉಪಕರಣಗಳು

ನಾಗೇಶ ಹೆಗಡೆ

ಶ್... ಈ ಕಾಡಿಗೆ ಮೆಲ್ಲಗೆ ಬನ್ನಿ. ಇಲ್ಲಿ ನಿಸರ್ಗವನ್ನು ಐಸಿಯುನಲ್ಲಿ ಇಡಲಾಗಿದೆ. ಇಲ್ಲಿ ಗಿಡಮರಗಳ ಉಸಿರಾಟ, ನಾಡಿ ಮಿಡಿತ, ಟೆಂಪರೇಚರ್, ಬಿ.ಪಿ., ಇಸಿಜಿ, ಎಕ್ಸ್‌ರೇ, ಬ್ರೇನ್ ಸ್ಕ್ಯಾನಿಂಗ್ ಎಲ್ಲ ನಡೆಯುತ್ತಿದೆ. ಚಿಂತಿಸಬೇಡಿ. ನಿಸರ್ಗಕ್ಕೆ ಇಲ್ಲಿ ಅಂಥ ಅಪಾಯವೇನೂ ಬಂದಿಲ್ಲ. ಆರೋಗ್ಯ ಚೆನ್ನಾಗಿಯೇ ಇದೆ. ಆದರೂ ತಪಾಸಣೆ ನಡೆಯುತ್ತಿದೆ. ದೇಶದ ಬೇರೆ ಎಲ್ಲೂ ಕಾಣದಷ್ಟು ವೈವಿಧ್ಯಮಯ ಪ್ರಯೋಗ/ಪರೀಕ್ಷೆಗಳು ಏಕಕಾಲಕ್ಕೆ ಇಲ್ಲಿ ನಡೆಯುತ್ತಿವೆ. ಗೊತ್ತಿದೆ ತಾನೆ, ಬಿಸಿ ಪ್ರಳಯದ ಬಾಗಿಲಲ್ಲಿದ್ದೇವೆ. ಜೀವಲೋಕ ಹೈರಾಣಾಗುತ್ತಿದೆ. ನಮ್ಮನ್ನು ರಕ್ಷಿಸಬೇಕಾದ ಪ್ರಕೃತಿ ತಾನೇ ಸಂಕಷ್ಟಗಳನ್ನು ಎದುರಿಸುತ್ತಿದೆ. ಅದೇನೇನು ಸಂಕಟ, ನೋಡಬೇಕೇ? ಹುಷಾರಾಗಿ ಹೆಜ್ಜೆ ಇಡಿ. ನಿಮ್ಮ ಚಲನವಲನ ಆ ಎತ್ತರದ ಕ್ಯಾಮೆರಾದಲ್ಲಿ ದಾಖಲಾಗುತ್ತಿದೆ.

ಇದು ಗುಡ್ಡೇಕೋಟೆ ಕಾಡು. ಈ ಇಡೀ ಕಾನನವೇ ನಿಸರ್ಗ ವಿಜ್ಞಾನಿ ಬಾಲಚಂದ್ರ ಸಾಯಿಮನೆಯವರ ಪ್ರಯೋಗಶಾಲೆ. ಒಂದರ್ಥದಲ್ಲಿ ಡಯಾಗ್ನೋಸ್ಟಿಕ್ ಲ್ಯಾಬ್ ಅನ್ನಿ. ದೇಶ ವಿದೇಶಗಳ ವಿಜ್ಞಾನ ಸಂಸ್ಥೆಗಳಿಗೆಂದು ಇವರು ಇಲ್ಲಿ ಡೇಟಾ ಸಂಗ್ರಹ ಮಾಡುತ್ತಿದ್ದಾರೆ. ಉದಾಹರಣೆಗೆ ಮೊನ್ನೆ ಏಪ್ರಿಲ್‌ನಲ್ಲಿ ಜರ್ಮನಿಯಿಂದ ಒಂದಿಷ್ಟು ಎಲೆಕ್ಟ್ರಾನಿಕ್ ತಾಯತಗಳು ಬಂದಿವೆ. ಅವುಗಳನ್ನು ಇಲ್ಲಿನ ಧೂಪದ ಮರಕ್ಕೆ ಬಾಲಚಂದ್ರ (ಅವರನ್ನು ಬಾಲು ಅನ್ನೋಣ) ಜೋಡಿಸಿದ್ದಾರೆ. ಸೆಕೆ ಹೆಚ್ಚುತ್ತ ಹೋದರೆ ಈ ಮರ ಏನೇನು ಮಾಡುತ್ತದೆ ಎಂಬುದನ್ನು ಈ ಪುಟ್ಟ ಯಂತ್ರ ಅಳೆಯುತ್ತದೆ. ಬೆಳಿಗ್ಗೆ 11ರವರೆಗೆ ಮರ ಸುಮ್ಮನೆ ನಿಂತಿತ್ತು. ಬಿಸಿಲೇರುತ್ತ ತಾಪಮಾನ 33 ಡಿಗ್ರಿ ದಾಟಿದ ತಕ್ಷಣ ಆ ಮರ ನಿಂತಲ್ಲೇ ಬೆವರತೊಡಗಿದೆ. ಅಂದರೆ ಅದು ತನ್ನ ಎಲೆಗಳ ಮೂಲಕ ನೀರಾವಿಯನ್ನು ಹೊರಕ್ಕೆ ಸೂಸುತ್ತಿದೆ. ಮರ ತುಸು ತಂಪಾಗುತ್ತದೆ. ಸೆಕೆ ಹೆಚ್ಚಾದಷ್ಟೂ ಎಲೆಗಳ ಬೆವತ, ಅಂದರೆ ಭಾಷ್ಪ ವಿಸರ್ಜನೆ ಹೆಚ್ಚುತ್ತದೆ. ಹಾಗೆ ಬೆವರು ಸೂಸುತ್ತ ಮರ ತನ್ನ ಕೊಂಬೆರೆಂಬೆಗಳ ಉಷ್ಣತೆಯನ್ನು ತಗ್ಗಿಸಿ, ಒಂದೇ ಮಟ್ಟದಲ್ಲಿಟ್ಟುಕೊಳ್ಳುತ್ತದೆ.

ಈ ಕಾನನದ ಅನೇಕ ಮರಗಳಿಗೆ ಇಂಥದ್ದೇ ತಾಯತಗಳನ್ನು ಜೋಡಿಸಲಾಗಿದೆ. ಎಷ್ಟು ವಯಸ್ಸಿನ, ಎಷ್ಟೆತ್ತರದ, ಯಾವ ಜಾತಿಯ ಮರ ಅಲ್ಲಿನ ವಾತಾವರಣದ ಸೆಕೆಗೆ ಹೇಗೆ ಸ್ಪಂದಿಸುತ್ತದೆ ಎಂಬ ಮಾಹಿತಿಗಳೆಲ್ಲ ಬಾಲು ಅವರ ಕಂಪ್ಯೂಟರಿನಲ್ಲಿ ದಾಖಲಾಗುತ್ತವೆ. ಆ ಡೇಟಾ ಎಲ್ಲ ಪುಣೆಯ ಐಸರ್ ಸಂಸ್ಥೆಗೆ ಹೋಗುತ್ತದೆ. ಬ್ರಿಟನ್ನಿನ ಲೀಡ್ಸ್ ವಿಶ್ವವಿದ್ಯಾಲಯ ಈ ಅಧ್ಯಯನಕ್ಕೆ ಮಾರ್ಗದರ್ಶನ ಮಾಡುತ್ತಿದೆ. ಭಾರತದ ನೆಲದಲ್ಲಿ ಇದು ಹೊಸ ಪ್ರಯೋಗ.



ಬಾಲಚಂದ್ರ ಸಾಯಿಮನೆ

ಪಶ್ಚಿಮಘಟ್ಟದ ಒಡಲಲ್ಲಿರುವ ಈ ಗುಡ್ಡೆಕೋಟೆ ಕಾನು ಶಿರಸಿಯ ಬಳಿಯ ಅಳಲೇಬೈಲ್ ಪಂಚಾಯ್ತಿಗೆ ಸೇರಿದೆ. ದಟ್ಟ ಗಿಡಮರ, ಗುಡ್ಡದ ಇಳಿಜಾರು, ಪಕ್ಕದಲ್ಲಿ ಹುಲ್ಲಿನ ಬೇಣ, ಕೆಳಕ್ಕೆ ಕಣಿವೆ. ಹಗಲೂ ರಾತ್ರಿ ಜೀವಿಗಳ ಕಲರವ. ಮಳೆಗಾಲದಲ್ಲಿ ಭಾರೀ ಮಳೆ, ಬೇಸಿಗೆಯಲ್ಲಿ ರಣ ಬಿಸಿಲು. ನೆಲ ಮಾತ್ರ ಬಿರುಬಿಸಿಲಲ್ಲೂ ತಂಪು. ಅಂತೂ ಪಶ್ಚಿಮಘಟ್ಟದ ಪಕ್ಕಾ ಪ್ರತಿನಿಧಿ ಈ ಗುಡ್ಡೆಕೋಟೆ. ಅದಕ್ಕೇ ಇದು ಜಾಗತಿಕ ಮಟ್ಟದ ಇಂಥ ಅನೇಕ ಹೊಸ ಹೊಸ ಪ್ರಯೋಗಗಳಿಗೆ ತನ್ನನ್ನು ಒಡ್ಡಿಕೊಂಡಿದೆ. ಇಲ್ಲಿನ ಮರ-ಗಿಡ, ಮಣ್ಣು-ಕಲ್ಲು, ಕಣಿವೆ-ದಿಬ್ಬ, ಪ್ರಾಣಿ-ಪಕ್ಷಿ, ಕೀಟ, ಸರೀಸೃಪ ಎಲ್ಲವೂ ನಾನಾ ಬಗೆಯ ನಿಸರ್ಗ ಕಥನವನ್ನು ವಿಜ್ಞಾನ ಲೋಕಕ್ಕೆ ದಿನದಿನವೂ ರವಾನಿಸುತ್ತಿವೆ.

ಇಲ್ಲಿ ಏನೇನು ಪ್ರಯೋಗಗಳು ನಡೆಯುತ್ತಿವೆ ಎಂಬುದರ ಇನ್ನಷ್ಟು ಉದಾಹರಣೆ ಬೇಕೆ? ಮರಗಳು ಇಂಗಾಲದ ಡೈಆಕ್ಸೈಡನ್ನು ಹೀರಿಕೊಳ್ಳುತ್ತವೆ ಎಂಬುದು ನಮಗೆ ಗೊತ್ತಿದೆ. ಆದರೆ ಯಾವ ಮರ ಎಷ್ಟನ್ನು ಹೀರಿಕೊಳ್ಳುತ್ತದೆ? ಇಲ್ಲಿ ಆ ಪರೀಕ್ಷೆ ನಡೆಯುತ್ತಿದೆ. ಯಾವ ಮರ ಇಂಗಾಲವನ್ನು ಎಲ್ಲೆಲ್ಲಿಂದ ಹೇಗೆ ಹೀರಿಕೊಳ್ಳುತ್ತದೆ; ಎಷ್ಟನ್ನು ತಾನು ಇಟ್ಟುಕೊಂಡು ಇನ್ನೆಷ್ಟನ್ನು ತರಗೆಲೆ, ರೆಂಬೆ ತೊಗಟೆಗಳ ಮೂಲಕ ಮಣ್ಣಿಗೆ ಸೇರಿಸುತ್ತವೆ ಎಂಬುದನ್ನು ಅಳೆದು ನೋಡುವ ಸಲಕರಣೆ ಕೂಡ ಇಲ್ಲಿದೆ. ಬೆಂಗಳೂರಿನ ಎನ್‌ಸಿಬಿಎಸ್ ಸಂಸ್ಥೆಯ ಪರವಾಗಿ ಈ ಅಧ್ಯಯನ ಇಲ್ಲಿ ನಡೆಯುತ್ತಿದೆ.


ಅಲ್ಲಲ್ಲಿ ಗುಡ್ಡದ ಮೇಲೆ, ಬೆಟ್ಟದ ಚೌಕದಲ್ಲಿ, ತಗ್ಗಿನ ಒದ್ದೆಗದ್ದೆಯಲ್ಲಿ ಒಂದೂವರೆ ಮೀಟರ್ ಆಳದಲ್ಲಿ ಥರ್ಮಾಮೀಟರ್‌ಗಳನ್ನು ಹೂತಿಡಲಾಗಿದೆ. ಋತುಮಾನ ಬದಲಾದ ಹಾಗೆ ಮಣ್ಣಿನ ತಾಪಮಾನ ಹೇಗೆ ಬದಲಾಗುತ್ತಿದೆ ಎಂಬುದರ ಡೇಟಾ ಇಲ್ಲಿ ನಿರಂತರ ಸಂಗ್ರಹವಾಗುತ್ತಿದೆ.

ಕಾಡಿನ ನಡುವಣ ಕಣಿವೆಯ ಕೊಳ್ಳದಲ್ಲಿ ಅನೇಕ ಪ್ರಯೋಗಗಳು ನಡೆಯುತ್ತಿವೆ. ದಟ್ಟ ಮಳೆ ಸುರಿಯುತ್ತಿದ್ದಾಗ ಇಲ್ಲಿ ನೀರು ಎಷ್ಟು ಪ್ರಮಾಣದಲ್ಲಿ ನೆಲಕ್ಕೆ ಇಂಗುತ್ತಿದೆ, ಎಷ್ಟು ಹೊತ್ತಿನ ನಂತರ ಹಳ್ಳದಲ್ಲಿ ನೀರು ಹರಿಯತೊಡಗುತ್ತದೆ, ಮಣ್ಣು ಎಷ್ಟು ಪ್ರಮಾಣದಲ್ಲಿ ಹಳ್ಳಕ್ಕೆ ಹೋಗುತ್ತದೆ ಇವೆಲ್ಲ ಡೇಟಾ ಇಲ್ಲಿ ಸಿಗುತ್ತವೆ. ಹಳ್ಳದಲ್ಲಿ ನೀರಿನ ಹರಿವು ಹೆಚ್ಚಾದಾಗ ಅಥವಾ ಕಡಿಮೆ ಆದಾಗ ಬೆನ್ನುಮೂಳೆ ಇಲ್ಲದ ಯಾವ ಯಾವ ಜೀವಜಂತುಗಳ (ಬಸವನಹುಳು, ಇಂಬಳ, ಎರೆಹುಳ, ಜಲಜೇಡ, ಕಾಯಡಿಕೆ ಚೇಳು ಇಂಥ ಎಲ್ಲವುಗಳ) ಚಟುವಟಿಕೆ ಹೇಗೆ ಹೆಚ್ಚು ಕಮ್ಮಿ ಆಗುತ್ತದೆ ಅಥವಾ ಆಗುವುದಿಲ್ಲ ಎಂಬುದರ ಸಮೀಕ್ಷೆ ಇಲ್ಲಿ ನಡೆಯುತ್ತದೆ. ಮಳೆಗಾಲ, ಚಳಿಗಾಲಗಳಲ್ಲಿ ಈ ಕಾಡಿನ ಗೌಜುಗದ್ದಲ ಹೇಗೆ ಏರಿಳಿಯುತ್ತದೆ ಎಂಬ ಸಮೀಕ್ಷೆ ಕೂಡ ಇದೇ ಗುಡ್ಡೆಕೋಟೆಯ ಕಾಡಿನಲ್ಲಿ ನಡೆಯಲಿದೆ. 'ಬಾವಲಿಗಳ ಬಗ್ಗೆ ಇಲ್ಲಿ ಅಧ್ಯಯನಕ್ಕೆ ಬರಬಹುದಾ?' ಎಂದೊಬ್ಬ ಹಿರಿಯ ವಿಜ್ಞಾನಿ ಈಚೆಗೆ ಬಾಲು ಅವರ ಸಲಹೆಯನ್ನು ಕೇಳಿದ್ದಾರೆ. ಅಂತೂ ಇಲ್ಲಿ ಇನ್ನಷ್ಟು ಹೊಸ ಹೊಸ ಪ್ರಯೋಗಗಳು ಆರಂಭವಾಗಲಿವೆ.

9ನೇ ಪುಟಕ್ಕೆ...

ಜ್ವರ ಬಂದಿದೆ ಭೂಮಿಗೆ ಜ್ವರ ಬಂದಿದೆ

ಉತ್ತರ ಧ್ರುವದ ಹಿಮಪರ್ವತಗಳಲ್ಲಿ ಮರಿ ಮಾಡಿಕೊಂಡು ಬರಲು ಸಾವಿರಾರು ಕಿಲೋಮೀಟರ್ ದೂರ ಕ್ರಮಿಸುವ ರೆಡ್‌ನಾಟ್ ಹಕ್ಕಿಗಳು ಅಲ್ಲಿಂದ ಕಳುಹಿಸಿದ ಸಂದೇಶವಾದರೂ ಯಾವುದು?



ಸುದೀರ್ಘ ವಲಸೆಗೆ ಹೆಸರಾದ ರೆಡ್ ನಾಟ್ ಹಕ್ಕಿ ಚಿತ್ರ: ವಿಕಿಕಾಮನ್ಸ್

ಕೃಪಾಕರ, ಸೇನಾನಿ

ನಿರುತ್ಸಾಹಗೊಳಿಸುವ, ಎದೆಗುಂದಿಸುವ ವಿಷಯಗಳನ್ನು ಪ್ರಸ್ತಾಪಿಸುತ್ತಾ ಬರವಣಿಗೆಯನ್ನು ಆರಂಭಿಸುವುದು ನಮಗೆ ಸ್ವಲ್ಪವೂ ಇಷ್ಟವಿಲ್ಲದ ಕೆಲಸ. ಆಶ್ವಾಸನೆಗಳಿಲ್ಲದೆ, ಭರವಸೆ ಮೂಡಿಸದ ಚಿಂತನೆಗಳಿಂದ ನಾವು ಸಾಧಿಸುವುದಾದರೂ ಏನನ್ನು?

ಹೀಗೆ ಯೋಚಿಸುತ್ತಾ ಭೂಮಂಡಲದಲ್ಲಿ ಜರುಗುತ್ತಿರುವ ವಿದ್ಯಮಾನಗಳನ್ನು, ಪ್ರಕಟಗೊಳ್ಳುತ್ತಿರುವ ಸಂಶೋಧನಾ ಪ್ರಬಂಧಗಳನ್ನು, ವರದಿಗಳನ್ನು ಓದುವಾಗ ಮೇಲಿನ ನಮ್ಮ ನಿಲುವಿನಲ್ಲಿ ಗೊಂದಲ ಮೂಡುತ್ತದೆ. ವಿಷಾದದ ಛಾಯೆ ಆವರಿಸುತ್ತದೆ.

ಈ ಹಿನ್ನೆಲೆಯಲ್ಲಿ ಪರಿಸರ ದಿನಾಚರಣೆ ಸಂಭ್ರಮಿಸಿ ಆಚರಿಸುವ ದಿನವಾಗಲು ಸಾಧ್ಯವೇ? ನಮ್ಮ ಪ್ರಕಾರ ಇದು ವಿಷಾದದ ಪಶ್ಚಾತ್ತಾಪದ ದಿನವಾಗಬಹುದು. ಇತಿಹಾಸದುದ್ದಕ್ಕೂ ನಾವು ಭೂಮಿಯಲ್ಲಿ ನಿರಂತರವಾಗಿ ಎಸಗಿದ, ಎಸಗುತ್ತಿರುವ ಅಪಚಾರಗಳನ್ನು ಅವಲೋಕಿಸಿ ಆತ್ಮವಿಮರ್ಶೆ ಮಾಡಿಕೊಳ್ಳುವ ದಿನವಿದು. ನಮ್ಮ ಪ್ರಜ್ಞೆಯ ಅಂತರಾಳಕೆ ಇಳಿದು ಕಠಿಣ ಪ್ರಶ್ನೆಗಳನ್ನು ಎದುರಿಸುವ ದಿನವಿದು.

ಇದಕ್ಕಾಗಿ ನಾವು ಚರಿತ್ರೆಯ ಆರಂಭದ ದಿನಗಳಿಗೆ ಹೋಗಬೇಕಿಲ್ಲ. ಕೈಗಾರಿಕಾ ಕ್ರಾಂತಿಯ ನಂತರದ ಅವಧಿಯ ಬದಲಾವಣೆಗಳನ್ನು ಗಮನಿಸಿದರೆ ಸಾಕು. ಅಂದಿನಿಂದ ಇಲ್ಲಿಯವರೆಗೆ ಭೂಮಿಯಲ್ಲಿ ವಿನಾಶಗೊಂಡ ನೂರಾರು ಜೀವಿಗಳಿಗೆ ಮನುಷ್ಯ ನೇರವಾಗಿ ಕಾರಣಕರ್ತನಾಗಿದ್ದಾನೆ.

ಈಗ ಉತ್ತರ ಅಮೆರಿಕದಿಂದ ಮತ್ತೊಂದು ಆತಂಕದ ವರದಿ ಬಂದಿದೆ. ಅದು 'ರೆಡ್ ನಾಟ್' (Calidris cantus) ಎಂಬ ಪುಟ್ಟ ಹಕ್ಕಿಯ ಕುರಿತಾಗಿ.

ನಿಮಗೆ ರೆಡ್ ನಾಟ್ ಹಕ್ಕಿಗಳ ಬಗ್ಗೆ ತಿಳಿದಿರಬಹುದು. ಸುದೀರ್ಘ ವಲಸೆಗೆ ಇವು ಪ್ರಸಿದ್ಧಿ. ಈ ಹಕ್ಕಿಗಳು ದಕ್ಷಿಣ ಅಮೆರಿಕಾದ ಕೆಳ ತುದಿಯಿಂದ ಹೊರಟು ಉತ್ತರ ಧ್ರುವಕ್ಕೆ ತೆರಳುತ್ತವೆ. ಅಲ್ಲಿಯ ಹಿಮ ಪರ್ವತಗಳಲ್ಲಿ ಗೂಡುಕಟ್ಟಿ, ಮರಿ ಮಾಡಿಕೊಂಡು ಮತ್ತೆ ತವರಿಗೆ ವಾಪಸಾಗುತ್ತವೆ. ಈ ಮಹಾಪ್ರಯಾಣದಲ್ಲಿ ಅವು ಕ್ರಮಿಸುವ ದೂರ ಸುಮಾರು ಇಪ್ಪತ್ತೆಂಟು ಸಾವಿರ ಕಿಲೊಮೀಟರ್‌ಗಳು.

ರೆಡ್ ನಾಟ್ ಹಕ್ಕಿಗಳ ಈ ಅಮೋಘ ಪ್ರಯಾಣವೇ ಒಂದು ಸಾಹಸಗಾಥೆ. ರಾತ್ರಿ ಹಗಲನ್ನೆದೆ ಬೀಸುವ ಗಾಳಿಯನ್ನು, ಸುರಿಯುವ ಮಳೆಯನ್ನು, ಕೊರೆಯುವ ಚಳಿಯನ್ನು ಭೇದಿಸುತ್ತಾ ನಿರಂತರವಾಗಿ ಹಾರುತ್ತಲೇ ಇರುತ್ತವೆ. ನೀರು, ಆಹಾರ, ನಿದ್ರೆ ಕೂಡ ಇಲ್ಲದೆ ಏಳೆಂಟು ದಿನಗಳ ಹಾರಾಟವೆಂದರೆ ಇದು ಮನುಷ್ಯನ ಊಹೆಗೆ ನಿಲುಕದ ಮಹಾಪಯಣ. ಅದಕ್ಕಾಗಿ ಅವು ವ್ಯಯಿಸಬೇಕಿರುವ ಶಕ್ತಿ ಅಪಾರ. ಹಾಗಾಗಿ ಈ ದೀರ್ಘ ಪ್ರಯಾಣ ಅರ್ಧ ದಾರಿ ಕ್ರಮಿಸುವ ಹೊತ್ತಿಗೆ ಹಕ್ಕಿಗಳು ದೈಹಿಕವಾಗಿ ಕುಗ್ಗಿ ಅವುಗಳ ಹಾರಾಟದ ಶಕ್ತಿಯೇ ಇಂಗಿ ಹೋಗಿರುತ್ತದೆ. ಇಂತಹ ಸವಾಲುಗಳನ್ನು ನಿಭಾಯಿಸಲು ಹಕ್ಕಿಗಳಲ್ಲಿ ಹಲವಾರು ಯೋಜನೆಗಳು ಹುಟ್ಟರಿವಿನಿಂದ ರೂಪಿತಗೊಂಡಿರುತ್ತವೆ.

ಕೆನಡಾದ ಹಿಮಪರ್ವತಗಳನ್ನು ತಲುಪುವ ಹಾದಿಯಲ್ಲಿ ರೆಡ್ ನಾಟ್ ಹಕ್ಕಿಗಳು ಅಮೆರಿಕದ ದಲವಾರೆ ಪ್ರಾಂತ್ಯದ ಕೊಲ್ಲಿಯ ತೀರದಲ್ಲಿ ಇಳಿಯುತ್ತವೆ. ಈ ಪ್ರಯಾಣದ ಮಧ್ಯದಲ್ಲಿ ನಿತ್ರಾಣಗೊಂಡ ಹಕ್ಕಿಗಳು ಒಮ್ಮೆ ಭೂಮಿಗೆ ಇಳಿದವೆಂದರೆ ಮತ್ತೆ ರೆಕ್ಕೆಗಳನ್ನು ಬಿಚ್ಚಿ ಹಾರುವ ಸ್ಥಿತಿಯಲ್ಲಿ ಇರುವುದಿಲ್ಲ. ಈ ಗಂಭೀರ ಸನ್ನಿವೇಶದಲ್ಲಿ ಸಾಗರದ ಮರಳ ದಂಡೆಯಲ್ಲಿ ಅವುಗಳಿಗೆ ಆಹಾರ ಸಿದ್ಧವಾಗಿರುತ್ತದೆ. ಏನಿದು ಪವಾಡ?

ರೆಡ್‌ನಾಟ್‌ಹಕ್ಕಿಗಳು ಆಗಮಿಸುವ ಹೊತ್ತಿಗೆ ಕಾಕತಾಳೀಯವೆಂಬಂತೆ ಲಕ್ಷ ಲಕ್ಷ ಸಂಖ್ಯೆಯಲ್ಲಿ ಹಾರ್ಸ್ ಶೂ (Limulidae) ಏಡಿಗಳು ದಲವಾರೆ ಸಾಗರ ತೀರದಲ್ಲಿ ನೆರೆದು, ಕೋಟಿ ಕೋಟಿ ಮೊಟ್ಟೆಗಳನ್ನಿಟ್ಟು ಮತ್ತೆ ಸಾಗರದಲ್ಲಿ ಅಂತರ್ಧಾನಗೊಳ್ಳುತ್ತವೆ. ಹೇರಳ ಪೌಷ್ಟಿಕಾಂಶವಿರುವ ಈ ಮೊಟ್ಟೆಗಳನ್ನು ಕಬಳಿಸುವ ಹಕ್ಕಿಗಳು ಶರವೇಗದಲ್ಲಿ ಕರಗಿದ ಮಾಂಸ ಖಂಡಗಳನ್ನು ಮತ್ತೆ ತುಂಬಿಕೊಂಡು ಪ್ರಯಾಣ ಮುಂದುವರಿಸುತ್ತವೆ. ಏಡಿಗಳ ಈ ಮೇಳ ಜರುಗುವುದು ವರ್ಷದಲ್ಲಿ ಎರಡು ವಾರಗಳು ಮಾತ್ರ.

ಸಾವಿರಾರು ಕಿಲೊಮೀಟರ್ ದೂರದಲ್ಲಿ ಜರುಗಲಿರುವ ಈ ಮಹಾಮೇಳದ ಸುದ್ದಿಯನ್ನು ರೆಡ್ ನಾಟ್‌ಗಳು ಗ್ರಹಿಸುವುದಾದರೂ ಹೇಗೆ? ಪ್ರಯಾಣ ಆರಂಭಿಸುವ ಖಚಿತ ಸಮಯವನ್ನು ನಿಗದಿಪಡಿಸಿಕೊಳ್ಳುವುದಾದರು ಹೇಗೆ?

ಇದು ನಿಗೂಢವೆನಿಸಿದರೂ ರೆಡ್ ನಾಟ್ ಹಕ್ಕಿಗಳ ಈ ತೀರ್ಮಾನದ ಹಿಂದೆ ದೊಡ್ಡ ಲೆಕ್ಕಾಚಾರವಿರುತ್ತದೆ. ಅದು ಆಕಸ್ಮಿಕ ಅಥವಾ ಅಂದಾಜಿನ ನಿರ್ಧಾರವಾಗಿರುವುದಿಲ್ಲ. ಅವುಗಳಲ್ಲಿ ಜೈವಿಕವಾಗಿ ಅಂತರ್ಗತವಾಗಿರುವ ಅನುವಂಶಿಕ ಜ್ಞಾನ ಅದಾಗಿದೆ. ಆ ಜ್ಞಾನವೇ ಅವುಗಳ ಕಾರ್ಯ ಸೂಚಿಯನ್ನು ಕರಾರುವಕ್ಕಾಗಿ ನಿರ್ದೇಶಿಸುತ್ತದೆ.

ಆದರೆ, ಇತ್ತೀಚಿನ ವರ್ಷಗಳಲ್ಲಿ ರೆಡ್ ನಾಟ್ ಹಕ್ಕಿಗಳು ದಲವಾರೆ ಕೊಲ್ಲಿಗೆ ಆಗಮಿಸುವ ಹೊತ್ತಿಗೆ ಹಾರ್ಸ್ ಶೂ ಏಡಿಗಳ ಸುಳಿವೇ ಇರುವುದಿಲ್ಲ. ಕ್ಯಾಲೆಂಡರ್‌ಗಳಲ್ಲಿ ಗೊತ್ತುಪಡಿಸಿದಂತೆ ವರ್ಷದ ನಿರ್ದಿಷ್ಟ ಸಮಯದಲ್ಲಿ ಪ್ರತ್ಯಕ್ಷಗೊಳ್ಳುತ್ತಿದ್ದ ಏಡಿಗಳ ಕಾರ್ಯಕ್ರಮದಲ್ಲಿ ಏರುಪೇರಾಗಿದೆ. ಜಾಗತಿಕ ಹವಾಮಾನದ ಬದಲಾವಣೆಯಿಂದಾಗಿ ಅವುಗಳ ಬದುಕಿನ ಗಡಿಯಾರ ಗಲಿಬಿಲಿಗೊಂಡಿದೆ. ವಾತಾವರಣದ ನಿರ್ದಿಷ್ಟ ಉಷ್ಣಾಂಶ, ತೇವಾಂಶಗಳನ್ನು ಕೊಲ್ಲಿಯ ಅಲೆಗಳ ಏರಿಳಿತಗಳನ್ನು, ಚಲಿಸುವ ಮೋಡ, ಮಿನುಗುವ ನಕ್ಷತ್ರಗಳನ್ನು ಓದಿ ಬದುಕಿನ ಕಾರ್ಯಸೂಚಿಯನ್ನು ರೂಪುಗೊಳಿಸುತ್ತಿದ್ದ ಏಡಿಗಳು ಗೊಂದಲಕ್ಕೆ ಸಿಲುಕಿವೆ.

ರೆಡ್ ನಾಟ್ ಹಕ್ಕಿಗಳಿಗೂ ಪರಿಸ್ಥಿತಿ ಏನೆಂದು ಅರ್ಥವಾಗುತ್ತಿಲ್ಲ. ಜೈವಿಕ ಗಡಿಯಾರದ ಪ್ರೇರಣೆಗನುಸಾರವಾಗಿ ಕೊಲ್ಲಿಯ ತೀರಕ್ಕೆ ಆಗಮಿಸಿ ಬಾರದ ಏಡಿಗಳಿಗಾಗಿ ಚಂಚು ಕಟ್ಟಿ ಕುಳಿತಿವೆ. ಏಡಿಗಳ ಬದುಕಿನ ಗಲಿಬಿಲಿ ಅವುಗಳಿಗೆ ಅರ್ಥವಾಗುತ್ತಿಲ್ಲ. ಇನ್ನು ನಾಲ್ಕೈದು ದಿನಗಳಲ್ಲಿ ಅವು ಬರಬಹುದೆಂದು ಕಾದು ಕುಳಿತುಕೊಳ್ಳಲು ಅವುಗಳಿಗೆ ಸಮಯವಿಲ್ಲ.

9ನೇ ಪುಟಕ್ಕೆ...

ಕರೆಂಟು ಹುಡುಗನ ಕಾಡು ಬೆಳಕು

ಶಿವಾನಂದ ಕಳವೆ

ಪರಿಸರ ಪ್ರೀತಿಗೆ ಪದವಿ ಪುರಸ್ಕಾರಗಳ ಹಂಗಿಲ್ಲ. ಕೃಷಿ ಬದುಕಿನ ಮಧ್ಯೆ ಹೊಟ್ಟೆಪಾಡಿನ ವೈರಿಂಗ್ ಕಾಯಕ ಮಾಡುತ್ತಾ ದಶಕಗಳಿಂದ ಕಾಡು ಸಸ್ಯಗಳ ಹುಚ್ಚು ಹತ್ತಿಸಿಕೊಂಡು ಪರಿಸರದ ಖುಷಿಯ ಸೆಲೆ ಹುಡುಕುತ್ತಾ ಹೊರಟ ಹಳ್ಳಿ ಹುಡುಗನ ನೆಲ ಮೂಲದ ಪಯಣ ಇಲ್ಲಿದೆ.

ಮೊದಲಿಗೇ ಹೇಳಿ ಬಿಡುತ್ತೇನೆ. ಕಾಡು ಕಾಳಜಿಯ ಈ ಮನುಷ್ಯ ಪರಿಸರ ವಿಜ್ಞಾನಿಯಲ್ಲ. ಹತ್ತಾರು ದೇಶಸುತ್ತಿ ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡಿಸಿದ ತಜ್ಞನೂ ಅಲ್ಲ. ಪರಿಸರ ಹೋರಾಟಕ್ಕೆ ನಿಂತು ಭಾಷಣ ಮಾಡಿದಾತನಲ್ಲ. 34 ವರ್ಷಗಳ ಹಿಂದೆ 8ನೇ ತರಗತಿಯಲ್ಲಿ ಸತತ ಮೂರು ವರ್ಷ ಡುಮ್ಕಿ ಹೊಡೆದು ಶಾಲೆಯಿಂದ ಹೊರಬಿದ್ದವರು, ಧೈರ್ಯದಿಂದ ಗುಡ್ಡಬೆಟ್ಟ ಸುತ್ತಿದವರು. ಉತ್ತರ ಕನ್ನಡದ ಸಿದ್ದಾಪುರ ಬಾಲಿಕೊಪ್ಪ ಗ್ರಾಮದ ವಡ್ಡಿನಗದ್ದೆಯ ಗಣಪತಿ ಹೆಗಡೆ ವಿದ್ಯುತ್ ಪಂಪ್ ದುರಸ್ತಿ, ವೈರಿಂಗ್, ನೀರಾವರಿ ಪೈಪ್ ಅಳವಡಿಸುವ ಕಾಯಕ ಮಾಡುವವರು, ನಾಟಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಒಲವು ಉಳ್ಳವರು. ಹೊಟ್ಟೆಗೆ ಅನ್ನ ಕೊಡುವ ಕಾರ್ಯಗಳ ಮಧ್ಯೆ ಕಾಡು ಕಾಳಜಿ. ಕಿಸೆಯ ಪುಟ್ಟ ಕಾಗದದಲ್ಲಿ ಅವರಿವರಿಂದ ಮಾಹಿತಿ ಸಂಗ್ರಹಿಸಿ ಅಪರೂಪದ ಸಸ್ಯ ಎಲ್ಲಿದೆ? ಯಾವಾಗ ಬೀಜ ಸಿಗುತ್ತದೆಂದು ವಿವರ ಇಟ್ಟುಕೊಂಡು ಸಂಗ್ರಹಕ್ಕೆ ಸೂಕ್ತ ಕಾಲಕ್ಕೆ ಕಾಯುವ ಆಸಾಮಿ. ದೂರ ದೂರದ ಕಾಡುಗಳಿಗೆ ಹೋಗಿ ಬೀಜ ಸಂಗ್ರಹಿಸಿ ಹತ್ತೋ, ಇಪ್ಪತ್ತೋ, ನೂರೋ ಹೀಗೆ ಕೈಲಾದಷ್ಟು ಸಸಿ ಬೆಳೆಸಿ ಮನೆ ಸನಿಹದ ಬೆಟ್ಟ ಗುಡ್ಡಗಳಲ್ಲಿ ನೆಡುವ ಕಾಯಕ ಜೀವಿ.



ಜಾಲಾರಿ ಬೀಜ

ಕಾಡು ಬೀಜ ಮೊಳಕೆ ಭರಿಸುವ ನಾಟಿ ತಂತ್ರ ಯಾವುದು? ಇರುವೆ, ಫಂಗಸ್‌ಗಳಿಂದ ರಕ್ಷಿಸುವ ನಾಟಿ ಉಪಾಯ ಏನು ಎಂಬ ವಿಚಾರಗಳಲ್ಲಿ ಪ್ರಯೋಗಶೀಲರು. ಬೂದಿ, ಸಗಣಿ, ಗೋಮೂತ್ರ, ಮರಳು, ತೆರಕು, ಕಟ್ಟಿಗೆ ಹುಡಿ, ಮಣ್ಣು, ಹ್ಯೂಮಸ್ ಹೀಗೆ ಬಳಕೆಯ ತಂತ್ರಗಳು ಹತ್ತಾರು. ಸಸ್ಯ ವಿಶೇಷ ಏನು? ಬೆಳೆಸಲು ಎಂಥ ಪರಿಸರ ಸೂಕ್ತ? ಯೋಚಿಸುತ್ತ ಹುಡುಕಾಟ ನಡೆಸುವವರು. ಸಸ್ಯ ಸ್ನೇಹಿತರು, ಅರಣ್ಯ ಇಲಾಖೆಯ ನರ್ಸರಿ ಕೆಲಸಗಾರರು, ಅಧಿಕಾರಿಗಳ ಒಡನಾಟದಿಂದ ಕಲಿಕೆಯ ನಡಿಗೆ. ಕೃಷಿ ಬಡತನದಲ್ಲಿ ಹತ್ತಾರು ರಂಗಗಳಲ್ಲಿ ಕೆಲಸ ಮಾಡುತ್ತ ಗಣಪತಿಯ ಈ ಪರಿಸರ ರೂಪ ಅವಿರ್ಭವಿಸಿದ್ದೇ ಏಕತಾನತೆಯ ಧ್ಯಾನದಲ್ಲಿ! ಈಗ ಮರಕ್ಕೆ ಹಬ್ಬಿದ ಬಳ್ಳಿಯಂತೆ ಕಾಡಿಗೆ ಅಂಟಿಕೊಂಡಿದ್ದಾರೆ.

10ನೇ ಪುಟಕ್ಕೆ...



ಗಣಪತಿ ಹೆಗಡೆ

ವಿದ್ಯಾರ್ಥಿ ಭವನ

ಮುದ ಮೂಡಿಸುವ ಪ್ರಹಸನ



ಎಚ್.ಎಸ್. ವೆಂಕಟೇಶಮೂರ್ತಿ

ವಿದ್ಯಾರ್ಥಿಭವನ ಬೆಂಗಳೂರು ದಕ್ಷಿಣದಲ್ಲಿರುವ ಹೆಸರಾಂತ ದೋಸೆ ಹೋಟೆಲ್. 1943ರಲ್ಲಿ ಪ್ರಾರಂಭವಾದ ಹೋಟೆಲ್ ಈವರೆಗೆ ನಿರಂತರವಾಗಿ ಆಸಕ್ತರ ನಾಲಗೆಯ ಅಪೇಕ್ಷೆಯನ್ನು ಗುಣಕಳೆದುಕೊಳ್ಳದೆ ಈಡೇರಿಸುತ್ತಿದೆ. ವಿದ್ಯಾರ್ಥಿಗಳಿಗಾಗಿಯೇ ಈ ಫಲಾಹಾರ ಮಂದಿರ ಪ್ರಾರಂಭವಾದುದರಿಂದ ಅದು ಆಗ ವಿದ್ಯಾರ್ಥಿಭವನ ಎಂಬ ನಾಮಫಲಕ ಧರಿಸಿತು. 1973ರಲ್ಲಿ ನಾನು ಬೆಂಗಳೂರಿಗೆ ಬಂದದ್ದು. ಅಲ್ಲಿಂದ ಈವರೆಗೆ ವಿದ್ಯಾರ್ಥಿಭವನ ನನಗೆ ಪ್ರಿಯವಾದ ಸ್ಥಳ. ಎಲ್ಲ ವರ್ಗದ, ಎಲ್ಲ ಸ್ತರದ ಜನ ಅಲ್ಲಿಗೆ ಬರುತ್ತಾರೆ. ರಾಜಕೀಯ ಧುರೀಣರು, ಖ್ಯಾತನಾಮರಾದ ಸಾಹಿತ್ಯವರೇಣ್ಯರು, ಜನಪ್ರಿಯರಾದ ಗಾಯಕರು, ಐ.ಟಿ, ಬಿ.ಟಿ ಸರದಾರರು ಹೀಗೆ ಎಲ್ಲರೂ ವಿದ್ಯಾರ್ಥಿಭವನದ ಹೊಕ್ಕಾಟ ಉಳ್ಳವರು. ಹೀಗಾಗಿ ವಿದ್ಯಾರ್ಥಿಭವನದ ದೋಸೆಯ ಕಂಪಿನೊಂದಿಗೆ ಆಪ್ತವಾದ ಅನೇಕ ಸಾಂಸ್ಕೃತಿಕ ನೆನಪುಗಳು ಸ್ಮರಣೆಯ ಸುರುಳಿ ಬಿಚ್ಚುತ್ತವೆ. ಮಾಸ್ತಿ, ಕೈಲಾಸಂ, ರಾಜರತ್ನಂ, ಜಿ.ಎಸ್.ಎಸ್, ಅಶ್ವತ್ಥ, ಅನಂತಸ್ವಾಮಿ, ಲಂಕೇಶ್, ವೈ.ಎನ್.ಕೆ ಮುಂತಾದವರಿಗೆ ಅದು ಪ್ರಿಯವಾದ ಸ್ಥಳವಾಗಿತ್ತು ಎನ್ನುವುದೇ ನಮ್ಮನ್ನು ಅದರತ್ತ ಸೆಳೆಯಲು ಸಾಕು! ಹೆಚ್ಚು ಕಮ್ಮಿ ಎಂಭತ್ತು ವರ್ಷಗಳ ದೀರ್ಘ ಇತಿಹಾಸವಿದೆ ಈ ಉಣ್ದಾಣಕ್ಕೆ!



ವಿದ್ಯಾರ್ಥಿಭವನದ ವಿಶೇಷ ಅದರ ಗರಿಮುರಿ ಮಸಾಲೆದೋಸೆ. ವಿಸೀ ಅವರ ಮಸಾಲೆ ದೋಸೆ ಎಂಬ ಪ್ರಬಂಧವನ್ನು ಹಳ್ಳಿಯಲ್ಲಿದ್ದಾಗಲೇ ಓದಿ ಆಕರ್ಷಿತರಾದ ನನ್ನಂಥವರಿಗೆ ನಾವು ಸಾಹಿತ್ಯದಲ್ಲಿ ಆಸ್ವಾದಿಸಿದ ದೋಸೆ ಕಣ್ಮುಂದೆ ಧುತ್ತೆಂದು ಪ್ರತ್ಯಕ್ಷವಾಗುವುದು ರೋಚಕ ಪವಾಡವೇ! ಇತ್ತೀಚೆಗೆ ವಿದ್ಯಾರ್ಥಿಭವನದ ಮಿತ್ರರಾದ ಅರುಣ ಅವರು ನನ್ನನ್ನು ಸಂಪರ್ಕಿಸಿ, ತಮ್ಮ ಹೋಟೆಲ್ ಬಗ್ಗೆಯೇ ಒಂದು ನಾಟಕ ಸಿದ್ಧವಾಗಿದೆಯೆಂದೂ, ಅದರ ಪ್ರಯೋಗ ಚೌಡಯ್ಯ ಸ್ಮಾರಕ ಭವನದಲ್ಲಿ ಇರುವುದೆಂದೂ, ಆ ಪ್ರಯೋಗಕ್ಕೆ ತಪ್ಪದೆ ಬರಬೇಕೆಂದೂ ಹಕ್ಕೊತ್ತಾಯ ಮಂಡಿಸಿದರು! ನಾನೂ ನನ್ನ ಕವಿಮಿತ್ರರಾದ ಲಕ್ಷ್ಮಣರಾಯರೂ ಹೋಟೆಲ್ ಒಂದರ ಬಗ್ಗೆ ಎಂಥ ನಾಟಕ ಮಾಡುವರು... ಕರೆದರಲ್ಲಾ ಎಂದು ಹೋಗಬೇಕಷ್ಟೆ ಎಂದು ಮಾತಾಡಿಕೊಂಡೆವು.


ಹಿಂದಿನಿಂದ ನಾಟಕದ ಸ್ಕ್ರಿಪ್ಟ್ ರಾಜೇಂದ್ರ ಕಾರಂತರದ್ದು, ನಿರ್ದೇಶನ ಅರ್ಜುನ ಕಬ್ಬಿಣ ಅವರದ್ದು, ಸಂಗೀತ ಪ್ರವೀಣ್ ಮತ್ತು ಪ್ರದೀಪ್ ಅವರದ್ದು ಎಂಬುದು ತಿಳಿದಾಗ ನಾಟಕದ ಪ್ರಯೋಗದ ಬಗ್ಗೆ ಸಹಜವಾಗಿಯೇ ಆಸಕ್ತಿ ಮೂಡಿತು. ಸಿಹಿ ಕಹಿ ಚಂದ್ರು ಪ್ರಧಾನ ಭೂಮಿಕೆ ವಹಿಸುವರೆಂಬುದು ಮತ್ತಷ್ಟು ಕುತೂಹಲ ಕೆರಳಿಸಿತು. ಸುಂದರ್ ವೀಣಾ ಅವರನ್ನೂ ಒಳಗೊಂಡಂತೆ 30ಕ್ಕೂ ಹೆಚ್ಚು ಮಂದಿ ಕಲಾವಿದರು ರಂಗಭೂಮಿಯ ಮೇಲೆ ಕಾಣಿಸುವವರಿದ್ದರು. ಹೇಗಾಗುತ್ತೋ ನೋಡುವ ಎಂದು ನಾನಂತೂ ಅರ್ಧ ಮನಸ್ಸಲ್ಲೇ ರಂಗಮಂದಿರಕ್ಕೆ ಹೋದದ್ದು!

ನಾಟಕ ನಿಗದಿತ ವೇಳೆಗೆ ಪ್ರಾರಂಭವಾಯಿತು. ವಿದ್ಯಾರ್ಥಿಭವನದ ಪ್ರವೇಶ ದ್ವಾರದ ರಂಗಸಜ್ಜಿಕೆ. ಒಳಗೆ ಗ್ರಾಹಕರು ಕುಳಿತುಕೊಳ್ಳಲು ಟೇಬಲ್ಲು, ಕುರ್ಚಿಗಳು. ಹೋಟೆಲ್ಲಿನ ತಿಂಡಿ ಒದಗಣೆಕಾರರು! ಅವರಲ್ಲಿ ವಿದ್ಯಾರ್ಥಿಭವನದ ಗೋಡೆಗೆ ಜೋತು ಬಿದ್ದಿರುವ ಕವಿ ಕಲಾವಿದರ ಚಿತ್ರಗಳನ್ನು ಬರೆದು ದಶಕಗಳ ಸೇವೆಯ ನಂತರ ನಿವೃತ್ತರಾದ ಮೂರ್ತಿಯವರ ಪಾತ್ರವೂ ಉಂಟು. ವಿದ್ಯಾರ್ಥಿಭವನಕ್ಕೆ ಡಾ. ರಾಜಕುಮಾರರು ಬಂದಿದ್ದಾರೆ. ಕೈಲಾಸಂ ಬಂದಿದ್ದಾರೆ, ರಾಮಕೃಷ್ಣ ಹೆಗಡೆ ಮೊದಲಾದ ರಾಜಕೀಯ ನಾಯಕರು ಬಂದಿದ್ದಾರೆ, ನಿಸಾರ್ ಅಹಮದ್ ಅವರಂತಹ ಕವಿಗಳೂ ಅಶ್ವತ್ಥರಂಥ ವಿಖ್ಯಾತ ಗಾಯಕರೂ ಬಂದಿದ್ದಾರೆ.

ರಂಗದ ಮೇಲೆ ಆವತ್ತು ಸಂಭವಿಸಿದ್ದೂ ಅದೇ. ಒಬ್ಬೊಬ್ಬರಾಗಿ ಈ ಜನಮೆಚ್ಚಿನ ವಿಖ್ಯಾತರನ್ನು ಹೋಟೆಲ್ಲಿಗೆ ಕರೆತಂದು ಅವರವರ ಕಲೆಯ ಮಿಂಚು ರಂಗದ ಮೇಲೆ ಸಹಜವಾಗಿ ಸಂಭವಿಸುವಂತೆ ಮಾಡಿ, ಎಂಭತ್ತು ವರ್ಷಗಳ ಸವಿ ನೆನಪುಗಳನ್ನು ವಿದ್ಯಾರ್ಥಿಭವನದ ಕೇಂದ್ರ ನಾಯಕನಾದ ಮಸಾಲೆದೋಸೆ ನಿರೂಪಿಸುತ್ತಾ ಹೋಗುತ್ತದೆ! ನಿಸಾರ್ ಪದ್ಯ ವಾಚನ, ಅಶ್ವತ್ಥರ ಸಂಗೀತ, ರಾಜಕುಮಾರರ ಹಿತವಾದ ಕನ್ನಡ, ವೈ.ಎನ್.ಕೆ ಅವರ ಜೋಕು, ಕೈಲಾಸಂ ಅವರ ಹಾಡು, ಇನ್ಫೋಸಿಸ್ ನಾರಾಯಣಮೂರ್ತಿಯವರು ಅರುಣ್ ಅವರಿಗೆ ನೀಡುವ ಹಿತವಚನ ಒಂದೊಂದೂ ರೋಚಕ!

ಪರವಾಗಿಲ್ಲವೇ ವಿದ್ಯಾರ್ಥಿಭವನದ ದೋಸೆಯ ರಸಿಕತೆ ವಿಸ್ತಾರವಾದದ್ದು ಅನ್ನಿಸಿ ತೆಳುವಾದ ಮುಗುಳ್ನಗೆ ಮುಖದಲ್ಲಿ ಅರಳಿತು! ಆಪ್ತವಾದ ಈ ಹಿಲೇರಿಯಸ್ ನಾಟಕವನ್ನು (ಪ್ರಹಸನವನ್ನು!) ನೆನಪುಗಳ ಮರು ಜಾಗರಣೆ ಅನ್ನೋಣವೇ? ಜನಪ್ರಿಯ ಸಾಧಕರ ಆಪ್ತ ತುಂಡು ನೋಟಗಳೆನ್ನೋಣವೇ? ವಿದ್ಯಾರ್ಥಿಭವನದ ರುಚಿ ಮತ್ತು ಅಭಿರುಚಿಗಳ ಆಪ್ತ ಅಭಿವ್ಯಕ್ತಿ ಎನ್ನೋಣವೇ? ನಿಸಾರ್ ಅಹಮದ್, ಅಶ್ವತ್ಥ, ರಾಜಕುಮಾರ್-ಒಂದೊಂದು ಪಾತ್ರವೂ ತನ್ನ ಮಾತು ನಡಾವಳಿಗಳಿಂದ ಪ್ರೇಕ್ಷಕರನ್ನು ಮರುಳುಮಾಡಿದ್ದಂತೂ ಮೆಚ್ಚಬೇಕಾದದ್ದೇ! ದೋಸೆಯ ಪಾತ್ರದಲ್ಲಿ ಸಿಹಿಕಹಿ ಚಂದ್ರು, ಸಿ.ಅಶ್ವತ್ಥರ ಪಾತ್ರದಲ್ಲಿ ಸುಂದರರಾಜ್ ಮಿಂಚಿದರೆಂದೇ ಹೇಳಬೇಕು.

ನಾಟಕ ಮುಗಿದಾಗ ಎಲ್ಲರ ಮುಖಗಳೂ ಮಂದಸ್ಮಿತ. ವಿದ್ಯಾರ್ಥಿಭವನ ಕೇವಲ ತಿಂಡಿಪೋತರ ಜಾಗವಲ್ಲ. ಅದಕ್ಕೊಂದು ಸಾಂಸ್ಕೃತಿಕ ಸ್ಪರ್ಶವಿದೆ ಎನ್ನುವಂತಾಯಿತು. ಅನುಮಾನಿಸುತ್ತಾ ಬಂದವರು ಮೆಚ್ಚುಗಣ್ಣರಳಿಸಿ, ಕಲಾವಿದರ ಕೈಕುಲಕಿ ಚೌಡಯ್ಯ ಕಲಾಭವನದಿಂದ ಹೊರಬಿದ್ದೆವು. ನಾಟಕ ಮುಗಿದ ಮೇಲೂ ಸವಿರುಚಿಯೊಂದಿಗೆ, ಸ್ವಚ್ಛ ಅಭಿರುಚಿಯೂ ದೋಸೆಯ ಘಮದೊಂದಿಗೆ ನಮ್ಮನ್ನು ಹಿಂಬಾಲಿಸಿತು. ❖



ಕವಿ ನಿಸಾರ್ ಅಹಮದ್ ಪಾತ್ರಧಾರಿಯ ಜೊತೆಗೆ ಗರಿಗರಿ ಮಸಾಲೆದೋಸೆಯಾಗಿ ಸಿಹಿಕಹಿ ಚಂದ್ರು

ಮುನ್ನೋಟ 05-06-2022 ರಿಂದ 11-06-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಹಿರಿಯರೊಂದಿಗೆ ಮನಃಸ್ತಾಪ ಆಗುವ ಸಂದರ್ಭವಿದೆ, ಎಚ್ಚರವಹಿಸಿರಿ. ಇಷ್ಟಮಿತ್ರರ ಆಗಮನದಿಂದ ಮನಸ್ಸಿಗೆ ಸಂತೋಷವಾಗುತ್ತದೆ. ನೌಕಾಯಾನದಲ್ಲಿ ಕೆಲಸ ಮಾಡುತ್ತಿರುವವರಿಗೆ ಸಮಯ ಉತ್ತಮವಾಗಿರುತ್ತದೆ. ಪ್ರಸಕ್ತ ರಾಜಕೀಯದಲ್ಲಿ ಇರುವವರಿಗೆ ಅನಿರೀಕ್ಷಿತ ಸುದ್ದಿಯೊಂದು ದಿಗ್ಭ್ರಮೆ ಮೂಡಿಸುತ್ತದೆ. ಸ್ಥಿರಾಸ್ತಿಯ ದಾಖಲೆಯಲ್ಲಿದ್ದ ತೊಡಕುಗಳು ನಿವಾರಣೆಯಾಗುತ್ತವೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಭೂ ವ್ಯವಹಾರವನ್ನು ಮಾಡುವವರಿಗೆ ಉತ್ತಮ ಏಳಿಗೆ ಇರುತ್ತದೆ. ತೈಲವಸ್ತುಗಳನ್ನು ಮಾರಾಟ ಮಾಡುವವರಿಗೆ ಪ್ರಗತಿಯ ಜೊತೆಗೆ ಹೆಚ್ಚಿನ ಲಾಭವು ಇರುತ್ತದೆ. ಪಾಲುದಾರಿಕೆಯಲ್ಲಿ ವ್ಯವಹಾರ ಮಾಡುವುದು ಬಹಳ ಉತ್ತಮ. ಇದರಿಂದ ನಿಮಗೆ ಹೆಚ್ಚು ಲಾಭ ಬರುತ್ತದೆ. ಆರ್ಥಿಕ ಸ್ಥಿತಿಯು ಉತ್ತಮವಾಗಿರುತ್ತದೆ. ನಿರೀಕ್ಷಿತ ಮೂಲಗಳಿಂದ ಹಣ ಒದಗಿ ಬರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ವಿದ್ಯಾರ್ಥಿಗಳಿಗೆ ಅತ್ಯಂತ ಮಹತ್ವವಾದ ಕಾಲವೆನಿಸುತ್ತದೆ. ನಿರುದ್ಯೋಗಿಗಳನ್ನು ಅವರ ಹಳೆಯ ಸಂಸ್ಥೆಗಳು ಪುನಃ ಕೆಲಸಕ್ಕೆ ಕರೆಯಬಹುದು. ನಿಮ್ಮ ಮಿತ್ರರ ಸಹಕಾರದಿಂದ ರಾಜಕೀಯ ವ್ಯವಹಾರಗಳು ಸುಗಮವಾಗುತ್ತವೆ. ಆರ್ಥಿಕ ದೃಢೀಕರಣದಿಂದ ನಿಮ್ಮ ಹೊಸ ಕೆಲಸ ಕಾರ್ಯಗಳಿಗೆ ಅನುಕೂಲವಾಗುತ್ತದೆ. ಮೇಲಧಿಕಾರಿಯ ತಲೆನೋವು ತಪ್ಪುವ ಸಾಧ್ಯತೆ ಇದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಗುರು ಹಿರಿಯರಿಂದ ಹೆಚ್ಚು ಪ್ರಶಂಸೆ ಒದಗಿಬರುತ್ತದೆ. ಆಕಸ್ಮಿಕ ಧನಲಾಭವಾಗುವ ಸಾಧ್ಯತೆ ದಟ್ಟವಾಗಿದೆ. ಆದಾಯದ ಹೊಸದಾರಿಗಳು ಗೋಚರ ಆಗುವ ಸಾಧ್ಯತೆಗಳಿವೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ಕುಶಲ ಕರ್ಮಿಗಳಿಗೆ ಉತ್ತಮ ಮನ್ನಣೆ ಸಿಗುವುದರ ಜೊತೆಗೆ ಉತ್ತಮ ಆದಾಯ ದೊರೆಯುತ್ತದೆ. ಉದ್ಯಮ ರಂಗದಲ್ಲಿ ನೀವು ಮಾಡುವ ಬದಲಾವಣೆಗಳು ಶುಭ ಫಲಿತಾಂಶ ಕೊಡುತ್ತವೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ವೃತ್ತಿಯಲ್ಲಿ ಪ್ರಗತಿ ಇರುತ್ತದೆ. ಹಣದ ಒಳಹರಿವಿಗೆ ಏನೂ ತೊಂದರೆ ಇರುವುದಿಲ್ಲ, ಆದರೆ ಖರ್ಚಿಗೆ ಕಡಿವಾಣ ಹಾಕಬೇಕಾದ ಅನಿವಾರ್ಯವಿದೆ. ಕೈಗಾರಿಕೋದ್ಯಮಿಗಳು ಪ್ರಗತಿ ಕಾಣಬಹುದು. ಹೊಸ ಉದ್ಯಮ ಸ್ಥಾಪಿಸುವ ಉತ್ಸಾಹವಿರುತ್ತದೆ. ದೂರ ಪ್ರಯಾಣದಿಂದ ಅತಿಯಾದ ಆಯಾಸ ಆಗಬಹುದು. ನಿಮ್ಮ ಕೆಲವೊಂದು ಕೆಲಸಗಳು ನಿಧಾನವಾದರೂ ಕೆಲಸ ನಿಲ್ಲುವುದಿಲ್ಲ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಕೆಲವು ರಾಜಕೀಯ ಮುಖಂಡರಿಗೆ ಮುಖಭಂಗ ಅನುಭವಿಸುವ ಲಕ್ಷಣಗಳಿವೆ. ಪತ್ರಿಕೋದ್ಯಮದಲ್ಲಿ ಕೆಲಸ ಮಾಡುತ್ತಿರುವವರಿಗೆ ಹೆಚ್ಚಿನ ಪ್ರಗತಿ ಇರುತ್ತದೆ. ಮನೆಯವರ ಸಹಕಾರ ನಿಮಗೆ ಒದಗಿ ಬರುತ್ತದೆ. ಆಲಸ್ಯ ಉದಾಸೀನತೆಯಿಂದ ನಿರೀಕ್ಷಿತ ಫಲಿತಾಂಶಗಳು ಕೈಕೊಡಬಹುದು. ಅನಗತ್ಯ ಕೋಪದಿಂದ ವ್ಯವಹಾರದಲ್ಲಿ ಮುಜುಗರ ಉಂಟಾಗುವುದರ ಜೊತೆಗೆ ನಷ್ಟ ಆಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಮಕ್ಕಳಿಂದ ಕಠಿಣ ಮಾತುಗಳನ್ನು ಕೇಳಬೇಕಾಗಬಹುದು. ಭೂ ವ್ಯವಹಾರ ಮಾಡುವವರಿಗೆ ಸ್ವಲ್ಪ ಹಿನ್ನಡೆಯ ವಾರ. ಚಿಕ್ಕ ಮಕ್ಕಳ ಯೋಗ ಕ್ಷೇಮದ ಬಗ್ಗೆ ಹೆಚ್ಚು ನಿಗಾ ಇರಲಿ. ಉದ್ಯೋಗ ಕ್ಷೇತ್ರದಲ್ಲಿ ಹೆಚ್ಚು ಒತ್ತಡಗಳಾಗಬಹುದು. ತಾಳ್ಮೆಯಿಂದ ಇದ್ದಲ್ಲಿ ಹೆಚ್ಚು ತೊಂದರೆಯಾಗುವುದಿಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಣ ಒಗ್ಗೂಡಿಕೆ ಮಾಡಬೇಕು. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಭೂ ವ್ಯವಹಾರವನ್ನು ಮಾಡುವವರಿಗೆ ಹೆಚ್ಚಿನ ಪ್ರಗತಿ ಇರುತ್ತದೆ. ಅನಿರೀಕ್ಷಿತ ಧನಾಗಮನವಾಗಬಹುದು. ಕೆಲವೊಂದು ವಿಷಯಗಳಲ್ಲಿ ಇದ್ದ ಅತಿಯಾದ ಆತಂಕದ ಸಂದರ್ಭಗಳು ದೂರವಾಗುತ್ತವೆ. ಸೂಕ್ತ ಸಮಯದಲ್ಲಿ ಬಂಧುಗಳ ಸಹಕಾರ ಒದಗಿಬರುತ್ತದೆ. ವೈದ್ಯರ ನೆರವಿನಿಂದಾಗಿ ಆರೋಗ್ಯದಲ್ಲಿ ಸ್ಥಿರತೆಯನ್ನು ಕಾಣಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಉದ್ಯೋಗ ಕ್ಷೇತ್ರದಲ್ಲಿ ಲವಲವಿಕೆಯ ವಾರ. ಮೇಲಧಿಕಾರಿಗಳಿಂದ ಪ್ರಶಂಸೆಯನ್ನು ಕೇಳಬಹುದು. ಸಾಲದ ಮೇಲಿನ ತೊಂದರೆ ನಿವಾರಣೆಯಾಗಬಹುದು. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿ ಇರುತ್ತದೆ. ವಿದೇಶಿ ಅಲಂಕಾರಿಕ ವಸ್ತುಗಳನ್ನು ಕೊಳ್ಳುವ ಸಾಧ್ಯತೆ ಇದೆ. ಕಣ್ಣಿನ ತೊಂದರೆ ಇರುವವರು ಮತ್ತು ಚರ್ಮದ ಕಾಯಿಲೆ ಇರುವವರು ಚಿಕಿತ್ಸೆಗೆ ಹೋಗುವುದು ಬಹಳ ಒಳಿತು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಮಾಡಿದ ಕೆಲಸಗಳಲ್ಲಿ ಹೆಚ್ಚು ಮನ್ನಣೆ ದೊರೆಯುತ್ತದೆ. ಹೊಸ ಕಾರ್ಯ ರೂಪಿಸುವಲ್ಲಿ ನಿಮ್ಮ ಯೋಜನೆ ಸಫಲವಾಗಲಿದೆ. ಬೇರೆಯವರ ಹಣದ ಅಥವಾ ಸಾಂಸಾರಿಕ ವ್ಯವಹಾರಗಳಲ್ಲಿ ಮಧ್ಯಸ್ಥಿಕೆಯನ್ನು ವಹಿಸುವುದು ಖಂಡಿತಾ ಬೇಡ. ಹಿರಿಯ ಅಧಿಕಾರಿಗಳ ಭೇಟಿಯಿಂದ ಮುಂದೂಡಲ್ಪಡುತ್ತಿರುವ ಕೆಲವು ಕೆಲಸಗಳು ಶೀಘ್ರವಾಗಿ ಆಗುತ್ತವೆ. ವಿದ್ಯಾರ್ಥಿಗಳಿಗೆ ಅನುಕೂಲ ಕಾಲವಾಗಿರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹೊಸ ವಾಹನ ಖರೀದಿಯ ಯೋಗವಿದೆ. ಹಣದ ಒಳಹರಿವು ತೃಪ್ತಿಕರವಾಗಿ ಇರುತ್ತದೆ. ಕೆಲವು ಯುವಕರ ಒರಟು ಮಾತು ಉದ್ಯೋಗಕ್ಕೆ ಕುತ್ತು ತರಬಹುದು. ಸ್ಥಿರಾಸ್ತಿ ವಿಚಾರದಲ್ಲಿ ಪ್ರಗತಿ ಸಾಧಿಸಬಹುದು. ಸ್ವಲ್ಪ ಆಲಸಿತನವಿದ್ದರೂ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳುವಿರಿ. ಶೀತಬಾಧೆ ಇರುವವರು ಹೆಚ್ಚು ಎಚ್ಚರವಹಿಸಬೇಕು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಕಲಾವಿದರಿಗೆ ಹೆಚ್ಚು ಅನುಕೂಲಕರ ವಾತಾವರಣವಿರುತ್ತದೆ. ಸಾಂಸಾರಿಕ ನೆಮ್ಮದಿ ಇದ್ದರೂ ಆರ್ಥಿಕ ಸಮಸ್ಯೆ ಹೆಚ್ಚಾಗಬಹುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಗಮನವನ್ನು ಈಗ ಕೊಡಲೇಬೇಕು. ವೈದ್ಯ ವೃತ್ತಿಯವರಿಗೆ ಹೆಚ್ಚಿನ ಪ್ರಗತಿ ಇರುತ್ತದೆ. ಸಂಗೀತಗಾರರಿಗೆ ಹೆಚ್ಚು ಆದಾಯ ಬರುವ ಸಾಧ್ಯತೆಗಳಿವೆ. ಚಿನ್ನಾಭರಣಗಳನ್ನು ಖರೀದಿ ಮಾಡುವ ಸಂದರ್ಭವಿದೆ.

ಕಾಡೇ ಪ್ರಯೋಗಶಾಲೆ

8ನೇ ಪುಟದಿಂದ...

ಎಲ್ಲಕ್ಕಿಂತ ವಿಶೇಷ ಏನೆಂದರೆ, ಇಲ್ಲಿನ ಗುಡ್ಡದ ಮೇಲಿನ ಟವರ್ ತುದಿಯಲ್ಲಿ ಒಂದು ಕ್ಯಾಮೆರಾ ಇದೆ. ಅದು ಇಡೀ ಕಾಡಿನ ನೆತ್ತಿಯ ಮೇಲೆ ಸತತ ಕಣ್ಣಿಟ್ಟಿದೆ. ವರ್ಷದುದ್ದಕ್ಕೂ ಎಲೆಗಳ ಬಣ್ಣ, ವಿಸ್ತೀರ್ಣ ಹೇಗೆ ಬದಲಾಗುತ್ತಿದೆ, ಭಾಷ್ಪ ಮತ್ತು ಪರಾಗ ವಿಸರ್ಜನೆಯ ಪ್ರಮಾಣ ಹೇಗೆ ಏರಿಳಿತವಾಗುತ್ತದೆ ಎಲ್ಲವನ್ನೂ ಅದು ದಾಖಲಿಸುತ್ತಿರುತ್ತದೆ. ಮೋಡಗಳ ಜೊತೆ ಕಾಡಿನ ಮರಗಳು ಹೇಗೆ ಸಂಭಾಷಣೆ ನಡೆಸುತ್ತವೆ ಎಂಬುದರ ಚಿತ್ರಣ ವಿಜ್ಞಾನಿಗಳಿಗೆ ಸಿಗುತ್ತಿದೆ.



ಎಲೆಗಳ ಉಸಿರಾಟವನ್ನು ಅಳೆಯುವ ತಾಯತ

ಇಂಥ ಹಲವಾರು ಪ್ರಯೋಗಗಳು ಗುಡ್ಡೆ ತೋಟದ ತಪ್ಪಲಲ್ಲಿ ಇರುವ ಇವರ ಖಾಸಗಿ ತೋಟದಲ್ಲೇ ನಡೆಯುತ್ತಿವೆ. ತೋಟಕ್ಕೆ ಬರುವ ಕಾಡು ಪ್ರಾಣಗಳನ್ನು ಗುರುತಿಸಲು ನಿಶಾಚರ ಜೀವಿಗಳ ಫೋಟೊ ತೆಗೆಯುವ ಸೌಲಭ್ಯವೂ ಇಲ್ಲಿದೆ. ಹವಾಮಾನ ಬದಲಾವಣೆ ಆಗುತ್ತಿದ್ದಂತೆ ಸಸ್ಯಗಳ ಎಲೆಗಳು ಹೇಗೆ ಕಾರ್ಯ ನಿರ್ವಹಿಸುತ್ತವೆ ಎನ್ನುವ ಬಗ್ಗೆಯೂ ಅಧ್ಯಯನಗಳು ನಡೆಯುತ್ತಿವೆ. ನಿಸರ್ಗಕ್ಕೆ ಒಂದನಿತೂ ಹಾನಿಯಾಗದಂತೆ ನಿಸರ್ಗವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ನಡೆಯುತ್ತಿದೆ.

ಇವನ್ನೆಲ್ಲ ನಿಭಾಯಿಸುವ ಬಾಲು ವಿಜ್ಞಾನಿಯ ಥರಾ ಕಾಣುವುದೇ ಇಲ್ಲ. ಲುಂಗಿಯನ್ನು ಮೇಲಕ್ಕೆತ್ತಿ ಕಟ್ಟಿ, ಪಕ್ಕಾ ಮಲೆನಾಡಿನ ರೈತನಂತೆ ಕೈಯಲ್ಲಿ ಅದೆಂಥದೊ ಗ್ಯಾಜೆಟ್ ಹಿಡಿದು ನಿರಾಳವಾಗಿ ಓಡಾಡುತ್ತಿರುತ್ತಾರೆ. ಇವರು ಏಳು ದೇಶಗಳ ಎಂಟು ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಿದವರು. ಸದ್ಯಕ್ಕೆ ಜರ್ಮನಿಯ ಕ್ರಿಸ್ವಾಲ್ಡ್ ವಿ.ವಿ. ಮತ್ತು ಕಠ್ಮಂಡುವಿನ ತ್ರಿಭುವನ್ ವಿ.ವಿ.ಯಲ್ಲಿ ಸಂದರ್ಶಕ ಉಪನ್ಯಾಸಕರಾಗಿದ್ದಾರೆ. ಬಿಡುವಿನ ವೇಳೆಯಲ್ಲಿ ತಮ್ಮದೇ ಊರಿನ ಶಾಲಾ ಮಕ್ಕಳಿಗೆ ಪಾಠ ಹೇಳುತ್ತಾರೆ. ದೇಶ ವಿದೇಶಗಳಿಂದ ಅಧ್ಯಯನಕ್ಕೆ ಬರುವ ಯುವ ವಿಜ್ಞಾನಿಗಳಿಗೆ ಮಾರ್ಗದರ್ಶನ ಮಾಡುತ್ತಾರೆ.

ಭೌತವಿಜ್ಞಾನದಲ್ಲಿ ಪದವಿ ಪಡೆದು ಮೈಸೂರಿನಲ್ಲಿ ಯಂತ್ರೋಪಕರಣ ಉತ್ಪಾದನೆಯ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ ಬಾಲು ಹೇಗೋ ಡಾ. ಉಲ್ಲಾಸ ಕಾರಂತರ ಸಲಹೆಯ ಮೇರೆಗೆ ಕಾಡಿಗೆ ಪ್ರವೇಶಿಸಿದರು. ವನ್ಯಮೃಗಗಳ ಚಲನವಲನಗಳ ಅಧ್ಯಯನಕ್ಕೆಂದು ಮರಗಳಿಗೆ ಕ್ಯಾಮೆರಾ ಟ್ರ್ಯಾಪಿಂಗ್ ಸಲಕರಣೆಯನ್ನು ಜೋಡಿಸಲು ಹೋದ ಬಾಲು ಈಗ ಭೂಮಿಗೆ ಬಂದ ಜ್ವರವನ್ನು ಅಳೆಯಲೆಂದು ಮರಗಳ ಇಸಿಜಿ ನೋಡುತ್ತಿದ್ದಾರೆ. ಅವರು ಸಂಗ್ರಹಿಸುತ್ತಿರುವ ಮಾಹಿತಿಗಳು ವಿಜ್ಞಾನಿಗಳ ಜಾಗತಿಕ ವೇದಿಕೆಯಲ್ಲಿ ಬಳಕೆಯಾಗುತ್ತಿವೆ.

(ಬಾಲಚಂದ್ರ ಸಾಯಿಮನೆ ಅವರಿಗೆ ಈ ದಿನ ಶಿರಸಿಯಲ್ಲಿ 'ಪಾವನಾ ಪರಿಸರ ಪ್ರಶಸ್ತಿ'ಯನ್ನು ನೀಡಿ ಸನ್ಮಾನಿಸಲಾಗುತ್ತಿದೆ. ಅವರು ಚೀನಾ ಮತ್ತು ಫಿಲಿಪ್ಪೀನ್ಸ್ ದೇಶಗಳ ಕೃಷಿ ಪರಿಸರ ಕುರಿತು ಬರೆದ 'ಬಿಂಗ್‌ಲಾಂಗ್ ಮತ್ತು ಲಂಬನಾಗ್' ಹೆಸರಿನ ಕೃತಿಯೂ ಬಿಡುಗಡೆ ಆಗುತ್ತಿದೆ).



ಮರಗಳ ಥರ್ಮಲ್ ಸ್ಕ್ಯಾನಿಂಗ್ ಮಾಡುತ್ತಿರುವ ಸಾಯಿಮನೆ

ಭೂಮಿಗೆ ಜ್ವರ ಬಂದಿದೆ

8ನೇ ಪುಟದಿಂದ...

ಆರ್ಟಿಕ್‌ನ ಅಲ್ಪಾವಧಿ ಬೇಸಿಗೆಯಲ್ಲಿ ಹೊರಬರುವ ಕೀಟಗಳು ಮರಿಗಳಿಗೆ ದಕ್ಕುವ ಏಕೈಕ ಆಹಾರ. ಅವುಗಳ ಉದ್ಗಮದಲ್ಲೂ ಏರುಪೇರಾಗಿದೆ. ಹಿಮದ ಆಗಮನಕ್ಕೆ ಮುನ್ನ ಬೆಳೆದ ಮರಿಗಳೊಂದಿಗೆ ತವರಿಗೆ ಹಿಂದಿರುಗಲು ಇರುವ ಅವಧಿ ಅತ್ಯಲ್ಪ. ಏನೋ ಆಗಬಾರದ್ದು ನಡೆದು ಹೋಗಿದೆ ಎಂಬ ಆಲೋಚನೆಗಳಿಗೆ ಅವು ಮೊರೆ ಹೋಗುವಂತಿಲ್ಲ. ಆಧ್ಯಾತ್ಮಿಕ ಚಾವಣಿಯ ನೆರಳಲ್ಲಿ ಆಶ್ರಯ ಪಡೆದು ಸಮಾಧಾನ ಕಂಡುಕೊಳ್ಳುವ ಸಂಸ್ಕೃತಿಯ ಪರಿಚಯವೂ ಅವುಗಳಿಗಿಲ್ಲ. ಸದಾ ಸ್ಫುರಿಸುವ ಹುಟ್ಟರಿವಿನ ನಿರ್ದೇಶನಕ್ಕನುಗುಣವಾಗಿ ವರ್ತಿಸಬೇಕು.

ಬದಲಾದ ಪರಿಸ್ಥಿತಿಯಲ್ಲಿ ಏಡಿಗಳು ಕಣ್ಮರೆಯಾದವೆಂದೇನೂ ಅಲ್ಲ. ಸಂತಾನೋತ್ಪತ್ತಿ ಮಾಡುತ್ತಿಲ್ಲವೆಂದೇನೂ ಅಲ್ಲ. ಮೊಟ್ಟೆ ಇಡಲು ಸೂಕ್ತವಾದ ಸಮಯವನ್ನ ಗ್ರಹಿಸಲು ಸಾಧ್ಯವಾಗುತ್ತಿಲ್ಲ. ಅಂದರೆ ನೀವು ಪ್ರಯಾಣಿಸಲು ಮುಂಗಡವಾಗಿ ಕಾದಿರಿಸಿದ ವಿಮಾನ ವಾರ ಮುಂಚಿತವಾಗಿ ತೆರಳಿದಂತೆ ಅಥವಾ ಎಂದಾದರೊಂದು ದಿನ ಬರಬಹುದೆಂಬ ಕವಡೆ ಶಾಸ್ತ್ರದ ಭವಿಷ್ಯವಾಣಿಯಂತೆ. ತಲೆ ತಲೆಮಾರುಗಳಿಂದ ಅನುಷಂಗಿಕವಾಗಿ ತೇಲಿಬಂದಿರುವ ರೆಡ್ ನಾಟ್ ಹಕ್ಕಿಗಳ ಅಪೂರ್ವ ಜ್ಞಾನ ಇದ್ದಕ್ಕಿದ್ದಂತೆ ನಿರುಪಯುಕ್ತವಾಗುತ್ತಿದೆ. ಲಕ್ಷ ಲಕ್ಷ ವರ್ಷಗಳಿಂದ ಮುಗಿಲಿನಲ್ಲಿ ಚಿತ್ತಾರ ಬಿಡಿಸುತ್ತಿದ್ದ ರೆಡ್ ನಾಟ್‌ಗಳು ಕಣ್ಮರೆಯಾಗಲು ವೇದಿಕೆ ಸಿದ್ಧವಾಗುತ್ತಿದೆ.

ದಿನ ನಿತ್ಯ ಭೂಮಂಡಲದಲ್ಲಿ ಸರಾಸರಿ ನೂರೈವತ್ತು ಜೀವಿಗಳನ್ನು ಕಳೆದುಕೊಳ್ಳುತ್ತಿರುವ ಈ ಕಾಲ ಘಟ್ಟದಲ್ಲಿ ರೆಡ್ ನಾಟ್ ಹಕ್ಕಿಗಳ ದುರಂತದ ಕಥೆ ಸಮಾಜಕ್ಕೆ ಗಂಭೀರವಾದ ವಿಚಾರವಾಗುವುದಿಲ್ಲ. ಈ ಭೂಮಿಯ ಪ್ರಾಮುಖ್ಯತೆಯನ್ನಾಗಲಿ, ರಚನೆಯ ಸಂಕೀರ್ಣತೆಯನ್ನಾಗಲಿ ಅರ್ಥ ಮಾಡಿಕೊಳ್ಳುವ ವ್ಯವಧಾನ, ಕುತೂಹಲ ಈ ಸಮಾಜಕ್ಕಿಲ್ಲವೆನಿಸುತ್ತಿದೆ. ಹಾಗಾಗಿ ಉಳಿದ ಜೀವಿಗಳ ನೋವಿನ ಧ್ವನಿ ಸಮಾಜಕ್ಕೆ ಕೇಳುತ್ತಿಲ್ಲ.

ಸಂಪತ್ತು, ಅಂತಸ್ತು, ಅಧಿಕಾರ ಮೂಲ ಧ್ಯೇಯವಾದಾಗ ಬದುಕಿನ ಅರ್ಥ ಸೀಮಿತವಾಗುತ್ತದೆ. ಸೂಕ್ಷ್ಮಗಳು ಮಾಯವಾಗಿ ಮೌಲ್ಯಗಳು ಅಪರಿಚಿತ ವಸ್ತುಗಳಾಗಿ ಉಳಿದುಬಿಡುತ್ತವೆ.

ನಮ್ಮನ್ನು ನಾವು 'ಹೋಮೊ ಸೇಪಿಯನ್', ಎಂದರೆ ಚಿಂತಿಸುವ ಸಾಮರ್ಥ್ಯವಿರುವ ಬುದ್ಧಿವಂತ ಜೀವಿಯೆಂದು ಕರೆದುಕೊಳ್ಳುತ್ತೇವೆ. ಈ ಹಣೆಪಟ್ಟಿಯಿರುವ ನಾವು ಕೆಲವು ಮೂಲಭೂತ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾದ ಸಮಯ ಈಗ ನಮ್ಮ ಮುಂದಿದೆ.

ನಾವು ಎಲ್ಲಿಂದ ಬಂದೆವು?

ನಾವು ಎಲ್ಲಿಗೆ ಹೋಗುತ್ತೇವೆ?

ಈ ಪ್ರಶ್ನೆಗಳಿಗೆ ದಾರ್ಶನಿಕರು, ಧರ್ಮಗುರುಗಳು, ತತ್ವಜ್ಞಾನಿಗಳು ಚರಿತ್ರೆಯುದ್ದಕ್ಕೂ ವಿವಿಧ ವ್ಯಾಖ್ಯಾನಗಳಿಂದ ಉತ್ತರಿಸಲು ಯತ್ನಿಸಿದ್ದಾರೆ.

ಇದೇ ಪ್ರಶ್ನೆಗಳನ್ನು ಜೀವ ವಿಜ್ಞಾನಿಗಳಿಗೆ ಕೇಳಿದರೆ 'ಮನುಷ್ಯ ಕಾಣದ ನಕ್ಷತ್ರ ಪುಂಜಗಳಿಂದಾಗಲಿ ಅಥವಾ ಮಂಗಳ ಗ್ರಹದಿಂದಾಗಲಿ ಅಥವಾ ಅಗೋಚರ ಶಕ್ತಿಗಳ ಕೃಪೆಯಿಂದಾಗಲಿ ಇಲ್ಲಿ ಅವತರಿಸಿಲ್ಲ. ಈ ಭೂಮಿಯ ಸಕಲ ಜೀವಿಗಳನ್ನು ಹುಟ್ಟುಹಾಕಿದ ಸಂಕೀರ್ಣ ನೈಸರ್ಗಿಕ ಪ್ರಕ್ರಿಯೆಗಳು ಮನುಷ್ಯನನ್ನು ಕೂಡ ರೂಪಿಸಿವೆ. ಭೂಮಿ ಮತ್ತದರ ಇತರೆ ಜೀವಿಗಳನ್ನು ರೂಪಿಸಿದ ಮೂಲ ಧಾತುಗಳಿಂದಲೇ ರೂಪುಗೊಂಡು, ಇಲ್ಲಿಯೇ ವಿಕಸಿಸಿ ಮಾನವ ರೂಪುಗೊಂಡಿದ್ದಾನೆ. ತನ್ನ ಜೀವಿತಾವಧಿಯನ್ನು ಮುಗಿಸಿದ ಬಳಿಕ ಮತ್ತೆ ಭೂಮಿಯ ಮೂಲ ಧಾತುಗಳಲ್ಲಿ ಒಂದಾಗುತ್ತಾನೆ' ಎಂದು ಹೇಳಬಹುದು.

ಹಾಗೆಯೇ, ಬಹಳಷ್ಟು ಮಂದಿ, ಜೀವಪರಿಸರವನ್ನು ಸರಳವಾಗಿ ತಿಳಿಸಲು, ಜಿಂಕೆಗಳು ಬದುಕಲು ಹುಲ್ಲುಗಾವಲುಗಳನ್ನು ಅವಲಂಬಿಸಿದ್ದರೆ, ಜಿಂಕೆಗಳನ್ನು ಹುಲಿಗಳು ಅವಲಂಬಿಸಿವೆ ಎಂದು ಉದಾಹರಣೆ ನೀಡುತ್ತಾರೆ. ಇದು ಜೀವಿ ಜೀವಿಗಳ ನಡುವಿನ ಸಂಕೀರ್ಣ ಸಂಬಂಧಗಳನ್ನು ಮನದಟ್ಟು ಮಾಡುವ ಸರಳ ಪ್ರಯತ್ನ ಮಾತ್ರ.

ಆದರೆ ಇದೇ ತರ್ಕದ ಅಂತರಾಳದಲ್ಲೇಲ್ಲೋ ಒಂದು ಕಡೆ, ಜೀವಪರಿಸರದ ಸಂಬಂಧಗಳಿಂದ ಮನುಷ್ಯ ಹೊರಗುಳಿಯುವ ಆಲೋಚನಾ ಕ್ರಮ ಕೂಡ ಕಂಡು ಬರುತ್ತದೆ. ಉಳಿದೆಲ್ಲ ಜೀವಿಗಳಿಗಿಂತ ತಾನು ಮಿಗಿಲೆಂದು, ಭೂಮಿಯ ಜೀವಪರಿಸರಕ್ಕೂ ತನಗೂ ಯಾವ ಸಂಬಂಧವೂ ಇಲ್ಲವೆಂದು ತರ್ಕಿಸುತ್ತಾ ದೂರ ಸರಿದು ನಿಲ್ಲಲು ಯತ್ನಿಸುತ್ತಾನೆ.

ಬಹುಶಃ ಇದೇ ತರ್ಕ ಅವನ ಸ್ವಭಾವವನ್ನು ರೂಪಿಸಿರಬಹುದು. ಯಾವುದೋ ಅಜ್ಞಾತ ಲೋಕದಿಂದ ಧರೆಗಿಳಿದು ಬಂದಿರಬಹುದೆಂಬಂತೆ ಭೂಮಿಯ ಸಂಪನ್ಮೂಲಗಳನ್ನೆಲ್ಲ ದೋಚಿ, ದರೋಡೆ ಮಾಡಿ ಬೇರೆಲ್ಲಿಗೋ ಕೊಂಡೊಯ್ಯಬಹುದೆಂಬ ಮನಸ್ಥಿತಿ ಆತನಲ್ಲಿ ರೂಪುಗೊಂಡಿರಬಹುದು.

ಈಚೆಗೆ ಭೂಮಿ ತನಗೆ ಜ್ವರ ಬಂದಿರುವ ಲಕ್ಷಣಗಳನ್ನು ತೋರುತ್ತಿದೆ – ನಾನಾ ರೀತಿಯಲ್ಲಿ, ನಾನಾ ವಿಧಾನಗಳಲ್ಲಿ. ರೆಡ್ ನಾಟ್ ಹಕ್ಕಿ ಸಂಕುಲ ವಿನಾಶದೆಡೆಗೆ ಸಾಗುತ್ತಿರುವುದು, ಡೈನೊಸಾರಸ್ ಕಾಲದಿಂದ ನಡೆದು ಬಂದಿದ್ದ ಹಾರ್ಸ್ ಶೂ ಏಡಿಗಳ ಮಹಾಮೇಳ ಅಸ್ತವ್ಯಸ್ತಗೊಂಡಿರುವುದು ಇವೆಲ್ಲವೂ ಭೂಮಿಗೆ ಬಂದಿರುವ ಜ್ವರದ ಕೆಲವು ಲಕ್ಷಣಗಳಷ್ಟೆ.


ಇಲ್ಲಿ ನಾವು ಅರ್ಥಮಾಡಿಕೊಳ್ಳಬೇಕಾದ ವಿಷಯವೊಂದಿದೆ. ಭೂಮಿಯಲ್ಲಿರುವ ಉಳಿದ ಜೀವಿಗಳು ಎದುರಿಸುತ್ತಿರುವ ನೋವು, ಸಂಕಟ, ದುಃಖ ಎಲ್ಲವೂ ನಮ್ಮ ನಾಳೆಯ ಮಕ್ಕಳಿಗೆ ಶಾಪವಾಗಿ ತಟ್ಟಲಿದೆ. ಏಕೆಂದರೆ ನಾವು ಉಸಿರಾಡುತ್ತಿರುವುದು ಇದೇ ಗಾಳಿಯನ್ನು, ನಾವು ಕುಡಿಯುತ್ತಿರುವುದು ಇದೇ ನೀರನ್ನು.

ಅಲ್ಲದೆ ಈ ಭೂಮಿ ಮನುಕುಲದಿಂದ ಏನನ್ನೂ ನಿರೀಕ್ಷಿಸುವುದಿಲ್ಲ. ಸಾವಿರಾರು ಜೀವಿಗಳು ಆಗಮಿಸಿ, ವಿಕಸಿಸಿ, ಕಣ್ಮರೆಯಾದ ಅನೇಕಾನೇಕ ಘಟನಾವಳಿಗಳನ್ನು ಭೂಮಿ ತನ್ನ ಜೀವಿತಾವಧಿಯಲ್ಲಿ ಕಂಡಿದೆ. ಅಂತಹ ಜೀವಿಗಳ ಪಟ್ಟಿಯಲ್ಲಿ ಮನುಷ್ಯ ಮತ್ತೊಂದು ಜೀವಿಮಾತ್ರ.

ಈ ಜೀವ ಮಂಡಲದ ಸಮುಚ್ಚಯಕ್ಕೆ ಮನುಷ್ಯ ಆಗಮಿಸಿದ್ದು ಇತ್ತೀಚೆಗಷ್ಟೆ. ತನ್ನ ಅತಿ ಬುದ್ಧಿವಂತಿಕೆ, ದುರಾಸೆಗಳಿಂದ ಮುಂದೊಂದು ದಿನ ತಾನು ಬದುಕಿ ಬಾಳಿದ ಭೂಮಿಯನ್ನೇ ಹಾಳುಗೆಡವಿ ತನ್ನ ಕಂದಕಗಳನ್ನು ತಾನೆ ತೋಡಿಕೊಂಡು ನಾಶವಾಗಬಹುದು. ಅದು ಭೂಮಿಗೂ ತಿಳಿದಿದೆ. ಆತನಿಗಾಗಿಯಾಗಲಿ, ತನಗಾಗಿಯಾಗಲಿ, ಭೂಮಿ ಎಂದೂ ಮರುಗುವುದಿಲ್ಲ. ದುಃಖಿಸುವುದಿಲ್ಲ.

ಭೂವಿಜ್ಞಾನದ ಸ್ಥಿತ್ಯಂತರಗಳ ಅವಧಿಯಲ್ಲಿ ಭೂಮಿ ಮತ್ತೆ ಚಿಗುರುತ್ತದೆ, ಪುನಃಶ್ಚೇತನಗೊಳ್ಳುತ್ತದೆ. ಹೊಸ ಜೀವ ಪ್ರಭೇಧಗಳೊಂದಿಗೆ ಅದರ ಬದುಕು ಮುಂದುವರಿಯುತ್ತದೆ. ❖

ಪದಬಂಧ 2741



ಮೇಲಿನಿಂದ ಕೆಳಕ್ಕೆ

1. ಅಂತ್ಯ ಕಾಣದ್ದು, ನಮ್ಮ ಚೇತನದಂತೆ 3
2. ಹಲ್ಲು ನಿಲ್ಲಲು ಇದು ಗಟ್ಟಿಯಾಗಿರಬೇಕು 3
3. ತಾಜಾ ಆಗಿ ಸಂಸ್ಕರಿಸಿದ ಉತ್ಪನ್ನ 3
4. ಮೂರು ಕುಲ-ಪಂಗಡಗಳ ಮಿಶ್ರಣ 3
7. ರಾಗವೊಂದು ಕನ್ನಡದಿಂದ ಮೂಡಿದೆ 3
9. ಬಣ್ಣಗಳ ಬೆರಕೆಯಿಂದ ಹೊಸ ಜಾತಿಗಳ ಸೇರ್ಪಡೆ 5
10. ವಿಧಾನ ಸಭೆಯ ಚರ್ಚೆ 3
11. ಇದು ಮೋಸ ವಂಚನೆಯ ಶಬ್ದ 5
13. ಶಂಕರ ಸಿದ್ಧಾಂತದಂತೆ ಎಲ್ಲವನ್ನೂ ತ್ಯಜಿಸುವ ಸ್ಥಿತಿ 3
17. ತೊಟ್ಟಿಲ ತೂಗುತ್ತಾ ತಾಯಿ ಹಾಡುವ ಹಾಡು 3
18. ಬದುಕಿನ ಕುದುರೆ ಗಾಡಿ 3
19. ತಕತಕ ಕುಣಿಸುವ ಆತಂಕದ ಕಾತರ 3
20. ವಾಲ್ಮೀಕಿಗೆ ರಾಮನ ತಿಳಿ ಮನಸ್ಸಿನಂತೆ ಕಂಡ ನದಿ 3
21. ದಿನಗಳನ್ನು ಲೆಕ್ಕಾಚಾರಕ್ಕೆ ತರುವ ತಾರೀಖು 3

ಎಡದಿಂದ ಬಲಕ್ಕೆ

1. ಆಗದು, ಆಗುವುದಕ್ಕೆ ಸಾಧ್ಯವೇ ಇಲ್ಲ 4
3. ದುಡಿಮೆಗೆ ಬೆಳಗು ಇರುಳು 5
5. ಮನಸ್ಸಿಗೆ ಒಪ್ಪಿಗೆಯಾದದ್ದು ಸೂಕ್ತವಾದದ್ದು 4
6. ಶಾಪಕ್ಕೆ ಗುರಿಯಾಗಿ ಮರಳುಗಾಡಾದ ಸ್ಥಳ 4
8. ಹೊಸ ಜೀವನಕ್ಕೆ ಕಾಲಿಟ್ಟ ಗಂಡು ಹೆಣ್ಣು 5
10. ಕನ್ನಡದ 'ಕ'ವರ್ಗ ಬಳಸುವ ಸುಲೋಚನ 4
12. ಹನುಮಂತ ಎತ್ತಿದ ಗಿಡಮೂಲಿಕೆಯ ಪರ್ವತ 4
14. ಪಾಠ ಸೇರಿಸಿ ತೆಗೆಯುವ ವಾದಕ್ಕೆ ಗುರಿಯಾಗಿರುವ ಮಕ್ಕಳ ಕಲಿಕಾ ಗ್ರಂಥ 5
15. ಪರರಿಗಾಗಿ ಅಲ್ಲಿ ಇಲ್ಲಿ ಓಡಾಟ ಒದ್ದಾಟ 4
16. ರಾಜಸಿಕ ಪ್ರವೃತ್ತಿ 4
18. ಮಂದಿಯ ಮಧ್ಯೆ ಮಂದಿಯಿಂದಲೇ ಇದು ವ್ಯಾಪಕ 5
20. ಇದು ಗಟ್ಟಿಯಾಗಿದ್ದರೆ ಮನೆಯೂ ಭದ್ರ ಮನುಷ್ಯನ ವ್ಯಕ್ತಿತ್ವವೂ ಸುರಕ್ಷಿತ 4
22. ಜೀವನ ವಿಕಸನದ ಹೋಲಿಕೆಗೆ ಕವಿಗೆ ಸಿಕ್ಕ ಕಾಡು ಹೂವು 4
23. ಮಂಗಗಳ ಒಡೆಯ 5
24. ಅಂಗೈ ಮುದ್ರೆಗಳಿಂದ ಭವಿಷ್ಯ ಸೂಚಕ ವಿಜ್ಞಾನ 4

ಪದಬಂಧ ಉತ್ತರ -2740

ಮೇಲಿಂದ ಕೆಳಕ್ಕೆ

1. ಮಹಾನರಕ 2.ಬಿರುಸುಗಾಳಿ 3.ಭೀಕರಜನ 4.ಲಕ್ಷ್ಮೀರಮಣ 9.ಸತ್ಯಶೋಧಕ 11.ಚವನ 13.ಗಮಾರ 14.ಜ್ಞಾನವಾಹಿನಿ 15.ಪಿನಾಕಧರ 16.ರಾಮಚರಿತ 17.ಸಕಲಗುಣ


ಎಡದಿಂದ ಬಲಕ್ಕೆ

1. ಮರಿದುಂಬಿ 3.ಭೀಮಬಲ 5.ರುದ್ರಾಭಿಷೇಕ 6.ನಗೆಲೇಸು 7.ರಘುವರ 8.ಗಾನಸಮಾಜ 10.ಕಚಗುಳಿ 12.ನಭೋಗನ 14.ಜ್ಞಾನವ್ಯಾಪಿ 16.ರಾಮರಸ 18.ನಾಟಕಪ್ರೇಮ 19.ವಾಸ್ತವಿಕ 20.ಚಣಕಾಲ 21.ಧವಳಗಿರಿ 22.ನಿರಂತರ 23.ತತ್‌ಕ್ಷಣ

ಕೊರೊನಾ ಕಾಲಘಟ್ಟಕ್ಕೆ ವಿಮರ್ಶಾಗನ್ನಡಿ

ರಘುನಾಥ ಚ.ಹ.

ವಿಮರ್ಶೆ



ಪು: 500 ₹600

ಕರಿಡಬ್ಬಿ
ಲೇ: ರಾಜಾರಾಂ ತಲ್ಲೂರು
ಪ್ರ: ಸಂಕಥನ, ಮಂಡ್ಯ.
ಸಂ: 9019529494

ರಾಜಾರಾಂ ತಲ್ಲೂರು, ವರ್ತಮಾನದ ದಂದುಗಗಳಿಗೆ ಬಿಡುಗಣ್ಣಾಗಿರುವ ಪತ್ರಕರ್ತರ ಸಾಲಿಗೆ ಸೇರಿದವರು. ಕಳೆದ ಐದು ವರ್ಷಗಳಿಂದ ವರ್ಷಕ್ಕೊಂದರಂತೆ ಅವರು ಪ್ರಕಟಿಸಿರುವ ಕೃತಿಗಳು – 'ನುಣ್ಣನ್ನ ಬೆಟ್ಟ' (2017), 'ತಲ್ಲೂರು ಎಲ್ ಎನ್' (2018), 'ಏನಿದು ಪೌರತ್ವ ತಿದ್ದುಪಡಿ ಕಾಯಿದೆ' (2019), 'ದುಪ್ಪಟ್ಟು' (2020) ಹಾಗೂ 'ನಮ್ದೇಕತೆ' (2021) – ಲೇಖಕನ ಆಸಕ್ತಿಗಳನ್ನು ಸೂಚಿಸುವುದರ ಜೊತೆಗೆ ಸಂವೇದನಾಶೀಲ ಬರಹಗಾರನೊಬ್ಬ ತನ್ನ ಕಾಲಕ್ಕೆ ಸ್ಪಂದಿಸಿರುವ ಪ್ರತಿಕ್ರಿಯೆಗಳೂ ಆಗಿವೆ. ಈ ಆಸಕ್ತಿ–ಆಶಯಗಳ ಮುಂದುವರಿಕೆ, 'ಕರಿಡಬ್ಬಿ.'

'ಕರಿಡಬ್ಬಿ' ಕೊರೊನಾ ಕಾಲಘಟ್ಟಕ್ಕೆ ಕನ್ನಡಿ ಹಿಡಿಯುವ ಮಹತ್ವಾಕಾಂಕ್ಷೆಯ ಪ್ರಯತ್ನ. ಈ ಕನ್ನಡಿ ಬಿಂಬಗಳನ್ನಷ್ಟೇ ಕಾಣಿಸುತ್ತಿಲ್ಲ; ಮುಖಗಳ ಹಿಂದಿನ ಮುಖವಾಡಗಳನ್ನು ಕಾಣಿಸುವ ವಿಮರ್ಶಾಗುಣವನ್ನೂ ಹೊಂದಿದೆ. ಈ ವಿಶಿಷ್ಟ ಬರವಣಿಗೆಯನ್ನು ಎರಡು ರೀತಿಯಲ್ಲಿ ನೋಡಬಹುದು. ಸುಮಾರು ಎರಡು ವರ್ಷಗಳ ಕೊರೊನಾ ಅವಧಿಯಲ್ಲಿ ನಡೆದ ವಿದ್ಯಮಾನಗಳ ಪಕ್ಷಿನೋಟದ ಆಯಾಮ ಮೊದಲನೆಯದು. ಎರಡನೆಯದು, ಬಹುಮುಖ್ಯವಾದುದು – ಸಾಂಕ್ರಾಮಿಕ ಕಾಲಘಟ್ಟವನ್ನು ಈ ಸಮಾಜ ಅಥವಾ ವ್ಯವಸ್ಥೆ ಹೇಗೆ ಎದುರಿಸಿತು ಎನ್ನುವುದರ ವಿಶ್ಲೇಷಣೆ. ಒಂದು ಸಮಾಜವಾಗಿ ಕೊರೊನಾ ಕಾಲಘಟ್ಟವನ್ನು ನಿಭಾಯಿಸುವಲ್ಲಿ ನಾವು ವಿಫಲವಾದೆವೆ ಅಥವಾ ಸಫಲವಾದೆವೆ ಎನ್ನುವ ಪ್ರಶ್ನೆಗೆ ಸಹೃದಯರನ್ನು ಮುಖಾಮುಖಿ ಆಗಿಸುವಲ್ಲಿ 'ಕರಿಡಬ್ಬಿ'ಯ ಯಶಸ್ಸಿದೆ.

ವರ್ತಮಾನದ ಸಾಕ್ಷಿಪ್ರಜ್ಞೆಯ ರೂಪದಲ್ಲಿ ಗುರ್ತಿಸಿಕೊಳ್ಳಬೇಕಾದ ಪತ್ರಕರ್ತನ ವಿಶ್ವಾಸಾರ್ಹತೆ ಪದೇಪದೇ ಪ್ರಶ್ನೆಗೊಳಗಾಗುತ್ತಿರುವ ಸನ್ನಿವೇಶ ಇಂದಿನದು. ಸಂವೇದನೆಗಳನ್ನೆಲ್ಲ ಸಾಬೂನು ಹಾಕಿಕೊಂಡು ತೊಳೆದುಕೊಂಡಂತೆ ಕೆಲವು ಪತ್ರಕರ್ತರು ವರ್ತಿಸುತ್ತಿರುವ ಉದಾಹರಣೆಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ, ಮಾಧ್ಯಮಕ್ಷೇತ್ರದಲ್ಲಿ ಇರುವವರಿಗೆ ಗೌರವ ತರುವಂತಹ ಬದ್ಧತೆ, ವೃತ್ತಿಪರತೆ ಹಾಗೂ ಕಸುಬುದಾರಿಕೆಯ ಮಾದರಿಯಂತೆಯೂ 'ಕರಿಡಬ್ಬಿ' ಕೃತಿಯನ್ನು ಗುರ್ತಿಸಬಹುದು.

ಮಾಹಿತಿಗಳಿಂದ ಕಿಕ್ಕಿರಿದಿರುವ ಎಪ್ಪತ್ತೈದು ಅಧ್ಯಾಯಗಳು ಕೃತಿಯ ವ್ಯಾಪ್ತಿಯನ್ನು ಸೂಚಿಸುವಂತಿವೆ. ಪ್ರತೀ ಅಧ್ಯಾಯಕ್ಕೂ ಆಕರಗಳ ಉಲ್ಲೇಖವಿದೆ. 2019ರ ಡಿ. 31ರಿಂದ 2021ರ ಡಿ. 28ರವರೆಗಿನ ಎರಡು ವರ್ಷಗಳಲ್ಲಿ ಕೋವಿಡ್ ಹೆಜ್ಜೆಗುರುತುಗಳನ್ನು ದಾಖಲಿಸುವ 'ಟೈಮ್‌ಲೈನ್' ಇದೆ. ಹೆಚ್ಚುವರಿ ಓದಿಗಾಗಿ ಕೊಂಡಿಗಳನ್ನೂ ನೀಡಲಾಗಿದೆ. ಲೇಖಕರು ಉಲ್ಲೇಖಿಸಿರುವ ನೂರಾರು ಆಕರಗಳಲ್ಲಿ ಕನ್ನಡ ಮಾಧ್ಯಮಗಳ ಒಂದೆರಡು ಕೊಂಡಿಗಳಷ್ಟೇ ಇರುವುದು ಏನನ್ನು ಸೂಚಿಸುತ್ತದೆ ಎನ್ನುವುದನ್ನು ಬಿಡಿಸಿ ಹೇಳಬೇಕಾಗಿಲ್ಲ.

ಭಾರತವನ್ನು ಕೇಂದ್ರವಾಗಿಟ್ಟುಕೊಂಡು ಈ 'ಕೊರೊನಾ ಕಥನ' ರೂಪುಗೊಂಡಿದ್ದರೂ, ವಿಶ್ವದ ವಿವಿಧ ಭಾಗಗಳನ್ನೂ ಸಾಂಕ್ರಾಮಿಕ ಕಾಡಿದ ಬಗೆಯ ಸಂಕ್ಷಿಪ್ತ ನೋಟವೂ ಇದೆ.

ಈ ಕೃತಿ ವೈದ್ಯಕೀಯ ಜಗತ್ತಿನ ಇಣುಕುನೋಟ ಆಗಿರುವಂತೆಯೇ, ಸಾಮಾಜಿಕ ಕಥನ, ಆರ್ಥಿಕ ಕಥನ, ಸಾಂಸ್ಕೃತಿಕ ಕಥನ ಹಾಗೂ ಇವೆಲ್ಲವುಗಳನ್ನೂ ಹೆಣೆದುಕೊಂಡ ರಾಜಕೀಯ ಸಂಕಥನವಾಗಿ ರೂಪುಗೊಂಡಿದೆ. ಮಾಹಿತಿ ಪೋಣಿಸುವುದಷ್ಟೇ ಲೇಖಕರ ಉದ್ದೇಶವಾಗಿಲ್ಲ. ವಸ್ತುನಿಷ್ಠ ಮಾಹಿತಿಗಳ ಮೂಲಕ, ಸಂದರ್ಭವನ್ನು ಸರಿಯಾಗಿ ನಿಭಾಯಿಸಲಾಯಿತೇ ಇಲ್ಲವೇ ಎನ್ನುವ ವಿಶ್ಲೇಷಣೆಯನ್ನೂ ಲೇಖಕರು ಮಾಡಿದ್ದಾರೆ. ಬಿಕ್ಕಟ್ಟಿನ ಸಂದರ್ಭಕ್ಕೆ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗದ ಸ್ಪಂದನ ಹೇಗಿತ್ತು ಎನ್ನುವ ವಿವರಗಳಿವೆ. ಇಲ್ಲಿನ ಮಾಹಿತಿಗಳ ಮೂಲಕ ಓದುಗರು ತಮ್ಮದೇ ಆದ ನಿರ್ಧಾರಗಳಿಗೆ ಬರಲಿಕ್ಕೆ ಸಾಧ್ಯವಿದೆ. ಉದಾಹರಣೆಗೆ, ಕೊರೊನಾ ಅವಧಿಯಲ್ಲಿ ಪ್ರಧಾನಮಂತ್ರಿ ಮಾಡಿದ ಭಾಷಣಗಳ ಮುಖ್ಯಾಂಶಗಳನ್ನು ನೀಡಿರುವ ಅಧ್ಯಾಯ. ಈ ಭಾಷಣಗಳನ್ನು ಒಟ್ಟಿಗೆ ಗಮನಿಸಿದರೆ – ಬಿಕ್ಕಟ್ಟನ್ನು ನಿಭಾಯಿಸಿದ ಪ್ರಧಾನಿಯವರ ಪ್ರಯತ್ನಗಳಲ್ಲಿ ಜವಾಬ್ದಾರಿಯುತ ನಡವಳಿಕೆಯ ಪಾಲೆಷ್ಟು, ಭಾವುಕತೆಯ ಪಾತ್ರವೆಷ್ಟು ಎನ್ನುವುದರ ವಿಶ್ಲೇಷಣೆ ಸುಲಭವಾಗುತ್ತದೆ.

ಟೀಕೆಗಳಿರುವಂತೆಯೇ ಧನಾತ್ಮಕ ಸಂಗತಿಗಳ ಟಿಪ್ಪಣಿಗಳಿಗೂ ಅವಕಾಶವಿರುವುದು 'ಕರಿಡಬ್ಬಿ'ಯ ವಸ್ತುನಿಷ್ಠತೆ ಹೆಚ್ಚಿಸಿದೆ. ಜನಸಾಮಾನ್ಯರಿಗೆ ನ್ಯಾಯಾಂಗದ ಮೂಲಕ ದೊರೆತ ಸ್ಪಂದನ–ಸಮಾಧಾನ, ಸಕಾಲಕ್ಕೆ ಒದಗಿಬಂದ 'ನರೇಗಾ ಯೋಜನೆ'ಯಂಥ ಸಂಗತಿಗಳನ್ನು ಲೇಖಕರು ಚರ್ಚಿಸಿದ್ದಾರೆ. ರೈತರು, ಕಾರ್ಮಿಕರು, ಮಕ್ಕಳು ಸೇರಿದಂತೆ ಸಮಾಜದ ಬೇರೆ ಬೇರೆ ವರ್ಗಗಳ ಮೇಲೆ ಕೋವಿಡ್ ಬೀರಿದ ಪರಿಣಾಮದ ಕುರಿತು ಲೇಖಕರು ಗಮನಸೆಳೆದರೂ, ಮಹಿಳೆಯರ ಕುರಿತ ಸಂಕಷ್ಟಗಳು ಯಾಕೋ ಅಷ್ಟಾಗಿ ಅವರ ಗಮನಸೆಳೆದಂತಿಲ್ಲ.

'ಕರಿಡಬ್ಬಿ'ಯ ಓದು ಕೊರೊನಾಕ್ಕೆ ಸಂಬಂಧಿಸಿದಂತೆ ಓದುಗರ ತಿಳಿವಳಿಕೆಯನ್ನು ವಿಸ್ತರಿಸುತ್ತದೆ, ಈಗಾಗಲೇ ತಿಳಿದಿರುವ ಸಂಗತಿಗಳನ್ನು ಮತ್ತಷ್ಟು ಸ್ಪಷ್ಟಪಡಿಸಿಕೊಳ್ಳಲು ಕೈಪಿಡಿಯಾಗಿ ಒದಗಿ ಬರುತ್ತದೆ ಹಾಗೂ ಡಬ್ಬಿಯಲ್ಲಿನ ಕಪ್ಪು ನಮ್ಮೊಳಗೋ ಹೊರಗೋ ಇರಬಹುದೇ ಎಂದು ಪರಿಶೀಲಿಸಿಕೊಳ್ಳಲು ನಿಕಷವಾಗಿದೆ. ಇಲ್ಲಿನ ಅನೇಕ ಅಧ್ಯಾಯಗಳು ನಿಟ್ಟುಸಿರನ್ನೂ ಗಾಢ ವಿಷಾದವನ್ನೂ ಮೂಡಿಸ ಬಲ್ಲವು. ಕೊರೊನಾ ಕಾಲಘಟ್ಟ ವೈಯಕ್ತಿಕ ಹಾಗೂ ಸಾಮಾಜಿಕ ನೆಲೆಯಲ್ಲಿ ಅನೇಕ ಪಾಠಗಳನ್ನು ನಮಗೆ ಕಲಿಸಿತು. ನಮ್ಮ ಬದುಕಿನ ನಂಬಿಕೆಗಳನ್ನು ಉಜ್ಜಿ ನೋಡಿಕೊಳ್ಳುವಂತೆ ಮಾಡಿತು. ಈಗ, ಕೊರೊನಾದೊಂದಿಗೆ ಜಗತ್ತು ಹೊಂದಾಣಿಕೆಯ ಬಾಳ್ವೆ ನಡೆಸುತ್ತಿರುವಾಗ, ಕಳೆದ ಎರಡು ವರ್ಷಗಳ ಅನುಭವಗಳಲ್ಲಿ ಎಷ್ಟು ನಮ್ಮ ಬದುಕಿನ ಭಾಗವಾಗಿವೆ ಹಾಗೂ ಎಷ್ಟು ಮರೆವಿಗೆ ಸಂದಿವೆ ಎನ್ನುವುದರ ಪರಾಮರ್ಶೆಗೂ 'ಕರಿಡಬ್ಬಿ' ಅವಕಾಶ ಕಲ್ಪಿಸುತ್ತದೆ.


ಕೊರೊನಾ ಕಾಲಘಟ್ಟಕ್ಕೆ ಕನ್ನಡಿ ಹಿಡಿಯುವ ಇಷ್ಟು ಸಮಗ್ರವಾದ ಕೃತಿ ಬೇರೆ ಭಾಷೆಗಳಲ್ಲಿ ಬಂದಿರುವುದು ಅನುಮಾನ. ಶ್ರದ್ಧೆ ಹಾಗೂ ಬದ್ಧತೆಗಳು ಮಿಳಿತಗೊಂಡ ವಿಶಿಷ್ಟ ಬರವಣಿಗಾಗಿ ರಾಜಾರಾಂ ಅವರಿಗೆ ಕನ್ನಡಿಗರ ಅಭಿನಂದನೆಗಳು ಸಲ್ಲಬೇಕು.

ಹೂರಣದಷ್ಟೇ ಪುಸ್ತಕದ ಮೈಮಾಟವೂ ಸೊಗಸಾಗಿದೆ. ಶೀರ್ಷಿಕೆಗೆ ತಕ್ಕಂತೆ ಪುಸ್ತಕದ ಆಕಾರವನ್ನೂ ಇದ್ದಿಲು ಪೂಸಿಕೊಂಡಿರುವ ಕರಿಡಬ್ಬಿಯಂತೆ ರೂಪಿಸಿರುವುದು ಕಲಾತ್ಮಕವಾಗಿದೆ. ಆದರೆ, ಈ ಕಲಾತ್ಮಕತೆ ಓದುಗರಿಗೆ ದುಬಾರಿಯಾಗಿ ಪರಿಣಮಿಸಿದೆ. ಸರಳತೆ ಎನ್ನುವುದು ಕೂಡ ಈ ಕೃತಿಯ ಮಟ್ಟಿಗೆ ಗುಣ–ಆಭರಣವೇ ಆಗಬಹುದಿತ್ತು. ❖

ಇದು 'ತಾಂಡ'ದ ಮಾಹಿತಿ ಕಣಜ

ಗೌರಿ

ಅವಲೋಕನ



ಪು: 428 ₹400

ತಾಂಡ (ಕಾದಂಬರಿ)
ಲೇ: ಶಿರಗಾನಹಳ್ಳಿ ಶಾಂತನಾಯ್ಕ
ಪ್ರ: ಪ್ರತಿ ಪ್ರಕಾಶನ, ಮೈಸೂರು
ಸಂ: 0821 4287558

ಶಿರಗಾನಹಳ್ಳಿ ಶಾಂತನಾಯ್ಕ ಅವರ ಎರಡನೇ ಕಾದಂಬರಿ 'ತಾಂಡ'. ನಾನೂರಕ್ಕೂ ಅಧಿಕ ಪುಟಗಳಲ್ಲಿ ಹರಡಿಕೊಂಡಿರುವ ಈ ಕಾದಂಬರಿಯ ಕಾಳಜಿ – ಕಥನ ಕಟ್ಟುವುದಕ್ಕಿಂತ, ಸಮುದಾಯದ ಕುರಿತು ಲೇಖಕರಿಗೆ ಗೊತ್ತಿರುವ ಮಾಹಿತಿಯನ್ನು ದಾಖಲಿಸುವುದೇ ಆಗಿದೆ. ಲೇಖಕರ ಈ ಆಶಯಕ್ಕೆ ಪೂರಕವಾಗಿಯೇ ಮುನ್ನುಡಿ ಮತ್ತು ಬೆನ್ನುಡಿಗಳನ್ನೂ ಗಮನಿಸಬಹುದು. ಬಂಜಾರ ಸಮುದಾಯದ ಪರಿಚಯವನ್ನು ಮುನ್ನುಡಿಯಲ್ಲಿ ಚೆನ್ನಾಗಿ ಮಾಡಿಕೊಡಲಾಗಿದೆ. ಬೆನ್ನುಡಿಯಲ್ಲಿ ಲೇಖಕರ ಸೂಕ್ಷ್ಮ ತಿಳಿವಳಿಕೆ ಮತ್ತು ಅನನ್ಯತೆಯನ್ನು ಗುರ್ತಿಸಲಾಗಿದೆ.


ಉತ್ತರದಿಂದ ದಕ್ಷಿಣಕ್ಕೆ ವಲಸೆ ಬಂದು, ಇಲ್ಲಿ ಬೇರೆ ಬೇರೆ ಭಾಗಗಳಲ್ಲಿ ನೆಲೆಯೂರಿ ತಮ್ಮತನವನ್ನು ಕಾಪಿಟ್ಟುಕೊಂಡಿದ್ದ ಬಂಜಾರ ಸಮುದಾಯದಲ್ಲಿ ಬದಲಾವಣೆಯ ಗಾಳಿ ಬೀಸಿದಾಗ ಆಗುವ ಸ್ಥಿತ್ಯಂತರಗಳನ್ನು ಈ ಕಾದಂಬರಿ, ಹುಲಿಯೂರ ಎಂಬ ಪಾತ್ರದ ನೆನಪಿನ ಮೂಲಕ ಕಟ್ಟಿಕೊಡುತ್ತದೆ. ಆ ಸಮುದಾಯದ ಸಾಂಸ್ಕೃತಿಕ ಹೆಗ್ಗುರುತುಗಳ ಪ್ರಸ್ತಾವವೂ ಈ ಕಥನದಲ್ಲಿ ದಾಖಲಾಗಿದೆ. ತಾಂಡಾಗಳ ಬದುಕಿನ ಬಿಂಬವೂ ಅದರೊಳಗೆ ಚಿತ್ರಿತವಾಗಿದೆ. ಆದರೆ, ತನ್ನ ಸಮುದಾಯದ ಕುರಿತು 'ಹೇಳುವ'ಲ್ಲಿ ಲೇಖಕರಿಗೆ ಇರುವ ಉತ್ಸಾಹ, ಅದನ್ನು ಕಲಾತ್ಮಕ ಅನುಭವವಾಗಿ ಕಟ್ಟಿಕೊಡುವಲ್ಲಿ ಕಾಣಿಸುವುದಿಲ್ಲ. ಕಳೆದ ಕಾಲವೆಲ್ಲವೂ ಹೊನ್ನು, ಬದಲಾವಣೆಯಿಂದ ಸಿಕ್ಕಿದ್ದೆಲ್ಲವೂ ಪೊಳ್ಳು ಎಂಬ ಕಪ್ಪು ಬಿಳುಪು ಪೂರ್ವಗ್ರಹವೂ ಈ ಕಾದಂಬರಿಯನ್ನು ಕಾಡಿದೆ. ಕಾದಂಬರಿ ಆರಂಭವಾಗುವುದೇ ಅಂಥದ್ದೊಂದು ಹಳಹಳಿಕೆಯ, ಉಪದೇಶದ ಧ್ವನಿಯಿಂದ.

ಸಡಿಲ ಶಿಲ್ಪ ಒಂದೆಡೆಯಾದರೆ, ಎದುರಾಗುವ ಕಾಗುಣಿತ ದೋಷಗಳು ಸಹ ಓದಿನ ವೇಗಕ್ಕೆ ತಡೆಯೊಡ್ಡುತ್ತವೆ. ಮೂರು ಪುಟಗಳ ಮುನ್ನುಡಿಯಲ್ಲಿಯೇ ಅರವತ್ತಕ್ಕೂ ಹೆಚ್ಚು ಕಾಗುಣಿತ ದೋಷಗಳು ನುಸುಳಿವೆ. ಬೆನ್ನುಡಿಯಲ್ಲಿ ಉಲ್ಲೇಖಗೊಂಡಿರುವಂತೆ ಲೇಖಕರು ವಿಶ್ವವಿದ್ಯಾಲಯವೊಂದರಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರು. ಲೇಖಕರೇ ಹೇಳಿಕೊಂಡಿರುವ ಹಾಗೆ, ಒಂದು ಲಮಾಣಿ ತಾಂಡದ ಒಳಸುಳಿಗಳನ್ನು ಬಿಚ್ಚಿಡುವ ಪ್ರಯತ್ನವನ್ನು ಈ ಕಾದಂಬರಿಯಲ್ಲಿ ಮಾಡಿದ್ದಾರೆ. ಇದರ ಮೂಲಕ ಜಾಗತಿಕ ಸತ್ಯವೊಂದನ್ನು ಅನಾವರಣಗೊಳಿಸುವ ಪ್ರಯತ್ನವನ್ನು ಮಾಡಿದ್ದಾಗಿ ಅವರು ಹೇಳಿದ್ದಾರೆ. ಜಾಗತಿಕವಾದ ಸತ್ಯವನ್ನು ಕಾಣಿಸುವುದೇ ಎಲ್ಲ ಒಳ್ಳೆಯ ಸಾಹಿತ್ಯದ ಉದ್ದೇಶವೂ ಆಗಿರುತ್ತದೆ. ಆದರೆ ಅಂಥ ಜಾಗತಿಕ ಸತ್ಯ ಸಾರ್ವತ್ರಿಕ ಅನುಭವವೂ ಆಗಬೇಕಾದರೆ ಕಲೆಯ ಸ್ಪರ್ಶ ಬೇಕೇ ಬೇಕು ಎನ್ನುವುದನ್ನು ಮರೆಯುವಂತಿಲ್ಲ. ❖

ಕಾಮಾಟಿಪುರ, ಧಾರಾವಿ ತೆರೆದಿಡುವ ವಾಸ್ತವ

ಅಭಿಲಾಷ್ ಪಿ.ಎಸ್.

ಒಳನೋಟ



ಪು: 120 ₹120

ಅಣು
ಲೇ: ಕೇಶವರೆಡ್ಡಿ ಹಂದ್ರಾಳ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಸಂ: 080-26617100

'ನನ್ನ ಕಥೆ ಇಲ್ಲಿನ ಬಹುತೇಕ ಎಪ್ಪತ್ತೆಂಬತ್ತು ಪರ್ಸೆಂಟ್ ಹೆಂಗಸರ ಕಥೆಯೇ ಆಗಿದೆ. ಹೊಟ್ಟೆ ಬಟ್ಟೆಗಾಗಿ ಸದಾ ಹೊಡೆದಾಡುವ ಹಸಿವಿನ ಸಾಮ್ರಾಜ್ಯದ ಕಥೆ ಇದಾಗಿದೆ' ಎಂದು ಕಥಾನಾಯಕಿ ಲಕುಮಿಬಾಯಿ ನಕ್ಕಾಗ, 'ಹೌದು, ಅದು ಪ್ರಪಂಚದ ಎಲ್ಲ ಜೀವಿಗಳ ಕಥೆಯೂ ಹೌದು. ಆದರೆ, ಅವುಗಳನ್ನು ದಕ್ಕಿಸಿಕೊಳ್ಳುವ ಮಾರ್ಗಗಳು, ತಂತ್ರಗಳು ತುಂಬಾ ಭಿನ್ನ ಭಿನ್ನವಾಗಿವೆ' ಎಂದು ಕಥೆಗಾರ ಉತ್ತರಿಸುತ್ತಾನೆ. ಕಾದಂಬರಿಯ ಆರಂಭದಲ್ಲೇ ಬರುವ ಈ ಮಾತುಕತೆ 'ಅಣು'ವಿನ ಜೀವಾಳ ಎನ್ನಬಹುದು.

ಲೇಖಕ ಕೇಶವರೆಡ್ಡಿ ಹಂದ್ರಾಳ ಅವರ ಚೊಚ್ಚಲ ಕಾದಂಬರಿ ಇದು. ಉತ್ತರ ಭಾರತವನ್ನು ಸುತ್ತಿದ ಅನುಭವದಲ್ಲಿ ಅವರನ್ನು ಬಹಳವಾಗಿ ಕಾಡಿದ್ದ ಪ್ರದೇಶಗಳೆಂದರೆ ಧಾರಾವಿ ಮತ್ತು ಕಾಮಾಟಿಪುರವಂತೆ. ಹೀಗಾಗಿ ಇವುಗಳನ್ನೇ ಕಥಾಕೇಂದ್ರವನ್ನಾಗಿಸಿ ಕೆಂಬೆಳಕಿನತ್ತ ಹೆಜ್ಜೆ ಹಾಕಿದ್ದಾರೆ.

'ಕಾಮ, ಪ್ರೇಮ, ಜಾತಿ, ಧರ್ಮ, ಹೆಣ್ಣು, ಬಡತನ, ಮಣ್ಣು, ಹಸಿವು ನನ್ನ ಕಥಾನಕದ ಹಂದರಗಳು. ಪ್ರಮುಖವಾಗಿ ಹಸಿವು ಮತ್ತು ಕಾಮ ನನ್ನ ಕಥಾನಕವನ್ನು ದಟ್ಟವಾಗಿ ಆವರಿಸಿಕೊಂಡಿವೆ' ಎಂದು ಸ್ವತಃ ಕೇಶವರೆಡ್ಡಿ ಅವರು ಆರಂಭದಲ್ಲೇ ಹೇಳುತ್ತಾರೆ. ಇದನ್ನು ಇಲ್ಲಿ ಉಲ್ಲೇಖಿಸಲು ಕಾರಣವಿದೆ. 'ಯಾರಲ್ಲಿ ಹಸಿವು ಮತ್ತು ಕಾಮ ಇಂಗಿಹೋಗಿರುತ್ತದೆಯೋ ಅಂಥವರು ಮಾತ್ರ ದರಿದ್ರದಲ್ಲಿ ನರಳುತ್ತಿರುತ್ತಾರೆ' ಎಂದು ಲಕುಮಿಬಾಯಿಯೂ ಉಲ್ಲೇಖಿಸುವ ಮಾತು ಕಥಾಹಂದರಕ್ಕೆ ಕಂಬವಾಗಿ ಒದಗಿಬಂದಿದೆ.

ಏಷ್ಯಾದ ಅತಿದೊಡ್ಡ ಕೊಳೆಗೇರಿ ಎಂದೇ ಖ್ಯಾತವಾದ ಧಾರಾವಿ ಹಾಗೂ ಸೆಕ್ಸ್ ದಂಧೆಯ ಕೇಂದ್ರ ಕಾಮಾಟಿಪುರವನ್ನು ಕೇಂದ್ರವನ್ನಾಗಿಟ್ಟುಕೊಂಡು ಈ ಕಾದಂಬರಿ ತೆರೆದುಕೊಳ್ಳುತ್ತದೆ. ಕ್ಷಯರೋಗದಿಂದ ಗಂಡ ಮೃತಪಟ್ಟಾಗ ದುಡಿಯಲು ಎಲ್ಲ ವಿಧದಲ್ಲೂ ಸೋತು ಇಪ್ಪತ್ತೊಂದನೇ ವಯಸ್ಸಿಗೇ ಕಾಮಾಟಿಪುರ, ರೆಡ್ ಲೈಟ್ ಏರಿಯಾ, ಫ್ಲೆಶ್ ಮಾರ್ಕೆಟ್ ಎಂದೆಲ್ಲ ಖ್ಯಾತಿ ಪಡೆದಿರುವ ನಾಗ್ಪಾಡಿಯ ಸೆರಗಿನೊಳಗೆ ಸೇರುತ್ತಾಳೆ ಲಕುಮಿಬಾಯಿ. ಆಕೆ ಅಣುಅಣುವಿನಲ್ಲಿ ಅನುಭವಿಸಿದ, ಕಂಡ ಕಾಮಾಟಿಪುರ, ಧಾರಾವಿಯ ಲೋಕವೇ ಇಲ್ಲಿ ತೆರೆದುಕೊಂಡಿದೆ. ಪ್ರತೀ ಪುಟದಲ್ಲೂ ಲಕುಮಿಬಾಯಿ ಇದ್ದಾಳೆ. ಕೆಲವೆಡೆ ಪ್ರತ್ಯಕ್ಷವಾಗಿಲ್ಲದೇ ಇದ್ದರೂ ಆಕೆಯ ಛಾಯೆ ಅಲ್ಲಿದೆ.

ಲಕುಮಿಬಾಯಿ ಮತ್ತು ಆಕೆಯ ಸುತ್ತಲಿನ ವಾತಾರಣದೊಂದಿಗೆ ಹಬ್ಬುವ ಕಥೆ ವಿವಿಧ ಜನರ ಸಂಕಷ್ಟಗಳನ್ನೂ ವಿವರಿಸುತ್ತದೆ. ಜೊತೆಗೆ ಬದುಕು ಕಟ್ಟಿಕೊಂಡವರ, ದುರಂತ ಅಂತ್ಯ ಕಂಡವರ ಕಥೆಗಳನ್ನು ಪರಿಚಯಿಸುತ್ತದೆ. ಕೊಚ್ಚೆಯಲ್ಲೂ ಮೈಬಲುಕಿಸುವ ಹುಳುಗಳಂತೆ ಇಲ್ಲಿನ ಜನರೂ ಸಂಭ್ರಮದಿಂದ ಬದುಕುವುದನ್ನು ಅಕ್ಷರ ರೂಪದಲ್ಲಿ ಹಂದ್ರಾಳರು ಕಟ್ಟಿಕೊಟ್ಟಿದ್ದಾರೆ. ದೇಹ ಮಾರಾಟ, ಆ ವ್ಯವಹಾರದ ವಿರಾಟ ದರ್ಶನ ಇಲ್ಲಿದೆ. ಇಲ್ಲಿ ಸರಿ ಯಾವುದು? ತಪ್ಪು ಯಾರದ್ದು? ಎನ್ನುವ ತರ್ಕ ಸಲ್ಲ. 'ಕಾಮ'ಕ್ಕೆ ಯಾವ ನೈತಿಕತೆಯೂ ಇಲ್ಲ ಎನ್ನುವುದನ್ನು ವೇಶ್ಯಾವಾಟಿಕೆಯ ಸ್ವರೂಪ, ಅದರೊಳಗಿನ ಲೋಕವನ್ನು ತೆರದಿಡುತ್ತಾ ವಿವರಿಸಿದೆ ಈ ಕಾದಂಬರಿ.

ಜಾತಿಗಂಟಿಕೊಳ್ಳದ ಪುರಂದರ ಜೋಶಿ, ಕನಸುಗಳಿಗೊಂದು ಅರ್ಥ ತುಂಬಿ ಜೇಬು ತುಂಬಿಸಿದ ವೇದಾಂತರಾವ್, ಸನ್ನಡತೆಯ ಮುಖವಾಡದ ದೇಸಾಯಿ, ಸ್ಮಿತಾ, ಡಾ.ಊರ್ಮಿಳಾ ಥಾಪರ್ ಹೀಗೆ ಪ್ರತಿ ಪುಟಕ್ಕೊಂದು ಹೊಸಹೊಸ ಪಾತ್ರ, ಅವುಗಳ ಕಥೆ ಬಿಚ್ಚಿಡುತ್ತಾ ಸಾಗುವ 'ಅಣು' ಕುತೂಹಲ ಹಿಗ್ಗಿಸುತ್ತಾ ಸಾಗುವುದು ವಿಶೇಷ.

ಎಲ್ಲ ಪಾತ್ರಗಳಿಗೂ ಲಕುಮಿಬಾಯಿಯೇ ಕೇಂದ್ರ. ಆಕೆಯ ಮಾತಿನ ಓಘ ಯಾವ ರೀತಿ ಕುತೂಹಲ ಸೃಷ್ಟಿಸಿ ಕಥಾನಾಯಕನನ್ನು ಹಿಡಿದಿಟ್ಟಿತ್ತೋ, ಲೇಖಕರ ಬರವಣಿಗೆ ಶೈಲಿ, ಭಾಷೆಯೂ ಹಾಗೆಯೇ ಓದುಗನನ್ನು ಹಿಡಿದಿಟ್ಟುಕೊಳ್ಳುತ್ತದೆ. ಇಂಥ ವಿಷಯವನ್ನು ಬರೆಯುವ ಸಂದರ್ಭದಲ್ಲಿ ಲೇಖನಿಗೂ ಇತಿಮಿತಿಯನ್ನು ಇರಿಸಿದ್ದಾರೆ.

ಎಲ್ಲ ಜೀವಿಗಳೂ ಪರಾವಲಂಬಿಗಳು ಎಂಬುವುದನ್ನು ಕಾದಂಬರಿಯಲ್ಲಿ ತೆರೆದಿಡಲಾಗಿದೆ. ಒಂದಿಷ್ಟು ವಾಸ್ತವವನ್ನೂ ಕಾದಂಬರಿಯುದ್ದಕ್ಕೂ ಲೇಖಕರು ಎದುರಿಟ್ಟಿದ್ದಾರೆ. 'ಹಣ'ದ ಮುಂದೆ ಸಂಬಂಧವೂ ಕ್ಷಣಿಕ ಎನ್ನುವುದನ್ನು ಹಲವು ಆಯಾಮಗಳಲ್ಲಿ 'ಅಣು' ತೆರೆದಿಟ್ಟಿದೆ. ❖

ಕರೆಂಟು ಹುಡುಗನ...

8ನೇ ಪುಟದಿಂದ...

ಮಲೆನಾಡಿನ ಹಳ್ಳಿಗರು 50 ವರ್ಷ ಹಿಂದೆ ತಿನ್ನುತ್ತಾ ಇದ್ದ ಕಾಡು ಹಣ್ಣುಗಳು ಯಾವುವು? ಈ ವ್ಯಕ್ತಿಗೆ ಸಣ್ಣ ಕುತೂಹಲ. ಅರಣ್ಯದ ಬಳಸಿ ಬಲ್ಲ ಜ್ಞಾನ ಕೆದಕುವ ಹುಚ್ಚು. 30–35 ಹಣ್ಣುಗಳ ಪಟ್ಟಿ ಸಿದ್ಧಮಾಡಿಕೊಂಡು ನಾಪತ್ತೆಯಾದವುಗಳ ಹುಡುಕಾಟ. ಒಂದು ಕಾಲದಲ್ಲಿ ತಿಂದುಂಡು ಇಂದು ಹೆಸರೇ ಮರೆತು ಹೋದ ಕಾಡಿನ ಬರ್ಕಬಾಳೆ ಮತ್ತೆ ಸಿಕ್ಕಿದ್ದು ಈಗ ಇವರಲ್ಲಿ ಸಸಿ ಬೆಳೆಯುತ್ತಿದೆ. 'ನೀರೊಟ್ಟೆ ಹಣ್ಣು ಈಗಿನವರಿಗೆ ಗೊತ್ತೇ ಇಲ್ಲ, ನವರಾತ್ರಿ ಹಬ್ಬದ ಹೊತ್ತಿಗೆ ಹಣ್ಣು ಆಗ್ತದಂತೆ' ಎನ್ನುತ್ತ ಒಂದಿಲ್ಲೊಂದು ಹೊಸ ಹುಡುಕಾಟ ಇದ್ದದ್ದೇ! ದೊಡ್ಡಗಾತ್ರದ ಕವಳಿ ಹಣ್ಣು ನಿತ್ಯ ಹರಿದ್ವರ್ಣ ಕಾನಿನ ಎಲೆ ಮರೆಯ ಫಲ. ನಮ್ಮ ಮಾಮೂಲಿ ಬೆಟ್ಟದ ಪುಟ್ಟ ಕವಳಿಗಿಂತ ಬಹಳ ದೊಡ್ಡದು. ಹೀಗಾಗಿ ಹೆಸರು ಹೆಗ್ಗವಳಿ, ಕಾನ್ ಕವಳಿ. ಸಸ್ಯ ತಜ್ಞ ಸಿದ್ದಾಪುರ ಕಡಕೇರಿಯ ಎಂ.ಬಿ ನಾಯ್ಕರಿಂದ ಗಿಡದ ಮೂಲ ಪತ್ತೆ ಹಚ್ಚಿ ಈಗ ಸಸಿ ಬೆಳೆಸಿದ ಉತ್ಸಾಹಿ ಇವರು. ಇವರ ಬಳಿ ಹೇತಾರಿ, ಕರಡಿಸೊಪ್ಪು, ಏಕನಾಯಕ, ಕಾಡು ನುಗ್ಗೆ, ಚೌತಿ ಮೆಣಸು, ಅರಿಶಿನಬಳ್ಳಿ, ದೇವದಾರಿ, ಬಿಳಿ ಗುಲುಗುಂಜಿ ಸಸ್ಯ ಸಂಗ್ರಹವಿದೆ.

ತಂದೆ ಮಾಬ್ಲೇಶ್ವರ ಹೆಗಡೆ ಕಾಡಿಗೆ ಕರೆದೊಯ್ದ ಇವರ ಮೊದಲ ಗುರು. ಸೊಪ್ಪು ತರಲು ಹೋದಾಗೆಲ್ಲ ಸಸಿಯ ಪಾಠ ಸಿಕ್ಕಿದ್ದು. ಸಾಲಿನಲ್ಲಿ ಸಸಿ ನೆಟ್ಟು, ಗಿಡಕ್ಕೆ ಮಣ್ಣೇರಿಸಿ ಗಿಡದ ಬುಡದಲ್ಲಿ ಮಳೆ ನೀರು ನಿಂತು ತೇವಾಂಶ ರಕ್ಷಣೆಗೆ ಅರ್ಧ ಚಂದ್ರಾಕೃತಿಯ ಬರಾವು ರೂಪಿಸುವ ಅರಣ್ಯ ಇಲಾಖೆಯ ತಂತ್ರದ ಹೊರತಾದ ದಾರಿ ಹುಡುಕಿದವರು. ಸತ್ತ ಮರಗಳ ಬುಡ ಹಾಗೂ ಮುಳ್ಳು ಕಂಟಿಗಳ ನಡುವೆ 25–30 ವರ್ಷಗಳ ಹಿಂದೆ ವಾಟೆ, ಮುರುಗಲು, ಮಾವು, ಹಲಸು ನೆಡಲು ಕಲಿಸಿದವರು. ಸಸಿ ನೆಟ್ಟು ಸೊಪ್ಪು,



ಬರ್ಕಬಾಳೆ ಬೀಜ

ತೆರಕು, ಒಣ ಕಟ್ಟಿಗೆಗಳನ್ನು ಗಿಡಗಳ ಬುಡಕ್ಕೆ ಹಾಕಿ ಬೆಳೆಸುವ ಸೂತ್ರ ಹೇಳಿದವರು. ಆಡುತ್ತ ನೋಡುತ್ತ ಕಲಿಯುತ್ತ ಬೆಳೆಯುತ್ತ ಗಣಪತಿ ಬಲಿತವರು. ಅವತ್ತು ಡುಮ್ಕಿ ಹೊಡೆದು ಶಾಲೆ ಬಿಟ್ಟವರು ಕಾಡು ಶಾಲೆಗೆ ನಿತ್ಯ ಹಾಜರಿಯ ವಿಧೇಯ ವಿದ್ಯಾರ್ಥಿ! ಸರಿಸುಮಾರು 20 ವರ್ಷಗಳಿಂದ ಮನೆಯ ಸುತ್ತಮುತ್ತ ಖಾಲಿ ಜಾಗ ಕಂಡಲ್ಲೆಲ್ಲ ತಾವೇ ನರ್ಸರಿಯಲ್ಲಿ ಬೆಳೆಸಿದ ಗಿಡ ನೆಡುತ್ತ ಸಂರಕ್ಷಣೆಗೆ ಗಮನ ನೀಡುತ್ತಾ ಜಾಗೃತಿಯ ಪಯಣ, ಪ್ರಸ್ತುತ ಆರೇಳು ಎಕರೆ ಬಯಲು ನೆಲೆಯಾಗಿದ್ದ ಪ್ರದೇಶವನ್ನು ನೈಸರ್ಗಿಕ ಕಾಡಾಗಿ ಮರುಜೀವ ನೀಡಿದ ನಾಟಿ ಚಿಕಿತ್ಸಕರು.


'ಭಾರತಿ ಸಂಪದ', ನೋಂದಣಿಯಲ್ಲದ ಇವರು ಕಟ್ಟಿಕೊಂಡ ಸಂಸ್ಥೆ. ಇದರ ಆಶ್ರಯದಲ್ಲಿ ಪ್ರತೀ ವರ್ಷ ವಿಶ್ವ ಪರಿಸರ ದಿನಾಚರಣೆ ಸಂದರ್ಭಗಳಲ್ಲಿ ಮಕ್ಕಳು, ಕೃಷಿಕರಿಗೆ ಉಪಯುಕ್ತ ಕಾರ್ಯಕ್ರಮ ಮನೆಯಂಗಳದಲ್ಲಿ ಏರ್ಪಾಟು. ಯಾರ ನೆರವು, ಆರ್ಥಿಕ ಸಹಾಯಕ್ಕೆ ಕೈಚಾಚದೇ ಬೆವರಿಳಿಸಿ ದುಡಿದ ಅಷ್ಟಿಷ್ಟು ಹಣವನ್ನು ಹಸಿರು ಕೆಲಸಕ್ಕೆ ವಿನಿಯೋಗಿಸಿ ಸಸಿ ಚಿಗುರಲ್ಲಿ ಖುಷಿಪಡುವ ಮನುಷ್ಯ. ಅಪರೂಪದ ಸಸಿ ಬೆಳೆಸಿ ಆಸಕ್ತರಿಗೆ ಹಂಚುತ್ತ ಗಿಡ ಗೆಳೆತನದ ಆಪ್ತತೆ ಹೆಚ್ಚಿಸಿದವರು. ಸುತ್ತಲಿನ ಅರಣ್ಯ ಇಲಾಖೆಯ ನರ್ಸರಿಗಳಲ್ಲಿ ಕೆಲಸ ನಿರ್ವಹಿಸುವ ಕೆಲಸಗಾರರ ತಜ್ಞತೆ ಗಮನಿಸಿ, ಗುರುತಿಸಿ, ಗೌರವಿಸಿ ಪ್ರೋತ್ಸಾಹಿಸುತ್ತ ಜ್ಞಾನ ಬೆಳಕು ಪಸರಿಸುವ ಪ್ರಯತ್ನ ವಿಶೇಷ. ವರ್ಷಕ್ಕೆ 25–30 ಜಾತಿಯ ಕಾಡು ವೃಕ್ಷಗಳ ಬೀಜ ಸಂಗ್ರಹಿಸಿ ಅರಣ್ಯ ನರ್ಸರಿಗಳಿಗೆ ಹಂಚುವ ಗಣಪತಿ ಹೆಗಡೆಯವರದು ನಿಸರ್ಗ ಕಾಯಕದಲ್ಲಿ ಭಿನ್ನ ದಾರಿ.

ಅನ್ನದ ದಾರಿಯ ಓಟದಲ್ಲಿ ಕಾಡು ಕೈಂಕರ್ಯ ಆಡಿದಷ್ಟು ಸುಲಭವಲ್ಲ. ದಿನವಿಡೀ ವಿದ್ಯುತ್ ಪಂಪ್ ದುರಸ್ತಿ, ವೈರಿಂಗ್ ಕೆಲಸವೆನ್ನುತ್ತ ಅಲ್ಲಿ ಇಲ್ಲಿ ಓಡುತ್ತ ನೂರಾರು ಜನಗಳ ಕೆಲಸದಲ್ಲಿ ತನ್ನನ್ನು ತಾನು ಮರೆಯುವ ಪ್ರಮೇಯ. ಸಸ್ಯ ಹುಚ್ಚಿನ ಕಾರಣಕ್ಕೆ ಎಷ್ಟೋ ಸಾರಿ ಕಾಸು ಕೊಡುವ ಕಾಯಕ ತಪ್ಪಿಸಿ ಇವರು ಕಾಡಲ್ಲಿಯೇ ಕಳೆದು ಹೋಗೋದು ಇದೆ. ನಮ್ಮೊಳಗಿನ ಶ್ರೀಮಾನ್ಯರ ಹಸಿರು ಹುಚ್ಚು ಯಾವತ್ತೂ ವೇದಿಕೆಯ ಮಾತಿನ ಅಬ್ಬರಕ್ಕೆ ನಿಲುಕುವುದಲ್ಲ. ಸಸಿ ಹುಡುಕುತ್ತ, ಗಿಡ ಬೆಳೆಸುತ್ತ ಹಂಚುವ ನಲ್ಮೆಯಲ್ಲಿ ಪರಿಸರ ಪ್ರಭೆ ಬೆಳಗು. ದಶಕಗಳ ಪರಿಶ್ರಮ ಫಲ ನೆಟ್ಟ ಗಿಡಗಳು ಮಾತಾಡಲು ಶುರು ಮಾಡಿವೆ. ನೆರಳಾಗಿ ದಟ್ಟನೆ ಹೆಚ್ಚುತ್ತ ಕಾಡು ಕತ್ತಲಿನಲ್ಲಿ ಖುಷಿಯ ಮೊಳಕೆ ಕಾಣುತ್ತಿದೆ. ಲೋಕದ ಲೆಕ್ಕಕ್ಕೆ ಕಾಣದ ಎಲೆ ಮರೆಯ ಗಣಪತಿ ತನ್ನ ಪಾಡಿಗೆ ತಾನು ಬೆಟ್ಟದ ತಪ್ಪಲಿನಲ್ಲಿ ಕಾಡು ಪ್ರೀತಿಯ ಹಸಿರು ದೀಪ ಹಚ್ಚುತ್ತ ಸಾಗಿದವರು. ಎಲ್ಲಕ್ಕಿಂತ ನೆಲದಲ್ಲಿ ನಿಂತು ಕಾಡು ಕಾಳಜಿ ಮೂಡಿಸುವ ಕಾಲುದಾರಿ ಮುಖ್ಯವಲ್ಲವೇ? ❖

ಸೌಹಾರ್ದದ ಅಕ್ಷರ ತೇರು

ಎ.ಪಿ.ಎಸ್.

ಒಳನೋಟ



ಪು: 204 ₹200

ಸೌಹಾರ್ದ ಕರ್ನಾಟಕ
ಸಂಪಾದಕ:ಚಂದ್ರಕಾತ ವಡ್ಡು
ಪ್ರ: ಅಂಕುರ ಪ್ರಕಾಶನ, ಬೆಂಗಳೂರು
ಸಂ: 9448520414

ಕಲ್ಲಿದ್ದಿಲಿನಂತೆ ಕಿಡಿ ಸೋಕಿದ ಕೂಡಲೇ ಧಗಧಗಿಸುವ ಧರ್ಮದ್ವೇಷವೆಂಬ ಉರಿಗೆ ಸರ್ವಜನಾಂಗದ ಶಾಂತಿಯ ಉದ್ಯಾನ ಮತ್ತೆಮತ್ತೆ ಸುಟ್ಟು ಕರಕಲಾಗುತ್ತಿದೆ. ಕ್ಷುಲ್ಲಕ ಕಾರಣಗಳನ್ನಿಟ್ಟುಕೊಂಡು ಶಾಂತಿಯ ತೋಟದಲ್ಲಿ ಕೋಮು ಸೌಹಾರ್ದ ಕದಡುವ ಸರಣಿ ಘಟನೆಗಳು ಕಳೆದೊಂದು ವರ್ಷದಲ್ಲಿ ಹೆಚ್ಚಾಗಿ ನಡೆದಿವೆ. ಈ ಕಿಡಿಯಲ್ಲಿ ಗಳ ಹಿರಿಯುವವರೂ, ಚಳಿ ಕಾಯಿಸಿಕೊಳ್ಳುವವರೂ ಇದ್ದಾರೆ. ಇಂಥ ಸಂದರ್ಭದಲ್ಲಿ ಸಾಮರಸ್ಯ ಬದುಕಿನ ಅನಾವರಣಕ್ಕೂ ಹಲವರು ಪ್ರಯತ್ನಿಸಿದ್ದಾರೆ. ಸಾಮರಸ್ಯ ಬದುಕಿನ ನಿದರ್ಶನಗಳನ್ನು ಹೊರೆಕಟ್ಟಿ ಮುನ್ನೆಲೆಗೆ ತಂದ ಚಂದ್ರಕಾಂತ ವಡ್ಡು ಅವರದೂ ಅಂತಹ ಪ್ರಯತ್ನಗಳಲ್ಲಿ ಒಂದಾಗಿದೆ.

ಕೃತಿಗೆ 'ಸೌಹಾರ್ದ ಕರ್ನಾಟಕ' ಎಂಬ ಶೀರ್ಷಿಕೆಯನ್ನೇ ಮೊದಲು ಅಂತಿಮಗೊಳಿಸಿ ಸಾಮರಸ್ಯ ಬದುಕಿನ ಲೇಖನಗಳಿಗೆ ಆಹ್ವಾನ ನೀಡಿದ್ದೆ ಎಂದು ವಡ್ಡು ಅವರು ಮುನ್ನುಡಿಯಲ್ಲಿ ಉಲ್ಲೇಖಿಸುತ್ತಾರೆ. ಅವರ ಮಿಂಚಂಚೆ ಪೆಟ್ಟಿಗೆ ತುಂಬಿದ ಮೇಲೆ ಎರಡು ಸಂಪುಟದಲ್ಲಿ ಈ ಹೊತ್ತಿಗೆಯನ್ನು ತರುವ ನಿರ್ಧಾರಕ್ಕೆ ಬರುತ್ತಾರೆ. ಹೀಗೆ ಮೂಡಿಬಂದಿದ್ದು ಈ ಕೃತಿ. ಮೊದಲ ಹೊತ್ತಿಗೆ ಸಿದ್ಧವಾಗುತ್ತಿದ್ದಂತೆ ಮತ್ತೊಂದಿಷ್ಟು ಲೇಖಕರ ಅನುಭವದ ಸರಣಿಯನ್ನು ವಡ್ಡು ಅವರು ಎರಡನೇ ಸಂಪುಟದ ಮೂಲಕ ಓದುಗರ ಎದುರಿಗಿರಿಸಲು ಕಾರ್ಯ ಆರಂಭಿಸಿದ್ದಾರೆ.


ಮೊದಲ ಸಂಪುಟದಲ್ಲಿ 49 ಲೇಖಕರ ಬರಹಗಳ ಗುಚ್ಛವಿದೆ. ಈ ಬರಹಗಳಲ್ಲಿ ಯಾವುದೇ ಉಪದೇಶವಿಲ್ಲ, ವಿಶ್ಲೇಷಣೆ ಇಲ್ಲ. ಇವು ಸಾಮರಸ್ಯದ ಬದುಕನ್ನು ನೆನಪಿಸುವ ಘಟನೆಗಳ ಅನುಭವದ ಗುಚ್ಛ. ಉಸ್ಮಾನ್ ಸಾಬ್‌ನನ್ನು ತಾಯಿಯ ತಮ್ಮನ ರೂಪದಲ್ಲಿ ಕಂಡ ಮಲ್ಲಿಕಾರ್ಜುನಪ್ಪ, ಅನಾಥ ರಮೇಶನ ಧರ್ಮ ಬದಲಾಯಿಸದೆ, ಹೆತ್ತತಾಯಿಯಂತೆಯೇ ಸಲಹಿದ ಮುಸ್ಲಿಂ ತಾಯಿ, ರೈಲಿನ ಇಸ್ಮಾಯಿಲ್–ಮಾಧವರ ಖರ್ಜೂರ–ಚುರುಮುರಿಯ ಪಯಣ, ಯಾವುದೇ 'ವಾರು' ಇಲ್ಲದೆ ಜಾನುವಾರುಗಳ ರಕ್ಷಣೆ ಮಾಡುತ್ತಿದ್ದ ಉಳ್ಳಾಲದ ದರ್ಗಾ ಹಾಗೂ ಕುಂಬಳೆಯ ಗೋಪಾಲಕೃಷ್ಣನ ನೆನಪು ಹೀಗೆ ವೈಯಕ್ತಿಕವಾಗಿ ಅನುಭವಿಸಿದ ಸಾಮರಸ್ಯದ ಅನುಭಾವದ ಸಂಕಲನವಿದು. ಗ್ರಾಮದೇವತೆಗಳ ಆರಾಧನೆ ಸಂದರ್ಭದಲ್ಲಿ ಹಳ್ಳಿಗಳಲ್ಲಿ ಇಂದಿಗೂ ಕಾಣಸಿಗುವ ಕೋಮು ಸೌಹಾರ್ದದ ಅಕ್ಷರರೂಪದ ಚಿತ್ರಣಗಳೂ ಇಲ್ಲಿವೆ.

ರಾಜ್ಯದ ಮೂಲೆಮೂಲೆಯ, ಸರ್ವಜನಾಂಗದ ಜನ, ತೋರಣ ಕಟ್ಟಿ ಎಳೆದ ಸೌಹಾರ್ದದ ತೇರಿನಂತೆ ಈ ಕೃತಿ ಕಂಗೊಳಿಸುತ್ತದೆ. ರಹಮತ್ ತರೀಕೆರೆ, ನಾಗೇಶ ಹೆಗಡೆ, ಓ.ಎಲ್. ನಾಗಭೂಷಣಸ್ವಾಮಿ, ಸಿದ್ದನಗೌಡ ಪಾಟೀಲ ಅವರಂತಹ ಹಿರಿಯರ ಬರಹಗಳೂ ಇಲ್ಲಿವೆ. ಹಿಂದೂ–ಮುಸ್ಲಿಂ ಭಾವೈಕ್ಯದ ತಂತೇ ಎಲ್ಲ ಲೇಖನಗಳ ಜೀವಾಳವಾಗಿದೆ. ಇಲ್ಲಿನ ಕೆಲವು ಪ್ರಸಂಗಗಳ ಉಲ್ಲೇಖ ನೋಡಿದಾಗ ಮತ್ತೆ ಅಂತಹ ದಿನಗಳು ಬರಬಾರದೆ ಎಂದು ಮನಸ್ಸು ಹಾತೊರೆಯುವಂತೆ ಆಗುತ್ತದೆ.

'ಸಾಮಾನ್ಯ ಜನರು ಕೂಡ ಇತ್ತೀಚೆಗೆ ಕೋಮುವಾದಿಗಳ ಹುಸಿ ತರ್ಕಸರಣಿಗೆ ಮನಸೋಲುತ್ತಿರುವುದು ಮಾತ್ರ ಗಂಡಾಂತರದ ಮುನ್ಸೂಚನೆ' ಎಂದು ಮುನ್ನುಡಿಯಲ್ಲಿ ವಡ್ಡು ಅವರು ಉಲ್ಲೇಖಿಸುತ್ತಾರೆ. ನಮಗರಿಯದಂತೆಯೇ ನಮ್ಮ ನಡುವಿದ್ದ ಸಾಮರಸ್ಯದ ಬದುಕು, ಸಂಘರ್ಷದ ಸಣ್ಣ ಕಿಡಿಗೆ ಜ್ವಾಲೆಯಾಗಿ ನಮ್ಮನ್ನೇ ಸುಡುತ್ತಿರುವುದು ಅಣಕಿಸುವಂತಿದೆ. ಇಂಥ ಸಂದರ್ಭದಲ್ಲಿ ಇಲ್ಲಿನ ಅಕ್ಷರಗಳು ಸುಡುವ ಎದೆಗಿಳಿದರೆ ಜ್ವಾಲೆ ತಣ್ಣಗಾಗಬಹುದು ಎನಿಸುವುದು ಸುಳ್ಳಲ್ಲ. ❖

ಮೊದಲ ಓದು

ಕೃಷ್ಣಲೀಲೆಯಲ್ಲಿ ಅಲಂಕಾರದರ್ಶನ



ಪು: 104 ₹100


ಶತಾಲಂಕಾರಕೃಷ್ಣಶತಕ ಮತ್ತು ಶಾರ್ದೂಲವಿಕ್ರೀಡಿತಶತಕ
ಲೇ: ಎಚ್. ವಿ. ನಾಗರಾಜರಾವ್
ಪ್ರ: ಚಾರು ಸಾಂಸ್ಕೃತಿಕ ಪ್ರಕಾಶನ
ಸಂ: 97403 28196

ಅಲಂಕಾರ ಎಂಬುದು ಕಾವ್ಯಲೋಕದ ವಿಶಿಷ್ಟ ಭಾಷೆ. ಅಲಂಕಾರವಿಲ್ಲದೆ ಕಾವ್ಯ ಇರಲು ಸಾಧ್ಯವೇ ಇಲ್ಲ. ಸಂಸ್ಕೃತಸಾಹಿತ್ಯದಲ್ಲಿ ಅಲಂಕಾರಗಳ ಚರ್ಚೆ ತುಂಬ ನಡೆದಿದೆ; ಕಾವ್ಯಮೀಮಾಂಸೆಯನ್ನು ಅಲ್ಲಿ 'ಅಲಂಕಾರಶಾಸ್ತ್ರ' ಎಂದೂ ಕರೆಯುವ ವಾಡಿಕೆಯಿದೆ.

ಅಲಂಕಾರ ಎಂದರೆ ಸೌಂದರ್ಯವನ್ನು ತುಂಬುವ ಪ್ರಕ್ರಿಯೆ. ಕಾವ್ಯದಲ್ಲಿ ಇದನ್ನು ಬಗೆಬಗೆಯಾಗಿ ತುಂಬಬಹುದು. ಹೀಗಾಗಿ ಅಲಂಕಾರಗಳನ್ನು ನೂರಾರು ಹೆಸರುಗಳಲ್ಲಿ ವರ್ಗೀಕರಣ ಮಾಡಬಹುದು. ಸಂಸ್ಕೃತದಲ್ಲಿ 'ಕುವಲಯಾನಂದ'ದಂಥ ಗ್ರಂಥವು ಅಲಂಕಾರಗಳ ಲಕ್ಷಣವನ್ನೂ ಅದರ ಉದಾಹರಣೆಯನ್ನೂ ಒದಗಿಸುತ್ತದೆ. ನಮ್ಮ ಮಧ್ಯೆ ಇರುವ ಸಂಸ್ಕೃತದ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರೆನಿಸಿರುವ ಎಚ್. ವಿ. ನಾಗರಾಜ್ ರಾವ್ ಅವರು ಈಗ ವಿಶಿಷ್ಟ ಕೃತಿಯೊಂದನ್ನು ರಚಿಸಿ ಕಾವ್ಯವ್ಯಾಸಂಗಿಗಳಿಗೆ ಉಪಕಾರ ಮಾಡಿದ್ದಾರೆ. ನೂರು ಅಲಂಕಾರಗಳ ಲಕ್ಷಣವನ್ನು ಅವರು ಪದ್ಯರೂಪದಲ್ಲಿಯೇ ರಚಿಸಿ 'ಶತಾಲಂಕಾರಕೃಷ್ಣಶತಕ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯ ಇನ್ನೊಂದು ವೈಶಿಷ್ಟ್ಯ ಎಂದರೆ ಎಲ್ಲ ಪದ್ಯಗಳೂ ಕೃಷ್ಣನನ್ನೇ ವಸ್ತುವನ್ನಾಗಿಸಿಕೊಂಡಿರುವುದು. ಕೃಷ್ಣನ ಚರಿತ್ರೆ ನಮಗೆ ಸುಲಭವಾಗಿ ದಕ್ಕುವುದರಿಂದ ಅಲಂಕಾರಗಳ ಲಕ್ಷಣಗಳು ಸುಲಭವಾಗಿಯೂ ಅರ್ಥವಾಗುತ್ತವೆ. ಮೂಲ ಸಂಸ್ಕೃತ ಪದ್ಯಗಳ ಜೊತೆಗೆ ಅವುಗಳ ಕನ್ನಡ ಅನುವಾದ ಮತ್ತು ಅಲಂಕಾರಗಳ ಲಕ್ಷಣವಿವರಣೆಯನ್ನೂ ನೀಡಿದ್ದಾರೆ.

ಈ ಅಲಂಕಾರಪದ್ಯಗಳ ಜೊತೆಗೆ ಪುಸ್ತಕದಲ್ಲಿ 'ಶಾರ್ದೂಲವಿಕ್ರೀಡಿತಶತಕ' ಎಂಬ ಪದ್ಯಗುಚ್ಛವನ್ನೂ ಸೇರಿಸಿದ್ದಾರೆ. ಶಾರ್ದೂಲವಿಕ್ರೀಡಿತವೃತ್ತದಲ್ಲಿ ನೂರು ಪದ್ಯಗಳನ್ನು ಸುಭಾಷಿತಗಳಾಗಿ ಸಂಸ್ಕೃತದಲ್ಲಿ ರಚಿಸಿ, ಅವುಗಳ ಕನ್ನಡ ಅನುವಾದವನ್ನೂ ಒದಗಿಸಿದ್ದಾರೆ. ಪ್ರಾಚೀನ ಪರಂಪರೆಯಲ್ಲಿರುವಂತೆ ಈ ಸುಭಾಷಿತಗಳನ್ನು ಸಮಸ್ಕಾರಪದ್ಧತಿ, ವಿದ್ವತ್ಪದ್ಧತಿ, ಕವಿಪದ್ಧತಿ, ಧನಪದ್ಧತಿ, ಭಕ್ತಿಪದ್ಧತಿ, ಶೃಂಗಾಪದ್ಧತಿ, ಗುರುಶಿಷ್ಯಪದ್ಧತಿ, ವೈರಾಗ್ಯಪದ್ಧತಿ ಎಂದು ಹಲವು ಪದ್ಧತಿಗಳಲ್ಲಿ ವಿಂಗಡಿಸಲಾಗಿದೆ. ನಾಗರಾಜರಾಯರ ಈ ಕೃತಿಗೆ ಟಿ. ವಿ. ವೆಂಕಟಾಚಲಶಾಸ್ತ್ರಿ ಅವರ ಮುನ್ನುಡಿಯಿದೆ. ❖

ವೈದ್ಯರ ಕುಟುಂಬದ ಅನನ್ಯ ಕಥನ



ಪು: 144 ₹180

ಡಾಕ್ಟರ್ ಹೆಂಡತಿ
ಲೇ: ಸರೋಜಿನಿ ಪಡಸಲಗಿ
ಪ್ರ: ಬಹುರೂಪಿ ಪ್ರಕಾಶನ, ಬೆಂಗಳೂರು
ಸಂ: 70191 82729

ವೈದ್ಯರದ್ದು ಚಿಕಿತ್ಸೆ ನೀಡುವ ಕಾಯಕವಲ್ಲವೇ? ವೈದ್ಯರ ಬದುಕಿನಲ್ಲಿ ಒಂದಾಗಿ ಆ ಬದುಕನ್ನು ಚಿಕಿತ್ಸಕ ದೃಷ್ಟಿಯಿಂದ ನೋಡಿದ್ದಾರೆ ಲೇಖಕಿ. 1980ರ ದಶಕದ ವೈದ್ಯರ ಸೇವಾ ಚಿತ್ರಣ, ಗ್ರಾಮ ಭಾರತದ ಆರೋಗ್ಯ ಕ್ಷೇತ್ರದ ಕಥೆಗಳು ಇಲ್ಲಿವೆ. ಸರ್ಕಾರಿ ವೈದ್ಯರ ಕುಟುಂಬವೂ ಆ ವೃತ್ತಿಯ ಭಾಗವಾಗಿಯೇ ಆಯಾ ಹಳ್ಳಿಯಲ್ಲಿ ಬೆರೆತುಬಿಡುತ್ತಿತ್ತು. ಬಂಧುತ್ವ ಬೆಳೆಯುತ್ತಿತ್ತು.

ಬಂಕಾಪುರಕ್ಕೆ ಹೋಗಬೇಕಾದ ಸಂದರ್ಭ ಹಾಗೂ ಹೋದ ಮೊದಲ ದಿನವೇ ಅನುಭವಿಸಿದ ಕಸಿವಿಸಿಯನ್ನು ಸೊಗಸಾಗಿ ನಿರೂಪಿಸಲಾಗಿದೆ. ವೈದ್ಯನಾದವನು ಬೆಳ್ಳಂಬೆಳಗ್ಗೆಯೇ ಹೆಣ ನೋಡಬೇಕಾದ, ಪೋಸ್ಟ್ ಮಾರ್ಟಂ ಮಾಡಬೇಕಾದ ಸನ್ನಿವೇಶ ಎದುರಿಸುವುದು, ಆ ಹೊತ್ತಿನಲ್ಲಿ ಅವರ ಕುಟುಂಬದವರ ತಳಮಳ ಅನುಭವಿಸುವುದು – ಈ ವಿವರಗಳು ಮೊದಲ ಕಥೆಯಲ್ಲೇ ರಸವತ್ತಾಗಿ ಮೂಡಿಬಂದಿವೆ. ಹಲವು ಅನುಭವದ ಮೂಟೆಗಳೇ ಇಲ್ಲಿವೆ. ವೈದ್ಯರ ಕುಟುಂಬದ ಕಾಳಜಿಯ ಮುಖ ತಿಳಿಯಬೇಕೆನ್ನುವವರು ಓದಬಹುದಾದ ಕೃತಿ. ❖

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳನ್ನು ಬಳಸಿ ಪಕ್ಕದಲ್ಲಿ ಕೊಟ್ಟಿರುವ ಸುಳಿವು ಆಧರಿಸಿ ಹೊಸ ಪದ ರಚಿಸಿ

	ಗ	ಣ	ಸುಳಿವು
1			ಆಶ್ರಯ ತಾಣ
2			ತಲೆ
3			ಎಣ್ಣೆ ತೆಗೆಯುವ ಯಂತ್ರ
4			ಬೆರಳಿನಿಂದ ಅಳೆಯುವ ಒಂದು ಅಳತೆ
5			ಒಂದು ಪಕ್ಷಿ



ಅದಲು ಬದಲು ಕಂಚಿ ಕದಲು

ದರ ಸಮರ = ____________


ಮನವಿ ಮಾಡಿ = ____________

ಲಾಳ ಹೇಗಿದೆ = ____________

ಮಾಮನನಡು = ____________

ಡಣ್ಣ ಚಕ್ಕುಕೇಶ್ರಷ್ಣ ಕಥೆಯ ಗರ್ದಿ ಗಮ್ಮತ್ತು

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಇದು ಗರ್ದಿ ಗಮ್ಮತ್ತು ಅಥವಾ ಬಾಂಬೆ ತಾರೀಪು ಎಂಬ ಚಿತ್ರ ಪ್ರದರ್ಶನದ ಪೆಟ್ಟಿಗೆ. ಈ ಆಟ ತೋರಿಸುವ ಆ ಅಜ್ಜ ಪೆಟ್ಟಿಗೆ ಮೇಲಿನ ಎರಡು ಕೀಲಿಗಳನ್ನು ಅತ್ತಿಂದಿತ್ತ ಇತ್ತಿಂದತ್ತ ತಿರುಗಿಸುತ್ತಿದ್ದ. ಭೂತಗನ್ನಡಿ ಅಳವಡಿಸಲಾದ ಕಿಂಡಿಯಲ್ಲಿ ಮಕ್ಕಳು ಚಿತ್ರಗಳನ್ನು ನೋಡುತ್ತಿದ್ದರು



ಗರ್ದಿ ಗಮ್ಮತ್ತು ತೋರಿಸುವ ಹೆಚ್ಚಿನ ಮಂದಿ ಬಯಲುಸೀಮೆ ಕಡೆಯವರು. ಹಾವೇರಿ, ಬಳ್ಳಾರಿ, ಗದಗ, ಧಾರವಾಡ ಇನ್ನೂ ಕೆಲ ಜಿಲ್ಲೆಗಳಲ್ಲಿ ಈ ಕಲಾವಿದರು ಜೀವನೋಪಾಯಕ್ಕಾಗಿ ಅಲೆಮಾರಿಗಳಾಗಿದ್ದರು. ಹಳ್ಳಿ, ಕೇರಿ ಸುತ್ತಿ ಚಿತ್ರ ತೋರಿಸುತ್ತಿದ್ದರು




ಊರೊಳಗೊಮ್ಮೆ ಸುತ್ತಿ ನಡು ಊರಲ್ಲಿ ನಿಂತರೆ ಸಾಕು, ಈ ಆಟ ಶುರುವಾಗುತ್ತಿತ್ತು. ಹಾಡಿನಲ್ಲೇ ಮೋಡಿ ಮಾಡುವ ಅಜ್ಜ ಒಂದೊಂದು ಪಟ್ಟಣದ ವಿಶೇಷವನ್ನೂ ಹೇಳುತ್ತಿದ್ದ. ಇದು ಮಕ್ಕಳಿಗೆ ತಿಳಿವಳಿಕೆಗೂ ಸಹಕಾರಿಯಾಗಿತ್ತು



ಹಾ...ಹಾರೇ.........ಬಾಂಬೆ ನೋಡು, ಬಾಂಬೆದಾಗ ಏನೇನ್ನೋಡು, ಮುಂದ ಅಮಿತಾಬಚ್ಚನ್ ನಿಂತಾನ್ನೋಡು. ಇಂದಿರಾಗಾಂಧಿ ಬಂದ್ರು ನೋಡು...ಹೀಗೆ ಪೆಟ್ಟಿಗೆಯೊಳಗಿನ ಚಿತ್ರಗಳಿಗೆ ಅಜ್ಜ ಆಕರ್ಷಕ ವಿವರಣೆ ಕೊಡುತ್ತಿದ್ದ



ಹಳ್ಳಿಗರು ದುಡ್ಡು ಕೊಡುವುದಕ್ಕಿಂತ ತಾವು ಬೆಳೆದ ಮೆಣಸಿನಕಾಯಿ, ಜೋಳ, ಗೋಧಿ, ಕಾಳುಗಳನ್ನೇ ಕೊಡುವುದರಿಂದ ಅಜ್ಜನ ಜೋಳಿಗೆಯೂ ತುಂಬುತ್ತಿತ್ತು. ಒಂದು ತರಹದ ಸಾಮರಸ್ಯದ ಬದುಕು ಇದಾಗಿತ್ತು



ನಾಗರ ಪಂಚಮಿಯಾದರೆ ಉಂಡೆ, ಚೌತಿಗೆ ಕರಿಗಡುಬು, ಹೀಗೆ ಹಬ್ಬಗಳ ಸಂದರ್ಭನುಸಾರ ಮನೆಯಲ್ಲೇ ಮಾಡಿದವುಗಳನ್ನ ಅಜ್ಜ ಮಕ್ಕಳು ಅಥವಾ ಅವರ ಮನೆಯವರಿಂದ ಪಡೆಯುತ್ತಿದ್ದ. ಹೀಗೆ ಖುಷಿಯಾಗಿ ಬದುಕು ಸಾಗಿತ್ತು.

ಗಣಿತದಲ್ಲಿ ಗರ್ದಿ ಗಮ್ಮತ್ತು

ಆಹಾ! ಎಂಥ 'ಈಜಿ'

ಮಕ್ಕಳೇ ಕೆಲವು ಸಣ್ಣ ಗುಣಾಕಾರದ ಲೆಕ್ಕಗಳನ್ನು ಬರಿ ಬಾಯಿಯಿಂದಲೇ ಹೇಳಿಬಿಡಬಹುದು. ನಿಮಗೆ ಗೊತ್ತೇ? ಎರಡು ಸಂಖ್ಯೆಗಳಲ್ಲಿ 'ಬಿಡಿ' ಕಾಳುಗಳ ಮೊತ್ತ ಹತ್ತು ಆಗಿ ದಶಕಗಳು ಒಂದೇ ಆಗಿದ್ದರೆ ಅಂಥ ಸಂಖ್ಯೆಗಳ ಗುಣಾಕಾರ ಬಾಯಿಯಿಂದ ಹೇಳಬಹುದು.

ಉದಾ 1

```
  6 2      (2 + 8 = 10 ತಾನೇ?)
X 6 8
 42/16 = 4216
```

ಇಲ್ಲಿ 2X8 = 16

ಹಾಗೆ ದಶಸ್ಥಾನದಲ್ಲಿರುವ 6ಕ್ಕೆ 1 ಜಾಸ್ತಿ ಮಾಡಿಕೊಂಡು 7ಕ್ಕೆ ಗುಣಿಸಿದರೆ 4216

ಉದಾ 2

```
  5 9      ಇಲ್ಲಿ 9X1 = 9 ಒಂದೇ ಸ್ಥಾನವಾದರೆ
X 5 1            '0' ಹಚ್ಚಿ ಹೇಳಬೇಕು.
30/09
```

ಈ ಮೇಲಿನ ಎರಡೂ ಉದಾಹರಣೆಗಳನ್ನು ನೋಡಿದಿರಲ್ಲವೇ?

ಮತ್ತೊಮ್ಮೆ ಸರಿಯಾಗಿ ನೋಡಿ. ಹಾಗಾದರೆ ಪಕ್ಕದಲ್ಲಿ ನೀಡಿರುವ ಲೆಕ್ಕಗಳನ್ನು ಮಾಡುವಿರಾ?



ಈಗ ನೀವೇ ಮಾಡಿ ನೋಡಿ ನಿಮ್ಮ ಜಾಣ್ಮೆ ತೋರಿಸಿ

1) 19X11 = ________
2) 36X34 = ________
3) 72X78 = ________
4) 92X98 = ________
5) 63X67 = ________
6) 89X81 = ________
7) 61X69 = ________
8) 23X27 = ________
9) 46X44 = ________
10) 55X55 = ________

ಹೊಂದಿಸು – ಆನಂದಿಸು

ಇಲ್ಲಿ ಕೊಟ್ಟಿರುವ ಸಂಯುಕ್ತ ಪದ ಹೊಂದಿಸಿ

1 ಕಲ್ಲಿನ	A ಗುಂಪಿ
2 ಹೂವಿನ	B ಬಣವೆ
3 ಕುರಿ	C ಗುಂಪು
4 ಮಣ್ಣಿನ	D ಗುಡ್ಡೆ
5 ಹುಲ್ಲಿನ	E ಚೀಲ
6 ಕಟ್ಟಿಗೆ	F ಮಾಲೆ
7 ಜನ	G ರಾಶಿ
8 ಜನರ	H ಹಿಂಡು
9 ಗೊಬ್ಬರ	I ಹೊರೆ
10 ಹಣದ	J ಜಾತ್ರೆ

ತಿಳಿಸಾರು

ಜೀವನ ಸೌಂದರ್ಯ
ಹಗುರಾಗಿಹ ಮೈ
ಕೆಸರಿಲ್ಲದ ಮನ
ಹಂಗಿಲ್ಲದ ಬದುಕು
ಕೇಡೆನಿಸದ ನುಡಿ
ಕೆಡುಕೆನಿಸದ ನಡೆ
ಸಾಕಿದು ಇಹಕು ಪರಕು
ಮೇಲೇನಿದೆ ಇದಕೂ...

– ಪು ತಿ ನ

ಶಬ್ದಗಳೊಡನೆ ಸರಸ

ಗಾದೆಗಳಲ್ಲಿ ಅ ಆ ಇ ಈ...

ಅ - ತ್ತೆಗೊಂದು ಕಾಲ ಸೊಸೆಗೊಂದು ಕಾಲ
ಆ - ಳು ಇದ್ದಾವ ಅರಸು, ಕೂಳು ಇದ್ದವ ಬಿರುಸು
ಇ - ದ್ದದ್ದು ಇದ್ದಂಗೆ ಹೇಳಿದರೆ ಸಿದ್ಧಪ್ಪಗೆ ಸಿಟ್ಟು
ಈ - ಸುವವನಿಗೆ ಮೀಸೆ ಭಾರವೇ?
ಉ - ತ್ತಮನು ಎತ್ತ ಹೋದರೂ ಮರ್ಯಾದೆ
ಊ-ಟಬಲ್ಲವನಿಗೆ ರೋಗವಿಲ್ಲ ಮಾತುಬಲ್ಲವನಿಗೆ ಜಗಳವಿಲ್ಲ
ಋ - ಣತಪ್ಪಿದ ಮೇಲೆ ಅರೆಗಳಿಗೆ ಇರವಿಲ್ಲ
ಎ - ಮ್ಮೆಗೆ ಎರಡು ಕೋಡು, ಹೆಮ್ಮೆಗೆ ಎಂಟು ಕೋಡು
ಏ - ಳಲಾರದ ಅಜ್ಜಿಗೆ ಚೇಳು ಕಚ್ಚಿದಂತೆ
ಐ - ಸಿರಿ ಬಂದಾಗ ಮೈಸಿರಿ ಹೆಚ್ಚುವುದು
ಒ - ಬ್ಬರಿಗಿಂತ ಇಬ್ಬರು ಲೇಸು
ಓ - ತಿಕಾಟಕ್ಕೆ ಬೇಲಿ ಸಾಕ್ಷಿ
ಔ - ಷಧ ಕುಡಿದ ಮೇಲೆ ಅಪಥ್ಯ ಮಾಡಬೇಡ
ಅಂ - ತಿಗೆ ಅಂತು ಕೂಡಿದರೆ ಸಂತೆ ಪೇಟೆ
ಅಃ - ಅನ್ನದವನು ಹೇಗೆ ಸಾಲಿ ಕಲಿತಾನು?



ಕಳೆದ ಸಂಚಿಕೆಯ ಸರಿ ಉತ್ತರಗಳು

ಪದ– ಪರಿಚಯ ಪರೀಕ್ಷೆ

1 ಮನ್ವಂತರ 2 ಮಹಾದ್ವಾರ 3 ಮಹಾಮರ
4 ಮತದಾರ 5 ಮಮಕಾರ 6 ಮಜಕೂರ
7 ಮತ್ಸ್ಯಾಗಾರ 8 ಮಲಬಾರ 9 ಮಧ್ಯಂತರ
10 ಮಹಾಶೂರ 11 ಮನೋಹರ

ಅದಲು ಬದಲು ಕಂಚಿ ಕದಲು

1 ಕತ್ತೆಮರಿ 2 ಸರಿಮಾಡು 3 ಗುರಿಮುಟ್ಟು 4 ನೀರಿನಾಳ

ಜಾಣಪದ ಆಟ

1 ಹೀರು 2 ಹೀರೆ 3 ಹರಿ 4 ಹೋರಿ 5 ಹೊರೆ

ಭಾಗಮಾಡು ಮೋಜು ನೋಡು

715X46 = 32890


ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಅಕ್ಷರ ಎಂ. ಎಸ್, ಮೈಸೂರು



ಪ್ರತೀಕ್ಷಾ ಜೋಯ್ಸ್
ಆನಂದಪುರಂ (ಶಿವಮೊಗ್ಗ)



ಮೋನಿಷಾ ಎಂ.
ಕರೆಹಳ್ಳಿ (ಭದ್ರಾವತಿ)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಇನ್ನೇನು ಶತಕ ಬಾರಿಸುವ ತವಕದಲ್ಲಿರುವ ಈ ಅಜ್ಜ, ಈಗಲೂ ಮಿಶ್ರಾಬ್‌ಗಳನ್ನು ತಯಾರಿಸುತ್ತಾರೆ. ಕಟ್ಟಿಂಗ್ ಪ್ಲೈಯರ್ ಇಲ್ಲದೆಯೇ ತಂತಿಯನ್ನು ತುಂಡರಿಸುತ್ತಾರೆ. ಮಾನವೀಯ ಸಂಬಂಧವನ್ನೂ ಬೆಸೆಯುತ್ತಾರೆ...



ಹಾಜಿ ಅಹ್ಮದ್ ಸೋಅಬಾಸೋ
ಚಿತ್ರ: ಗೋವಿಂದರಾಜ್ ಜವಳಿ

ಸಿತಾರಿನ ತಾರು ಬಿಗಿಗೊಳಿಸುತ್ತ...


ರಶ್ಮಿ ಎಸ್.

'ಮೇರೆ ಆಟ್ ಪುಷ್ತೆ, ಇನ್‌ಕೆ ಪಾಂಚ್ ಪುಷ್ತೆ, ಸಿತಾರ್‌ಕೆ ಸಾಜ್ ಸೆ, ತಾರ್‌ಸೆ ಬಂಧೆ ಹುವೆ ಹೈ (ನನ್ನ ಎಂಟು ತಲೆಮಾರು, ಇವರ ಐದು ತಲೆಮಾರು, ಸಿತಾರಿನ ತಾರುಗಳೊಂದಿಗೆ, ನಾದದೊಂದಿಗೆ ಬೆಸೆದುಕೊಂಡಿವೆ)' 98 ವರ್ಷದ ಮೀರಜ್‌ನ ಹಾಜಿ ಅಹ್ಮದ್ ಸೋಅಬಾಸೋ ಅವರು ಹೀಗೆ ಹೇಳುವಾಗ ಅವರ ಕಂಗಳು ಹೊಳೆಯುತ್ತಿದ್ದವು. ಮೊದಲು ರಹಿಮತ್ ಖಾನ್ ಅವರಿಗೆ, ಕರೀಮ್ ಖಾನ್ ಅವರಿಗೆ, ಬಾಲೆಖಾನ್ ಅವರಿಗೆ, ನಂತರ ಗುನ್ನು (ಹಫೀಸ್ ಖಾನ್), ಈಗ ಅವರ ಮಗನಿಗೂ ಸಿತಾರ್ ಮಾಡಿಕೊಟ್ಟೆ. ಈಗಲೂ ರಟ್ಟೆಗಳಲ್ಲಿ ಶಕ್ತಿ ಇದೆ. ನನ್ನ ಅಂಗೈ ಒಮ್ಮೆ ಮುಟ್ಟಿನೋಡು. ಅದ್ಹೇಗೆ ಕಪ್ಪುಗಟ್ಟಿದೆ. ಬೆರಳುಗಳ ಗಿಣ್ಣಗಳನ್ನು ಮುಟ್ಟಿನೋಡು ಮಗಳೆ... ಅದೆಷ್ಟು ಬಿರುಸಾಗಿದೆ ಅಂತ.

ಮಾತಿನ ಲಹರಿಯಲ್ಲಿದ್ದ ಅಹ್ಮದ್ ಸೋಅಬಾಸೋ ಅವರ ಬೆರಳುಗಳಲ್ಲಿನ ಶ್ರಮದಿಂದಲೇ ರಾಗಗಳು ರೂಪತಾಳುತ್ತವೆ. ಪಂಡಿತ್ ಮಲ್ಲಿಕಾರ್ಜುನ ಮನಸೂರ, ಪಂಡಿತ್ ಬಸವರಾಜ ರಾಜಗುರು, ಗಂಗೂಬಾಯಿ ಹಾನಗಲ್, ಪುಟ್ಟರಾಜ ಗವಾಯಿಗಳು ಹೀಗೆ ಎಲ್ಲರ ಕೈ ಬೆರಳುಗಳೂ ಈ ಅಜ್ಜ ತಯಾರಿಸಿದ ತಾನ್‌ಪುರಾಗಳ ಮೇಲೆ ಆಡಿವೆ. ಇವರ ಮನೆತನದವರು ತಯಾರಿಸಿದ ಕೆಲವು ತಂಬೂರಿಗಳು, ತಾನ್‌ಪುರಾ ಹಾಗೂ ಸಿತಾರ್‌ಗಳು ಶತಮಾನವನ್ನೇ ಕಂಡಿವೆ.

ಧಾರವಾಡದಲ್ಲಿ ಸಿತಾರ್ ನವಾಜ್ (ಸಿತಾರ್ ವತ್ಸಲ) ಉಸ್ತಾದ್ ಬಾಲೆಖಾನ್ ಪ್ರತಿಷ್ಠಾನದಿಂದ ಜೀವಮಾನ ಪ್ರಶಸ್ತಿ ಪಡೆಯಲು ಬಂದ ಅಹ್ಮದ್ ಸೋಅಬಾಸೋ ಅವರು ತಮ್ಮ ಜೀವನದ ಖುಷಿಯ ಕ್ಷಣಗಳನ್ನು ಹಂಚಿಕೊಂಡರು. ಮುಂದಿನದನ್ನು ಅವರ ಮಾತುಗಳಲ್ಲೇ ಕೇಳಿ...

ನಂಗೀಗ 90ರ ಮೇಲೆ ಎಂಟು ವರ್ಷಗಳು. ನೋಡಿ... ಹಲ್ಲು ಗಟ್ಟಿಯಾಗಿವೆ. ಈಗಲೂ ತಂತಿ ಬಿಗಿಯುತ್ತೇನೆ. ಮಿಶ್ರಾಬ್‌ಗಳನ್ನು ತಯಾರಿಸುತ್ತೇನೆ. ಯಾವುದೇ ಕಟಿಂಗ್ ಪ್ಲೇಯರ್ ಇಲ್ಲದೆಯೇ ತಂತಿಯನ್ನು ಕೈಯಿಂದಲೇ ತುಂಡರಿಸುತ್ತೇನೆ. ಹೀಗೆ ತುಂಡರಿಸುವುದರಿಂದ ಅವುಗಳಿಗೊಂದು ಬಿಗಿತ ಬರುತ್ತದೆ. ಎರಡು ಸುತ್ತಿನ, ನಾಲ್ಕು ಸುತ್ತಿನ ಮಿಶ್ರಾಬ್‌ಗಳನ್ನು ತಯಾರಿಸುತ್ತೇನೆ. ಬಾಲೆಖಾನ್ ಸಾಹೀಬರು ನಾಲ್ಕು ಸುತ್ತಿನ ಮಿಶ್ರಾಬ್ ಕೇಳಿ ಮಾಡಿಸಿಕಳ್ಳುತ್ತಿದ್ದರು. ಈಗ ಅವರ ಮನೆತನದವರು ಮಾತ್ರ ಇಂತಹ ಮಿಶ್ರಾಬ್‌ಅನ್ನು ಕೇಳುತ್ತಾರೆ ಅಷ್ಟೆ.



ಅರೆರೆ ನಿಮಗ ನಾ ಹೇಳಲಿಲ್ಲ, ನಾನು ವಿಜಯಪುರ ಮೂಲದವನು. ನಮ್ಮ ಮೊದಲ ತಲೆಮಾರು, ಮೊಯಿಸ್‌ಖಾನ್ ಕುಟುಂಬ ವಿಜಯಪುರದಿಂದ ಸಾಂಗ್ಲಿಗೆ ವಲಸೆ ಹೋಯಿತು. ರಾಜಾಡಳಿತ ಹೋಯಿತು, ಬ್ರಿಟಿಷ್ ಆಡಳಿತ ಹಾಗೂ ಸಂಸ್ಥಾನಗಳ ಆಡಳಿತವನ್ನು ಕಂಡವರು ನಾವು. ಸಾಂಗ್ಲಿ ಸಂಸ್ಥಾನದಲ್ಲಿ ನನ್ನಜ್ಜನಿಗೆ ಖಡ್ಗದ ಮೊನೆ, ಅಂಚು ಚೂಪುಗೊಳಿಸುವ ಕೆಲಸ ನೀಡಲಾಗಿತ್ತು. (ತಲ್ವಾರ್ ಧಾರ್ ಕರನಾ) ಕತ್ತಿಯನ್ನು ಒರೆಗೆ ಹಚ್ಚುವ ಆ ಕೆಲಸದಲ್ಲಿ ನನ್ನಜ್ಜ ತೊಡಗಿಸಿಕೊಂಡಿದ್ದರು. ಒಮ್ಮೆ ಗ್ವಾಲಿಯರ್‌ನ ಖಾನ್ ಸಾಹೀಬ್ ಎನ್ನುವವರು ಸಾಂಗ್ಲಿಯಲ್ಲಿ ಹಾಡಲು ಬಂದಾಗ ಅವರ ತಾನ್‌ಪುರಾದ ತಂತಿ ಕೆಟ್ಟುಹೋಯಿತು. ಕತ್ತರಿಸಿ ಹೋಗಿತ್ತು. ರಿಪೇರಿ ಮಾಡುವವರು ಸುತ್ತಲೂ ಇರಲಿಲ್ಲ. ಸಾಂಗ್ಲಿ, ಪುಣೆಗಳಲ್ಲಿ ಹುಡುಕಿದ ನಂತರ, ಮೀರಜ್‌ಗೆ ಬಂದಾಗ ನಮ್ಮಜ್ಜ ತಂತಿ ಬಿಗಿಗೊಳಿಸಿದರು. ಆದರೆ ಅದರ ರಾಗ ಹೇಗೆ ಒಂದಕ್ಕಿಂತ ಒಂದು ಭಿನ್ನವಾಗಬೇಕು, ಮೀಟಿದಾಗ ಒಂದೇ ಆಗಬೇಕು ಎಂಬುದನ್ನು ಖಾನ್ ಸಾಹೀಬರು ತಿಳಿಸಿಕೊಟ್ಟರು. ಅದು ಸರಿಪಡಿಸಿದಾಗ, ಅವರು ನಿನ್ನ ಬೆರಳುಗಳಲ್ಲಿ ಸರಸ್ವತಿ ದೇವಿ ಇದಾಳೆ. ಕತ್ತಿ ಒರೆಗೆ ಹಚ್ಚುವ ಬದಲು, ಇದೇ ಕೆಲಸ ಮುಂದುವರಿಸು ಎಂದು ಆಶೀರ್ವದಿಸಿದರು. ಅಂದಿನಿಂದ ತಾನ್‌ಪುರಾಗಳನ್ನು ದುರಸ್ತಿ ಮಾಡುವ, ಸಿದ್ಧಪಡಿಸುವ ಕೆಲಸ ನಮ್ಮ ಮನೆತನದ್ದಾಯಿತು.

ನಾನೂ ಅಪ್ಪನಿಂದ ಈ ವಿದ್ಯೆ ಕಲಿತೆ. ಉಸ್ತಾದ್ ರಹಿಮತ್ ಖಾನ್ ಅವರು ಸಿತಾರ್ ತಯಾರು ಮಾಡುವುದನ್ನು ಹೇಳಿಕೊಟ್ಟರು. ಪ್ರತೀ ರಾಗ, ಪ್ರತೀ ಭಾಗ, ಪ್ರತೀ ತಂತಿಯ ಕುರಿತು ಅವರು ತಿಳಿಸಿದ್ದೇ ಪಾಠವಾಯಿತು. ನಮ್ಮಜ್ಜನ ಇಬ್ಬರು ಮಕ್ಕಳು, ಅದನ್ನೇ ಮುಂದುವರಿಸಿದರು. ನನ್ನಪ್ಪನಿಗೆ ನಾವು ಎಂಟು ಜನ ಮಕ್ಕಳು. ಕೆಂಪು ದೇವದಾರು ಮರ ತಂದು, ತಂತಿ ಬಿಗಿಯುವವರೆಗೂ ಎಲ್ಲ ಕೆಲಸಗಳನ್ನು ಮಾಡುವ ಕೌಶಲ ಈಗ ನನ್ನ ಕುಟುಂಬಕ್ಕೆ ಇದೆ. ಉಳಿದವರು ದುರಸ್ತಿ ಮಾಡುವ ಕಾಯಕದಲ್ಲಿಯೇ ತೊಡಗಿದ್ದಾರೆ.

ಈ ವಾದ್ಯಗಳನ್ನು ತಯಾರಿಸುವ ಹಲವಾರು ಮಳಿಗೆಗಳು ನನ್ನ ಕುಟುಂಬಕ್ಕೆ ಸೇರಿವೆ. ಆದರೆ ನಾವು ಯಾರೂ ವ್ಯಾಪಾರ ಮಾಡುವುದಿಲ್ಲ. ಬರುವ ವ್ಯಕ್ತಿಯಲ್ಲಿ ಶ್ರದ್ಧೆ ಇದೆಯೇ ಎಂಬುದನ್ನು ಮಾತ್ರ ಗಮನಿಸುತ್ತೇವೆ. ಸಂಗೀತ ಕಲಿಯುವ ವಿದ್ಯಾರ್ಥಿಗಳು, ವಿದುಷಿಗಳು, ಪಂಡಿತರು, ಉಸ್ತಾದರು, ಬುವಾಗಳಿಗೂ ಮಾಡಿಕೊಡುತ್ತೇವೆ. ಯಾರು ಹೇಗೆ ನುಡಿಸುತ್ತಾರೆಯೋ ಅದನ್ನು ಗಮನಿಸಿಯೇ ತಯಾರಿಸಿಕೊಡುತ್ತೇವೆ.

ಒಮ್ಮೆ ಆಸ್ಟ್ರೇಲಿಯಾದ ಇಬ್ಬರು ವಿದ್ಯಾರ್ಥಿನಿಯರು ಬಂದಿದ್ದರು, ಸಿತಾರ್ ಮಾಡುವುದನ್ನು ಕಲಿಯಲು. ಮೀರಜ್‌ನ ಹೋಟೆಲ್ ಒಂದರಲ್ಲಿ ಇದ್ದರು. ನಮ್ಮೊಂದಿಗೆ ಹಗಲು ರಾತ್ರಿ ಎನ್ನದೆ ಇದ್ದು, ಕಲಿಯುತ್ತಿದ್ದರು. ಒಂದಿನ ಈ ಹುಡುಗಿಯರು ರಾತ್ರಿ ಊಟ ಎಲ್ಲಿ ಮಾಡುತ್ತಾರೆ... ಹತ್ತು ಹನ್ನೊಂದು ಗಂಟೆಯವರೆಗೂ ನಮ್ಮೊಟ್ಟಿಗೆ ಇದ್ದು, ಹೋಟೆಲ್‌ಗೆ ಹೋಗುವುದು ಹೇಗೆ ಎಂದು ಚಿಂತಿಸಿದಾಗ, ಅಂದು ರಾತ್ರಿ ನನ್ನೊಂದಿಗೆ ಊಟಕ್ಕೆ ಉಳಿಸಿಕೊಂಡೆ. ಮರುದಿನದಿಂದ ನಮ್ಮ ಮನೆಯಲ್ಲಿಯೇ ಉಳಿದುಕೊಂಡರು. ನನ್ನ ಮನೆಯ ಮಕ್ಕಳಂತೆಯೇ ಇದ್ದರು. ಫಜೀತಿ ಎನಿಸಿದ್ದು, ನಮ್ಮನೆಯಲ್ಲಿ ಶೌಚಾಲಯ ಇರಲಿಲ್ಲ. ಈ ಮಕ್ಕಳಿಗಾಗಿ, ಒಂದೇ ದಿನದಲ್ಲಿ ಶೌಚಾಲಯ ಕಟ್ಟಿಸಿದೆ.

ಧರ್ಮ, ದೇಶ, ಗಡಿ ಇವೆಲ್ಲ ನಾವು ಮಾಡಿಕೊಂಡಿದ್ದು. ನಮ್ಮ ಮನಸು ಸಾಫ್ ಇದ್ದರೆ ಜಗವೆಲ್ಲ ಬಳಗ ಆಗುವುದು. ಹಂಚಿ ಉಣ್ಣುವುದು, ಕೇಡು ಬಯಸದಿರುವುದು, ಇಷ್ಟೇ ನಮ್ಮ ಧರ್ಮ.

ನನಗೆ ಯಾವ ಚಟಗಳೂ ಇಲ್ಲ. ಆಗಾಗ ಬಿಸಿಬಿಸಿ ಚಹಾ ಗುಟುಕರಿಸ್ತೀನಿ. ಮತ್ತ ಎಲಿಯಡಕಿ ಹಾಕ್ಕೊಂತೀನಿ (ಎಳೀ ಎಲಿ ತೆಗೆದವರೆ, ಮಗುವಿನ ಕೆನ್ನೆ ಸವರುವಂತೆ, ಸುಣ್ಣ ಸವರಿ, ಕಾಚು ಬೆರೆಸಿ, ಅಡಕೆಯನ್ನು ಚಿಪ್ಸಿನಂತೆ ಸಣ್ಣಗೆ ಅಡ್ಡಕತ್ತರಿಯಲ್ಲಿ ಕತ್ತರಿಸಿ, ಎಲೆ ಮಾಡಿಕೊಟ್ಟರು. 'ತಿನ್ನು ಮಗಳೆ... ಬಾಲೆಖಾನ್ ಸಾಹೇಬರಿಗೂ ಬೀಡಾ ಮಾಡಿಕೊಟ್ಟಿರುವೆ' ಅನ್ನುತ್ತ ನನಗೂ ಕೊಟ್ಟು ತಾವೂ ಸವಿದರು. ಸವಿಯುತ್ತಲೇ ಮಾತಿಗಿಳಿದರು).

ಅಜ್ಜ, ಮುತ್ತಜ್ಜನಿಂದ ಬಂದ ಜಮೀನಿನ ತುಣುಕಿದೆ. ಕುಟುಂಬಕ್ಕೆ ಅಗತ್ಯವಿರುವ ಜೋಳ, ಗೋಧಿ ಬೆಳೆಯುತ್ತೇವೆ. ವಾರದಲ್ಲಿ ಒಂದೆರಡು ದಿನ ಮಾಂಸದಡುಗೆ ಫರಮಾಯಿಷಿ ಸವಿಯುತ್ತೇನೆ. ಗಟ್ಟಿಜೀವ ನನ್ನದು. ನನ್ನ ಕಣ್ಮುಂದೆ ನನ್ನ ಮಕ್ಕಳು ದೇವರ ಪಾದ ಸೇರಿದರು. ಮೊಮ್ಮಗುವನ್ನೂ ಕಳೆದುಕೊಂಡೆ. ಸಾವು ಜರ್ಜರಿತಗೊಳಿಸಿತು. ಕಳೆದ ವರ್ಷ 95ರ ಹರೆಯದ ನನ್ನ ಅರ್ಧಾಂಗಿಯೂ ಮೃತಳಾದಳು. ದೇವರು ಆರೋಗ್ಯ ನೀಡಿದ್ದಾನೆ. ಜೀವನದ ಸುಖ ದುಃಖಗಳನ್ನೂ ನೀಡಿದ್ದಾನೆ. ಮೀರಜ್‌ನಲ್ಲಿರುವ ದರ್ಗಾದಲ್ಲಿ ಹೋಗಿ ಕುಳಿತರೆ ಸಾಕಷ್ಟು ಸಮಾಧಾನ ಸಿಗುತ್ತದೆ. ಇನ್ನೂ ಅದೆಷ್ಟು ಜನರಿಗೆ ತಂಬೂರಿ, ಸಿತಾರ್‌ಗಳನ್ನು ಮಾಡಲಿದೆಯೋ? ದೇವರು ಈ ಕೆಲಸಕ್ಕಾಗಿ ನಮ್ಮನ್ನು ಆಯ್ಕೆ ಮಾಡಿದ್ದಾರೆ. ನಾವು ಈ ಕಾಯಕದಲ್ಲಿ ತೊಡಗಿಸಿಕೊಂಡಿದ್ದೇವೆ ಎನ್ನುತ್ತಾ ಮಾತಿಗೆ ವಿರಾಮ ನೀಡಿದರು ಈ ಅಜ್ಜ.

ಸಂಕ್ಷಿಪ್ತ ಸುದ್ದಿ

ಫುಟ್‌ಬಾಲ್: ಹರ್ಷ ಹ್ಯಾಟ್ರಿಕ್

ಬೆಂಗಳೂರು: ಹರ್ಷ ಮೇಳಖೇಡ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಪರಿಕ್ರಮ ಎಫ್‌ಸಿ ತಂಡವು ಬಿಡಿಎಫ್‌ಎ ಎ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಗೆಲುವು ಸಾಧಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ 3–0ಯಿಂದ ಬ್ಲಿಟ್ಜ್ ಎಫ್‌ಸಿ ತಂಡವನ್ನು ಸೋಲಿಸಿತು. ಹರ್ಷ 17, 59 ಮತ್ತು 75ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಸೌತ್ ಇಂಡಿಯಾ ಎಫ್‌ಸಿ 1–0ಯಿಂದ ಮೊಹಮ್ಮಡನ್ ಸ್ಪೋರ್ಟಿಂಗ್ ಎದುರು ಗೆದ್ದಿತು. ಮತ್ತೊಂದು ಇನ್ನೊಂದು ಪಂದ್ಯದಲ್ಲಿ ಎಜಿಒಆರ್‌ಸಿ ಎಫ್‌ಸಿ 1–1ರಿಂದ ಎಚ್‌ಎಎಲ್ ಎಫ್‌ಸಿಯೊಂದಿಗೆ ಡ್ರಾ ಸಾಧಿಸಿತು.

ಬೇರ್ಪಟ್ಟ ಶಕೀರಾ ಪಿಕ್ ಜೋಡಿ



ಮ್ಯಾಡ್ರಿಡ್ (ಎಪಿ): ಪಾಪ್ ಗಾಯಕಿ, ಕೊಲಂಬಿಯದ ಶಕೀರಾ ಮತ್ತು ಸ್ಪೇನ್ ಫುಟ್‌ಬಾಲ್ ತಂಡದ ಆಟಗಾರ ಜೆರಾರ್ಡ್ ಪಿಕ್ ತಮ್ಮ 12 ವರ್ಷಗಳ ಸಂಬಂಧವನ್ನು ಕೊನೆಗೊಳಿಸಿದ್ದಾರೆ.

2010ರ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಪ್ರಚಾರದ ವೇಳೆ ಶಕೀರಾ ಅವರಿಗೆ ಪಿಕ್ ಪರಿಚಯವಾಗಿತ್ತು. ಅಂದಿನಿಂದ ಇಬ್ಬರೂ ಜತೆಗೆ ವಾಸವಿದ್ದರು. ಇವರಿಗೆ ಸಶಾ ಮತ್ತು ಮಿಲಾನ್ ಹೆಸರಿನ ಇಬ್ಬರು ಮಕ್ಕಳಿದ್ದಾರೆ. 2010ರ ವಿಶ್ವಕಪ್ ಟೂರ್ನಿಯ ಪ್ರಚಾರ ಗೀತೆ 'ವಕಾ ವಕಾ', ಶಕೀರಾ ಅವರಿಗೆ ಭಾರೀ ಜನಪ್ರಿಯತೆ ತಂದುಕೊಟ್ಟಿತ್ತು.

'ನಾವು ಪರಸ್ಪರ ದೂರವಾಗುತ್ತಿರುವ ಸುದ್ದಿಯನ್ನು ವಿಷಾದದಿಂದ ಪ್ರಕಟಿಸುತ್ತಿದ್ದೇವೆ' ಎಂದು ಇಬ್ಬರೂ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನಾರ್ವೆ ಚೆಸ್: ಆನಂದ್ ಗೆಲುವಿನ ಓಟಕ್ಕೆ ತಡೆ

ಸ್ಟಾವೆಂಜರ್, ನಾರ್ವೆ (ಪಿಟಿಐ): ವಿಶ್ವನಾಥನ್ ಆನಂದ್ ಅವರು ನಾರ್ವೆ ಚೆಸ್ ಟೂರ್ನಿಯಲ್ಲಿ ಮೊದಲ ಸೋಲು ಅನುಭವಿಸಿದರು. ಶನಿವಾರ ನಡೆದ ನಾಲ್ಕನೇ ಸುತ್ತಿನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್, ಅಮೆರಿಕದ ವೆಸ್ಲಿ ಸೊ ಎದುರು ಪರಾಭವಗೊಂಡರು.

ಸೋತರೂ ಆನಂದ್ ಅಗ್ರಸ್ಥಾನಕ್ಕೆ ಧಕ್ಕೆ ಉಂಟಾಗಿಲ್ಲ. ಒಟ್ಟು 8.5 ಅಂಕಗಳೊಂದಿಗೆ ಅವರು ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಜತೆ ಜಂಟಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಆನಂದ್ ಮತ್ತು ಸೊ ನಡುವಿನ ಕ್ಲಾಸಿಕಲ್ ಪಂದ್ಯ 28 ನಡೆಗಳ ಬಳಿಕ ಡ್ರಾದಲ್ಲಿ ಕೊನೆಗೊಂಡಿತು.

ವಿಜೇತರನ್ನು ನಿರ್ಣಯಿಸಲು ನಡೆದ ಆರ್ಮಗೆಡನ್ (ಸಡನ್ ಡೆತ್) ಗೇಮ್‌ನಲ್ಲಿ ಭಾರತದ ಸ್ಪರ್ಧಿ 46 ನಡೆಗಳಲ್ಲಿ ಜಯ ಸಾಧಿಸಿದರು.

ಫಿಬಾ ಏಷ್ಯಾ ಚಾಂಪಿಯನ್‌ಷಿಪ್‌ಗೆ ಭಾರತ ಯುವ ತಂಡ

ಬೆಂಗಳೂರು: ಭಾರತ 18 ವರ್ಷದೊಳಗಿನವರ ಬ್ಯಾಸ್ಕೆಟ್‌ಬಾಲ್ ತಂಡವು ಫಿಬಾ 18 ವರ್ಷದೊಳಗಿನವರ ಏಷ್ಯಾ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿಸಿದೆ.

ಒಡಿಶಾದ ಕಟಕ್‌ನಲ್ಲಿ ನಡೆಯುತ್ತಿರುವ ಏಷ್ಯಾ ಚಾಂಪಿಯನ್‌ಷಿಪ್ ಎಸ್‌ಎಬಿಎ ಕ್ವಾಲಿಫೈಯರ್ಸ್‌ನಲ್ಲಿ ತಂಡವು 111–45 ಪಾಯಿಂಟ್ಸ್‌ನಿಂದ ಬಾಂಗ್ಲಾದೇಶ ತಂಡದ ವಿರುದ್ಧ ಜಯ ಸಾಧಿಸಿತು. ಫಿಬಾ 18 ವರ್ಷದೊಳಗಿನವರ ಏಷ್ಯಾ ಚಾಂಪಿಯನ್‌ಷಿಪ್ ಇರಾನ್‌ನ ಟೆಹ್ರಾನ್‌ನಲ್ಲಿ ಆಗಸ್ಟ್ 21ರಿಂದ 28ರವರೆಗೆ ನಡೆಯಲಿದೆ.

ಇಗಾ ಸ್ವೆಟೆಕ್ ಚಾಂಪಿಯನ್

ಫ್ರೆಂಚ್ ಓಪನ್ ಟೆನಿಸ್: ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಒಲಿದ ಪ್ರಶಸ್ತಿ



ಫ್ರೆಂಚ್ ಓಪನ್ ಟೂರ್ನಿಯಲ್ಲಿ ಶನಿವಾರ ಮಹಿಳೆಯರ ಸಿಂಗಲ್ಸ್ ವಿಭಾಗದ ರನ್ನರ್ ಅಪ್ ಕೊಕೊ ಗಫ್ ಮತ್ತು ಚಾಂಪಿಯನ್ ಇಗಾ ಸ್ವೆಟೆಕ್ ಟ್ರೋಫಿಯೊಂದಿಗೆ ಸಂಭ್ರಮಿಸಿದರು – ಎಎಫ್‌ಪಿ ಚಿತ್ರ

ಪ್ಯಾರಿಸ್ (ಎಎಫ್‌ಪಿ): ಪಂದ್ಯದ ಎಲ್ಲ ವಿಭಾಗಗಳಲ್ಲೂ ಪಾರಮ್ಯ ಮೆರೆದ ಪೋಲೆಂಡ್‌ನ ಇಗಾ ಸ್ವೆಟೆಕ್ ಅವರು ಫ್ರೆಂಚ್ ಓಪನ್ ಗ್ರ್ಯಾನ್ ಸ್ಲಾಂ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಕಿರೀಟ ಮುಡಿಗೇರಿಸಿಕೊಂಡರು.

ರೋಲ್ಯಾಂಡ್ ಗ್ಯಾರೋಸ್‌ನ ಫಿಲಿಪ್ ಚಾಟ್ರಿಯರ್ ಕೋರ್ಟ್‌ನಲ್ಲಿ ಶನಿವಾರ ನಡೆದ ಫೈನಲ್‌ನಲ್ಲಿ ಸ್ವೆಟೆಕ್ 6–1, 6–3 ರಲ್ಲಿ ಅಮೆರಿಕದ ಕೊಕೊ ಗಫ್ ವಿರುದ್ಧ ನಿರಾಯಾಸ ಗೆಲುವು ಸಾಧಿಸಿದರು. ಈ ಪಂದ್ಯ 68 ನಿಮಿಷಗಳಲ್ಲಿ ಕೊನೆಗೊಂಡಿತು.

ವಿಶ್ವದ ಅಗ್ರ ರ‍್ಯಾಂಕಿಂಗ್‌ನ ಆಟಗಾರ್ತಿಗೆ ಒಲಿದ ಎರಡನೇ ಫ್ರೆಂಚ್ ಓಪನ್ ಪ್ರಶಸ್ತಿ ಇದು. 2020 ರಲ್ಲೂ ಅವರು ಇಲ್ಲಿ ಚಾಂಪಿಯನ್ ಆಗಿದ್ದರು. 23 ಸ್ವಯಂಕೃತ ತಪ್ಪುಗಳು ಮತ್ತು ಮೂರು ಡಬಲ್‌ಫಾಲ್ಟ್ಸ್ ಎಸಗಿದ ಕೊಕೊ, ತಕ್ಕ ಪೈಪೋಟಿ ನೀಡುವಲ್ಲಿ ವಿಫಲರಾದರು. ಸೋಲು ಎದುರಾಗುತ್ತಿದ್ದಂತೆಯೇ ದುಃಖ ತಡೆಯಲಾಗದೆ ಕಣ್ಣೀರು ಹಾಕಿದರು.

ಆರಂಭದಲ್ಲೇ ತಪ್ಪುಗಳನ್ನು ಮಾಡಿದ ಗಫ್, ಮೊದಲ ಗೇಮ್‌ನಲ್ಲೇ ತಮ್ಮ ಸರ್ವ್ ಕಳೆದುಕೊಂಡು ಎದುರಾಳಿಗೆ ಪಾಯಿಂಟ್ ಬಿಟ್ಟುಕೊಟ್ಟರು. ಈ ಆಘಾತದಿಂದ ಚೇತರಿಸಿಕೊಳ್ಳಲು ಅವರಿಗೆ ಆಗಲಿಲ್ಲ. ಬ್ಯಾಕ್‌ಹ್ಯಾಂಡ್ ಹೊಡೆತಗಳ ಮೂಲಕ ಎದುರಾಳಿಯ ಮೇಲೆ ಸವಾರಿ ಮಾಡಿದ ಸ್ವೆಟೆಕ್ ಕೇವಲ ಒಂದು ಗೇಮ್ ಬಿಟ್ಟುಕೊಟ್ಟು ಮೊದಲ ಸೆಟ್ ತಮ್ಮದಾಗಿಸಿಕೊಂಡರು. ಎರಡನೇ ಸೆಟ್‌ನಲ್ಲಿ ಮರುಹೋರಾಟದ ಸೂಚನೆ ನೀಡಿದ ಗಫ್ 2–2 ರಲ್ಲಿ ಸಮಬಲ ಸಾಧಿಸಿದರು. ಆ ಬಳಿಕ ಮತ್ತೆ ಪಂದ್ಯದ ಮೇಲಿನ ಹಿಡಿತ ಕೈಬಿಟ್ಟರು. ಸ್ವೆಟೆಕ್ ತಮಗೆ ಲಭಿಸಿದ ಮೊದಲ ಮ್ಯಾಚ್ ಪಾಯಿಂಟ್‌ಅನ್ನು ಉಳಿಸಿಕೊಂಡು ಚಾಂಪಿಯನ್ ಪಟ್ಟವನ್ನೇರಿದರು. ಗಫ್ ಅವರ ರಿಟರ್ನ್‌ನಲ್ಲಿ ಚೆಂಡು ಅಂಕಣದ ಹೊರಹೋಗುತ್ತಿದ್ದಂತೆಯೇ ಸ್ವೆಟೆಕ್ ಗೆಲುವಿನ ಸಂಭ್ರಮ ಆಚರಿಸಿದರು.

'ಉಕ್ರೇನ್ ಗಟ್ಟಿಯಾಗಿ ನಿಲ್ಲಲಿ'

ಫೈನಲ್ ಪಂದ್ಯದ ಬಳಿಕ ಸ್ವೆಟೆಕ್ 'ಉಕ್ರೇನ್ ಗಟ್ಟಿಯಾಗಿ ನಿಲ್ಲಲಿ' ಎಂದು ಶಾಂತಿಯ ಸಂದೇಶ ಸಾರಿದರು. ಕ್ರೀಡಾಂಗಣದಲ್ಲಿ ನೆರೆದಿದ್ದ ಪ್ರೇಕ್ಷಕರು ಈ ವೇಳೆ ಎದ್ದುನಿಂತು ಗೌರವ ಸಲ್ಲಿಸಿದರು. 'ಈ ಸಂದರ್ಭದಲ್ಲಿ ಉಕ್ರೇನ್‌ನ ಜನರಿಗೆ ಏನನ್ನಾದರೂ ಹೇಳಲು ಬಯಸುತ್ತೇನೆ. ನೀವು ಗಟ್ಟಿಯಾಗಿ ನಿಲ್ಲಿ. ಏಕೆಂದರೆ ಯುದ್ಧ ಇನ್ನೂ ನಿಂತಿಲ್ಲ' ಎಂದು ಹೇಳಿದರು.

ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಇಂದು

ನಡಾಲ್– ರೂಡ್ ಹಣಾಹಣಿ

ಪ್ಯಾರಿಸ್ (ಎಎಫ್‌ಪಿ): ವೃತ್ತಿಜೀವನದ 22ನೇ ಗ್ರ್ಯಾನ್ ಸ್ಲಾಂ ಮೇಲೆ ಕಣ್ಣಿಟ್ಟಿರುವ ಸ್ಪೇನ್‌ನ ರಫೆಲ್ ನಡಾಲ್ ಒಂದೆಡೆಯಾದರೆ, ಮೊದಲ ಗ್ರ್ಯಾನ್ ಸ್ಲಾಂ ಫೈನಲ್‌ನಲ್ಲಿ ಆಡಲಿರುವ ನಾರ್ವೆಯ ಕಾಸ್ಪರ್ ರೂಡ್ ಮತ್ತೊಂದೆಡೆ.

ರೋಲ್ಯಾಂಡ್ ಗ್ಯಾರೋಸ್‌ನ ಆವೆ ಮಣ್ಣಿನ ಅಂಕಣದಲ್ಲಿ ಭಾನುವಾರ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಫೈನಲ್‌ನಲ್ಲಿ ಈ ಇಬ್ಬರು ಆಟಗಾರರು ಎದುರಾಗಲಿದ್ದು, ಜಿದ್ದಾಜಿದ್ದಿನ ಹಣಾಹಣಿ ನಿರೀಕ್ಷಿಸಲಾಗಿದೆ.

ರೂಡ್ ಅವರು ಕೆಲವು ಕಾಲ ನಡಾಲ್ ಟೆನಿಸ್ ಅಕಾಡೆಮಿಯಲ್ಲೂ ತರಬೇತಿ ಪಡೆದಿದ್ದರು. ಇದೀಗ ತಮ್ಮ 'ರೋಲ್ ಮಾಡೆಲ್' ವಿರುದ್ಧ ಫೈನಲ್‌ನಲ್ಲಿ ಆಡಲಿದ್ದಾರೆ. ಗ್ರ್ಯಾನ್ ಸ್ಲಾಂ ಟೂರ್ನಿಯಲ್ಲಿ ನಾಲ್ಕನೇ ಸುತ್ತಿನವರೆಗೆ ತಲುಪಿದ್ದು, ಅವರ ಇದುವರೆಗಿನ ಉತ್ತಮ ಸಾಧನೆ ಎನಿಸಿತ್ತು. ಮೊದಲ ಬಾರಿ ಪ್ರಶಸ್ತಿ ಸುತ್ತು ತಲುಪಿದ್ದಾರೆ.

'ಕ್ಲೇ ಕೋರ್ಟ್ ಕಿಂಗ್' ನಡಾಲ್ ಫ್ರೆಂಚ್ ಓಪನ್‌ನಲ್ಲಿ 111 ಪಂದ್ಯಗಳನ್ನು ಗೆದ್ದಿದ್ದು, ಕೇವಲ ಮೂರು ಪಂದ್ಯಗಳಲ್ಲಿ ಮಾತ್ರ ಸೋಲು ಅನುಭವಿಸಿದ್ದಾರೆ. ಕ್ವಾರ್ಟರ್ ಫೈನಲ್‌ನಲ್ಲಿ ಅವರು ಹಾಲಿ ಚಾಂಪಿಯನ್ ಹಾಗೂ ವಿಶ್ವದ ಅಗ್ರ ಕ್ರಮಾಂಕದ ಆಟಗಾರ ಸರ್ಬಿಯದ ನೊವಾಕ್ ಜೊಕೊವಿಚ್ ಅವರನ್ನು ಮಣಿಸಿದ್ದರು.

ಭಾನುವಾರ ನಡಾಲ್ ಗೆದ್ದರೆ, ಫ್ರೆಂಚ್ ಓಪನ್‌ನಲ್ಲಿ ಪ್ರಶಸ್ತಿ ಜಯಿಸಿದ ಅತ್ಯಂತ ಹಿರಿಯ ಆಟಗಾರ ಎನಿಸಿಕೊಳ್ಳಲಿದ್ದು, ಆಂಡ್ರೆಸ್ ಗಿಮೆನೊ ಹೆಸರಲ್ಲಿರುವ ದಾಖಲೆ ಮುರಿಯಲಿದ್ದಾರೆ. ಸ್ಪೇನ್‌ನವರೇ ಆದ ಗಿಮೆನೊ 1972 ರಲ್ಲಿ ತಮ್ಮ 34ನೇ ವಯಸ್ಸಿನಲ್ಲಿ ಇಲ್ಲಿ ಚಾಂಪಿಯನ್ ಆಗಿದ್ದರು.

ಸಿಲಿಚ್‌ಗೆ ಆಘಾತ: ಶನಿವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ರೂಡ್, ಕ್ರೊವೇಷ್ಯದ ಮರಿನ್ ಸಿಲಿಚ್‌ಗೆ ಆಘಾತ ನೀಡಿದ್ದರು. 14 ಏಸ್‌ಗಳು ಮತ್ತು 41 ವಿನ್ನರ್‌ಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿ 3-6, 6-4, 6-2, 6-2 ರಲ್ಲಿ ಜಯ ಸಾಧಿಸಿದ್ದರು.

ಪಂದ್ಯಕ್ಕೆ ಅಡ್ಡಿಪಡಿಸಿದ ಹೋರಾಟಗಾರ್ತಿ: ರೂಡ್ ಮತ್ತು ಸಿಲಿಚ್ ನಡುವಿನ ಸೆಮಿ ಪಂದ್ಯದ ವೇಳೆ ಪರಿಸರ ಹೋರಾಟಗಾರ್ತಿಯೊಬ್ಬಳು ಏಕಾಏಕಿ ಅಂಕಣಕ್ಕೆ ನುಗ್ಗಿದ್ದರಿಂದ 15 ನಿಮಿಷ ಆಟಕ್ಕೆ ಅಡ್ಡಿ ಉಂಟಾಯಿತು.

ರಫೆಲ್ ನಡಾಲ್



- ವಯಸ್ಸು **36**
- ವಿಶ್ವ ರ‍್ಯಾಂಕಿಂಗ್ **5**
- ಫ್ರೆಂಚ್ ಓಪನ್‌ನಲ್ಲಿ 14ನೇ ಫೈನಲ್
- ಒಟ್ಟಾರೆ 30ನೇ ಗ್ರ್ಯಾನ್ ಸ್ಲಾಂ ಫೈನಲ್
- ದಾಖಲೆಯ 22ನೇ ಗ್ರ್ಯಾನ್ ಸ್ಲಾಂ ಪ್ರಶಸ್ತಿ ನಿರೀಕ್ಷೆ

ಕಾಸ್ಪರ್ ರೂಡ್



- ವಯಸ್ಸು **23**
- ವಿಶ್ವ ರ‍್ಯಾಂಕಿಂಗ್ **8**
- ಚೊಚ್ಚಲ ಬಾರಿ ಗ್ರ್ಯಾನ್ ಸ್ಲಾಂ ಫೈನಲ್ ಪ್ರವೇಶ
- ಈ ಸಾಧನೆ ಮಾಡಿದ ನಾರ್ವೆಯ ಮೊದಲ ಆಟಗಾರ
- ಸೆಮಿಫೈನಲ್‌ನಲ್ಲಿ ಮರಿನ್ ಸಿಲಿಚ್ ವಿರುದ್ಧ ಗೆಲುವು

ಪಂದ್ಯ ಆರಂಭ: ಸಂಜೆ 6.30 (ಭಾರತೀಯ ಕಾಲಮಾನ) ಲೈವ್: ಸೋನಿ ನೆಟ್‌ವರ್ಕ್

ನೇಪಾಳ ಎಂಟು ರನ್‌ಗಳಿಗೆ ಆಲೌಟ್!

ಬಾಂಗಿ, ಮಲೇಷ್ಯಾ (ಪಿಟಿಐ): ಕ್ರಿಕೆಟ್ ಲೋಕದಲ್ಲಿ ಅಂಬೆಗಾಲಿಡುತ್ತಿರುವ ನೇಪಾಳ ತಂಡವು 19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್ ಕ್ವಾಲಿಫೈಯರ್‌ನಲ್ಲಿ ಶನಿವಾರ ಯುಎಇ ಎದುರು ಕೇವಲ 8 ರನ್‌ಗಳಿಗೆ ಆಲೌಟ್ ಆಯಿತು.

ಯುನೈಟೆಡ್ ಎಮಿರೇಟ್ ತಂಡದ ಎದುರು ಮೊದಲು ಬ್ಯಾಟಿಂಗ್ ಮಾಡಿದ ನೇಪಾಳ ತಂಡವು 8.1 ಓವರ್‌ಗಳಲ್ಲಿ 8 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಯುಎಇಯ ಆಫ್‌ಸ್ಪಿನ್ನರ್ ಮಹಿಕಾ ಗೌರ್ (4–2–2–5) ಮತ್ತು ಇಂದುಜಾ ನಂದಕುಮಾರ್ (6ಕ್ಕೆ3) ನೇಪಾಳ ತಂಡದ ಬ್ಯಾಟಿಂಗ್ ಬಲ ಮುರಿದರು. ಯುಎಇ ತಂಡವು ಕೇವಲ ಏಳು ಎಸೆತಗಳಲ್ಲಿ ಗೆಲುವಿನ ಗುರಿ ಮುಟ್ಟಿತು. ಅಲ್ಪಮೊತ್ತಕ್ಕೆ ನೇಪಾಳ ಆಲೌಟ್ ಆಗಿದ್ದು ಮತ್ತು ಯುಎಇ ಕಡಿಮೆ ಎಸೆತಗಳಲ್ಲಿ ಜಯದ ಗುರಿ ಮುಟ್ಟಿದ್ದು ವಿನೂತನ ದಾಖಲೆಗಳಾಗಿವೆ.

ಬೆಂಗಳೂರಿನಲ್ಲಿ ಬ್ಯಾಡ್ಮಿಂಟನ್ ತಾರೆಗಳ ತೋಟ; ನೂತನ ಟೂರ್ನಿಗೆ ವೇದಿಕೆ ಸಿದ್ಧ

ಜುಲೈ 1ರಿಂದ ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಬ್ಯಾಡ್ಮಿಂಟನ್ ಕ್ರೀಡೆಯ ಶ್ರೀಮಂತ ಪರಂಪರೆಗೆ ಗ್ರ್ಯಾನ್ ಪ್ರಿ ಬ್ಯಾಡ್ಮಿಂಟನ್ ಲೀಗ್ ಸೇರಲಿದೆ.

ಶನಿವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಪಿಬಿಎಲ್ ನಲ್ಲಿ ಭಾಗವಹಿಸುವ ತಂಡಗಳ ಪೋಷಾಕು ಮತ್ತು ಟೂರ್ನಿಯ ಟ್ರೋಫಿಯನ್ನು ಬಿಡುಗಡೆ ಮಾಡಲಾಯಿತು. ಜುಲೈ 1ರಿಂದ ಹತ್ತು ದಿನಗಳವರೆಗೆ ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯಲ್ಲಿ ಟೂರ್ನಿ ನಡೆಯಲಿದೆ. ಒಟ್ಟು ಎಂಟು ತಂಡಗಳು ಸ್ಪರ್ಧಿಸಲಿವೆ. ಈ ತಂಡಗಳಲ್ಲಿ ಆಡುವ ಆಟಗಾರರ ಆಯ್ಕೆಗಾಗಿ ಮುಂದಿನ ವಾರ ಬಿಡ್ ಪ್ರಕ್ರಿಯೆ ನಡೆಯಲಿದೆ. ಈ ತಂಡಗಳ ಪ್ರಚಾರ ರಾಯಭಾರಿಗಳಾದ ಪಿ.ವಿ. ಸಿಂಧು, ಕಿಡಂಬಿ ಶ್ರೀಕಾಂತ್, ಸಾಯಿ ಪ್ರಣೀತ್, ಜ್ವಾಲಾ ಗುಟ್ಟಾ, ಅಶ್ವಿನಿ ಪೊನ್ನಪ್ಪ, ಚಿರಾಗ್ ಶೆಟ್ಟಿ, ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ, ಎಚ್‌.ಎಸ್. ಪ್ರಣಯ್ ಅವರು ಪೋಷಾಕುಗಳನ್ನು ಬಿಡುಗಡೆ ಮಾಡಿದರು.



ಗ್ರ್ಯಾನ್ ಪ್ರೀ ಬ್ಯಾಡ್ಮಿಂಟನ್ ಲೀಗ್ ಟೂರ್ನಿಯ ಟ್ರೋಫಿ ಮತ್ತು ತಂಡಗಳ ಜೆರ್ಸಿ ಬಿಡುಗಡೆ ಮಾಡಿದ ಪ್ರಚಾರ ರಾಯಭಾರಿಗಳು (ಎಡದಿಂದ ಬಲಕ್ಕೆ); ಅಶ್ವಿನಿ ಪೊನ್ನಪ್ಪ, ಸಾಯಿಪ್ರಣೀತ್, ಜ್ವಾಲಾ ಗುಟ್ಟಾ, ಪಿ.ವಿ. ಸಿಂಧು, ಕಿಡಂಬಿ ಶ್ರೀಕಾಂತ್, ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ, ಎಚ್.ಎಸ್. ಪ್ರಣಯ್, ಚಿರಾಗ್ ಶೆಟ್ಟಿ –ಪ್ರಜಾವಾಣಿ ಚಿತ್ರ

ಟ್ರೋಫಿಯನ್ನು ಅನಾವರಣಗೊಳಿಸಿದ ಬೆಂಗಳೂರು ಲಯನ್ಸ್ ತಂಡದ ಸಹ ಮಾಲೀಕರೂ ಆಗಿರುವ ಒಲಿಂಪಿಯನ್ ಪಿ.ವಿ. ಸಿಂಧು, 'ಈ ತರಹದ ಲೀಗ್ ಟೂರ್ನಿಗಳಿಂದ ಆಯಾ ಕ್ರೀಡೆಗಳ ಮೇಲೆ ಆಗಿರುವ ಪ್ರಭಾವವನ್ನು ನಾವು ನೋಡಿದ್ದೇವೆ. ಇಂತಹ ವೇದಿಕೆಗಳಿಂದಲೇ ನೂತನ ಪ್ರತಿಭೆಗಳನ್ನು ಶೋಧ ಮಾಡಲು ಸಾಧ್ಯ. ಅವರನ್ನು ಪ್ರೋತ್ಸಾಹಿಸಿ ಭವಿಷ್ಯದ ತಾರೆಗಳನ್ನು ಬೆಳೆಸಲು ಸಾಧ್ಯ. ಜಿಪಿಬಿಎಲ್‌ನ ಭಾಗವಾಗಿರುವುದರಿಂದ ಅತ್ಯಂತ ಸಂತಸಗೊಂಡಿದ್ದೇನೆ' ಎಂದರು.

ಲೀಗ್ ನಿರ್ದೇಶಕರೂ ಆಗಿರುವ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ ಅರವಿಂದ್ ಭಟ್ ಮಾತನಾಡಿ, 'ಬ್ಯಾಡ್ಮಿಂಟನ್‌ನಲ್ಲಿ ರಾಷ್ಟ್ರೀಯ ತಂಡದಲ್ಲಿ ಅವಕಾಶ ಸಿಗುವವರೆಗೂ ಹಣ ಗಳಿಕೆ ಸಾಧ್ಯವಿಲ್ಲ. ಆದರೆ ಆ ಮಟ್ಟಕ್ಕೆ ಏರಲು ಬಹಳಷ್ಟು ಹಣ ಖರ್ಚಾಗುತ್ತದೆ. ಇದರಿಂದಾಗಿ ಪಾಲಕರು ತಮ್ಮ ಮಕ್ಕಳನ್ನು ಈ ಕ್ರೀಡೆಯತ್ತ ಕಳಿಸಲು ಯೋಚಿಸುವಂತಾಗಿದೆ. ಜೂನಿಯರ್ ಮತ್ತು ಯೂತ್ ಹಂತದ ಪ್ರತಿಭೆಗಳಿಗೆ ಇಂತಹ ಲೀಗ್‌ಗಳಲ್ಲಿ ಅವಕಾಶ ಸಿಕ್ಕರೆ, ಒಂದಿಷ್ಟು ಹಣವೂ ಲಭಿಸುತ್ತದೆ' ಎಂದರು.

ಟೂರ್ನಿಯ ಮಾದರಿ: ರೌಂಡ್ ರಾಬಿನ್ ಲೀಗ್ ಮಾದರಿಯಲ್ಲಿ ಟೂರ್ನಿಯು ನಡೆಯಲಿದೆ. ಅಗ್ರ ನಾಲ್ಕು ತಂಡಗಳು ಡಬಲ್ ಎಲಿಮಿನೇಷನ್ ಹಂತ (ಸೆಮಿಫೈನಲ್) ಪ್ರವೇಶಿಸುತ್ತವೆ. ಗುಂಪು ವಿಭಾಗದಲ್ಲಿ ಪ್ರತಿ ತಂಡವೂ ಐದು ಪಂದ್ಯಗಳಲ್ಲಿ ಆಡಲಿದೆ. ಪುರುಷರ ಸಿಂಗಲ್ಸ್, ಮಹಿಳೆಯರ ಸಿಂಗಲ್ಸ್, ಮಿಶ್ರ ಡಬಲ್ಸ್, ಪುರುಷರ ಡಬಲ್ಸ್ ಮತ್ತು ಸೂಪರ್ ಮ್ಯಾಚ್ ಇರಲಿದೆ. ಇದರಲ್ಲಿ ಟ್ರಂಪ್ ಮ್ಯಾಚ್ ಕೂಡ ಇರಲಿದೆ. ತಂಡಗಳಿಗೆ ಆಟಗಾರರ ಆಯ್ಕೆಗಾಗಿ ಮುಂದಿನ ವಾರ ಹರಾಜು ಪ್ರಕ್ರಿಯೆ ನಡೆಯಲಿದೆ. ಇದಕ್ಕಾಗಿ ರಾಜ್ಯದ ಬೇರೆ ಬೇರೆ ಕಡೆಗಳಿಂದ 400 ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಪ್ರತಿ ತಂಡದಲ್ಲಿಯೂ 10 ಆಟಗಾರರನ್ನು ಸೇರ್ಪಡೆ ಮಾಡಿಕೊಳ್ಳುವ ಅವಕಾಶ ಫ್ರ್ಯಾಂಚೈಸಿಗಳಿಗೆ ಇದೆ.

ತಂಡ	ರಾಯಭಾರಿ
ಬೆಂಗಳೂರು ಲಯನ್ಸ್	ಪಿ.ವಿ. ಸಿಂಧು
ಮಲ್ನಾಡ್ ಫಾಲ್ಕನ್ಸ್	ಚಿರಾಗ್ ಶೆಟ್ಟಿ
ಬಂಡಿಪುರ ಟಸ್ಕರ್ಸ್	ಜ್ವಾಲಾ ಗುಟ್ಟಾ
ಮೈಸೂರು ಪ್ಯಾಂಥರ್ಸ್	ಸಾತ್ವಿಕ್ ಸಾಯಿರಾಜ್
ಕೊಡವ ಟೈಗರ್ಸ್	ಅಶ್ವಿನಿ ಪೊನ್ನಪ್ಪ
ಮಂಡ್ಯ ಬುಲ್ಸ್	ಸಾಯಿ ಪ್ರಣೀತ್
ಕೆಜಿಎಫ್ ವೂಲ್ಫ್ಸ್	ಎಚ್.ಎಸ್. ಪ್ರಣಯ್
ಮಂಗಳೂರು ಶಾರ್ಕ್ಸ್	ಕೆ. ಶ್ರೀಕಾಂತ್

ಪ್ರಶಸ್ತಿ ಮೊತ್ತ

ಸ್ಥಾನ	ಮೊತ್ತ (₹ ಲಕ್ಷ)
ವಿಜೇತ	24
ರನ್ನರ್ಸ್ ಅಪ್	12
ಸೆಮಿಫೈನಲ್	6
5ನೇ	4
6ನೇ	3
7ನೇ	2
8ನೇ	1



ಸ್ವಪ್ನಿಲ್ ಕುಶಾಲೆ ಮತ್ತು ಆಶಿ ಚೌಕ್ಸಿ– ಟ್ವಿಟರ್ ಚಿತ್ರ

ವಿಶ್ವಕಪ್ ಶೂಟಿಂಗ್ ಟೂರ್ನಿ: ಸ್ವಪ್ನಿಲ್– ಆಶಿ ಕೊರಳಿಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಸ್ವಪ್ನಿಲ್ ಕುಶಾಲೆ ಮತ್ತು ಆಶಿ ಚೌಕ್ಸಿ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನ 50 ಮೀಟರ್ಸ್ ರೈಫಲ್ ತ್ರಿ ಪೊಸಿಷನ್ಸ್ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದ್ದಾರೆ.

ಅಜರ್‌ಬೈಜಾನ್‌ನ ಬಾಕುನಲ್ಲಿ ನಡೆದ ಟೂರ್ನಿಯ ಮಿಶ್ರ ತಂಡದ ಸ್ಪರ್ಧೆಯ ಫೈನಲ್‌ನಲ್ಲಿ ಭಾರತದ ಜೋಡಿ 16–12ರಿಂದ ಉಕ್ರೇನ್‌ನ ಸೆರಿಯ್ ಕುಲಿಶ್ ಮತ್ತು ದರಿಯಾ ಟೈಕೊವಾ ಅವರನ್ನು ಸೋಲಿಸಿದರು.

ಜಿದ್ದಾಜಿದ್ದಿನಿಂದ ಕೂಡಿದ್ದ ಫೈನಲ್ ಹಣಾಹಣಿಯ ಆರಂಭದಲ್ಲಿ ಉಕ್ರೇನ್ ಜೋಡಿ 6–2ರಿಂದ ಮುಂದಿತ್ತು. ಬಳಿಕ ತಿರುಗೇಟು ನೀಡಿದ ಸ್ವಪ್ನಿಲ್–ಆಶಿ 14–10ಕ್ಕೆ ಮುನ್ನಡೆದರು. ನಂತರ ಸೆರಿಯ್– ದರಿಯಾ 12–14ಕ್ಕೆ ಹಿನ್ನಡೆ ತಗ್ಗಿಸಿಕೊಂಡರೂ ಭಾರತದ ಶೂಟರ್‌ಗಳ ಗೆಲುವು ತಡೆಯಲಾಗಲಿಲ್ಲ.

ಇದರೊಂದಿಗೆ ಟೂರ್ನಿಯಲ್ಲಿ ಭಾರತ ತಂಡದ ಮಡಿಲಿಗೆ ಎರಡು ಚಿನ್ನ ಮೂರು ಬೆಳ್ಳಿ ಸೇರಿ ಐದು ಪದಕಗಳು ಸೇರಿದವು. ಪದಕಪಟ್ಟಿಯಲ್ಲಿ ಎರಡನೇ ಸ್ಥಾನ ಗಳಿಸಿತು. ಕೊರಿಯಾ ಮೊದಲ ಸ್ಥಾನ ತನ್ನದಾಗಿಸಿಕೊಂಡಿತು.

ಸ್ವಪ್ನಿಲ್ ಅವರಿಗೆ ಟೂರ್ನಿಯಲ್ಲಿ ಇದು ಮೊದಲ ಚಿನ್ನ; ಒಟ್ಟಾರೆ ಮೂರನೇ ಪದಕ. ಈ ಮೊದಲು ಪುರುಷರ 3ಪಿ ವೈಯಕ್ತಿಕ ಮತ್ತು ಪುರುಷರ ತಂಡ ವಿಭಾಗದಲ್ಲಿ ಅವರು ಬೆಳ್ಳಿ ಪದಕ ಜಯಿಸಿದ್ದರು.

ಕುಸ್ತಿ: ಸರಿತಾ, ಮನೀಷಾಗೆ ಚಿನ್ನ

ಆಲ್ಮೇಟಿ (ಪಿಟಿಐ): ಭಾರತದ ಸರಿತಾ ಮೋರ್ ಮತ್ತು ಮನೀಷಾ ಅವರು ಕಜಕಸ್ತಾನದ ಅಲ್ಮೇಟಿಯಲ್ಲಿ ನಡೆಯುತ್ತಿರುವ ಯುಡಬ್ಲ್ಯುಡಬ್ಲ್ಯು ರ‍್ಯಾಂಕಿಂಗ್ ಸರಣಿಯ ಕುಸ್ತಿಯಲ್ಲಿ ಚಿನ್ನದ ಪದಕ ಜಯಿಸಿದರು.

ಶನಿವಾರ ನಡೆದ 59 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಸರಿತಾ, ಅಜರ್‌ಬೈಜಾನ್‌ನ ಝುಲಾ ಅಲಿಯೇವಾ ವಿರುದ್ಧ ಗೆಲುವು ಸಾಧಿಸಿದರು. ವಿಶ್ವ ಮತ್ತು ಏಷ್ಯನ್ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತೆಗೆ 2022ರ ಋತುವಿನಲ್ಲಿ ಲಭಿಸಿದ ಮೊದಲ ಚಿನ್ನ ಇದಾಗಿದೆ.

ಮನೀಷಾ ಅವರು 65 ಕೆ.ಜಿ. ವಿಭಾಗದ ಫೈನಲ್‌ನಲ್ಲಿ 8–0 ಅಂತರದಲ್ಲಿ ಅಜರ್‌ಬೈಜಾನ್‌ನ ಎಲೈಸ್ ಮನೊಲೋವಾ ಅವರನ್ನು ಮಣಿಸಿದರು. ಭಾರತದ ಕುಸ್ತಿಪಟು



ಸರಿತಾ ಮೋರ್

ಸೀನಿಯರ್ ವಿಭಾಗದಲ್ಲಿ ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಚಿನ್ನದ ಪದಕ ಜಯಿಸಿದ್ದು ಇದೇ ಮೊದಲು.

ಏಪ್ರಿಲ್‌ನಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಅವರ ಕಂಚು ಗೆದ್ದಿದ್ದರು. ಕಣದಲ್ಲಿದ್ದ ಭಾರತದ ಇನ್ನೊಬ್ಬ ಸ್ಪರ್ಧಿ ಬಿಪಾಶಾ 72 ಕೆ.ಜಿ. ವಿಭಾಗದಲ್ಲಿ ಬೆಳ್ಳಿ ಗೆದ್ದರು. ಅವರು ಫೈನಲ್‌ನಲ್ಲಿ 5–7ರಲ್ಲಿ ಜಮೀಲಾ ಎದುರು ಸೋತರು. ಸುಷ್ಮಾ ಶೋಕೀನ್ 55 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕ ಪಡೆದರು. ಪುರುಷರ ಫ್ರೀಸ್ಟೈಲ್ 125 ಕೆ.ಜಿ. ವಿಭಾಗದಲ್ಲಿ ಮೋಹಿತ್ ಕಂಚು ಗೆದ್ದರು

ಬೆಂಗಳೂರಿನಲ್ಲಿ ಟಿ20 ಕ್ರಿಕೆಟ್: 12ರಂದು ಟಿಕೆಟ್ ಮಾರಾಟ

ಬೆಂಗಳೂರು: ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವಣ ಇದೇ 19ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಟಿ20 ಕ್ರಿಕೆಟ್ ಪಂದ್ಯದ ಟಿಕೆಟ್ ಮಾರಾಟವು ಇದೇ 12ರಂದು ನಡೆಯಲಿದೆ. ಆನ್‌ಲೈನ್ ಮತ್ತು ಬಾಕ್ಸ್ ಆಫೀಸ್‌ನಲ್ಲಿ ಮಾರಾಟ ನಡೆಯಲಿದೆ ಎಂದು ಕೆಎಸ್‌ಸಿಎ ಖಜಾಂಚಿ ವಿನಯ್ ಮೃತ್ಯುಂಜಯ ತಿಳಿಸಿದ್ದಾರೆ.

ಕೆಎಸ್‌ಸಿಎಗೆ ಪೇಟಿಎಂ ಆನ್‌ಲೈನ್ ಟಿಕೆಟ್ ಮಾರಾಟದ ಪಾಲುದಾರನಾಗಿದೆ. ಬಾಕ್ಸ್ ಆಫೀಸ್‌ನಲ್ಲಿ ಮಾರಾಟವಾಗದೆ ಉಳಿಯುವ ಟಿಕೆಟ್‌ಗಳನ್ನು ಆನ್‌ಲೈನ್‌ನಲ್ಲಿ ಬಿಕರಿ ಮಾಡಲಾಗುವುದು. ಜೂನ್ 13ಕ್ಕೆ ಬಾಕ್ಸ್ ಆಫೀಸ್‌ನಲ್ಲಿ ಮಾರಾಟವಿರುವುದಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆನ್‌ಲೈನ್ ಮಾರಾಟ

ಗ್ರ್ಯಾಂಡ್ ಟೆರೆಸ್	6,000
ಪಿ ಕಾರ್ಪೋರೇಟ್	10,000
ಪೆವಿಲಿಯನ್ ಟೆರೆಸ್	15,000
ಪಿ2 ಸ್ಟ್ಯಾಂಡ್	20,000

ಟಿಕೆಟ್ ಮಾರಾಟ ವಿವರ

ಸ್ಟ್ಯಾಂಡ್	ಮೊತ್ತ (₹)	ಗೇಟ್ ಸಂಖ್ಯೆ
ಬಾಕ್ಸ್ ಆಫೀಸ್‌ನಲ್ಲಿ ಮಾರಾಟ		
ಜಿ ಅಪ್ಪರ್, ಲೋವರ್1, ಲೋವರ್2	750	5 –ಕಬ್ಬನ್ ರಸ್ತೆ
ಎ ಅಪ್ಪರ್, ಬಿ ಅಪ್ಪರ್ ಹಾಗೂ ಲೋವರ್	2,000	2 –ಕಬ್ಬನ್ ರಸ್ತೆ
ಡಿ ಕಾರ್ಪೋರೇಟ್	4,000	19–ಕ್ವೀನ್ಸ್ ರಸ್ತೆ
ಎನ್ ಸ್ಟ್ಯಾಂಡ್	5,000	18–ಕ್ವೀನ್ಸ್ ರಸ್ತೆ
ಇ ಎಕ್ಸಿಕ್ಯುಟಿವ್	6,000	18– ಕ್ವೀನ್ಸ್ ರಸ್ತೆ

ರೋಚಕ ಘಟ್ಟದಲ್ಲಿ ಲಾರ್ಡ್ಸ್ ಟೆಸ್ಟ್

ಲಂಡನ್ (ಎಎಫ್‌ಪಿ): ಕೈಲ್ ಜೆಮಿಸನ್ (59ಕ್ಕೆ4) ಅಮೋಘ ಬೌಲಿಂಗ್‌ನಿಂದಾಗಿ ಲಾರ್ಡ್ಸ್‌ನಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದ ಮೂರನೇ ದಿನದಂದು ಪ್ರವಾಸಿ ನ್ಯೂಜಿಲೆಂಡ್ ತಂಡವು ಆತಿಥೇಯ ಇಂಗ್ಲೆಂಡ್‌ಗೆ ಸೋಲಿನ ಭೀತಿ ಮೂಡಿಸಿತು.

ಶನಿವಾರ ಇಂಗ್ಲೆಂಡ್ ತಂಡಕ್ಕೆ 278 ರನ್‌ಗಳ ಗುರಿಯೊಡ್ಡಿದ ನ್ಯೂಜಿಲೆಂಡ್ ತಂಡದ ಬೌಲಿಂಗ್ ಪಡೆಯು ಬಲವಾದ ಪೆಟ್ಟುಕೊಟ್ಟಿತು. ಕೇವಲ 69 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡ ಇಂಗ್ಲೆಂಡ್ ತಂಡವು ಸಂಕಷ್ಟಕ್ಕೀಡಾಯಿತು. ನಾಯಕ ಬೆನ್ ಸ್ಟೋಕ್ಸ್ ಮತ್ತು ನಿಕಟಪೂರ್ವ ನಾಯಕ ಜೋ ರೂಟ್ ಕುಸಿತ ತಡೆದು ಇನಿಂಗ್ಸ್‌ಗೆ ಜೀವ ತುಂಬಿದರು. ಇದರಿಂದಾಗಿ ಪಂದ್ಯವು ರೋಚಕ ಹಾದಿಯಲ್ಲಿ ಸಾಗಿದೆ.

ಮೊದಲ ಇನಿಂಗ್ಸ್‌ನಲ್ಲಿ ಕೇವಲ 132 ರನ್‌ಗಳಿಗೆ ಕುಸಿದಿದ್ದ ಕಿವೀಸ್ ಬಳಗವು ನಂತರ ತಿರುಗೇಟು ನೀಡಿತ್ತು. ಇಂಗ್ಲೆಂಡ್ ತಂಡವನ್ನು 141 ರನ್‌ಗಳಿಗೆ ಆಲೌಟ್ ಮಾಡಿತ್ತು. ಡೆರಿಲ್ ಮಿಚೆಲ್ (108) ಮತ್ತು ಟಾಮ್ ಬ್ಲಂಡೆಲ್ (96 ರನ್) ಅವರ ಅಮೋಘ ಆಟದಿಂದಾಗಿ ಎರಡನೇ ಇನಿಂಗ್ಸ್‌ನಲ್ಲಿ 285 ರನ್‌ಗಳನ್ನು ಕಲೆಹಾಕಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್ : 40 ಓವರ್‌ಗಳಲ್ಲಿ 132, ಇಂಗ್ಲೆಂಡ್:42.5 ಓವರ್‌ಗಳಲ್ಲಿ 141, ಎರಡನೇ ಇನಿಂಗ್ಸ್: ನ್ಯೂಜಿಲೆಂಡ್: 91.3 ಓವರ್‌ಗಳಲ್ಲಿ 285 (ಡೆರಿಲ್ ಮಿಚೆಲ್ 108, ಟಾಮ್ ಬ್ಲಂಡೆಲ್ 96, ಟಿಮ್ ಸೌಥಿ 21, ಜೇಮ್ಸ್ ಆ್ಯಂಡರ್ಸನ್ 57ಕ್ಕೆ2, ಸ್ಟುವರ್ಟ್ ಬ್ರಾಡ್ 76ಕ್ಕೆ3, ಮ್ಯಾಟಿ ಪಾಟ್ಸ್ 55ಕ್ಕೆ3). ಇಂಗ್ಲೆಂಡ್: 65 ಓವರ್‌ಗಳಲ್ಲಿ 5ಕ್ಕೆ216 (ಅಲೆಕ್ಸ್ ಲೀಸ್ 20, ಜೋ ರೂಟ್ 77, ಬೆನ್ ಸ್ಟೋಕ್ಸ್ ಬ್ಯಾಟಿಂಗ್ 54, ಕೈಲ್ ಜೆಮಿಸನ್ 59ಕ್ಕೆ 4, ಟ್ರೆಂಟ್ ಬೌಲ್ಟ್ 61ಕ್ಕೆ 1)

ಟೆನಿಸ್: ಮೋಹಿತ್, ಗಾಯತ್ರಿಗೆ ಪ್ರಶಸ್ತಿ

ಬೆಂಗಳೂರು: ತಮಿಳುನಾಡಿನ ಮೋಹಿತ್ ಮಯೂರ್ ಜಯಪ್ರಕಾಶ್ ಮತ್ತು ಕೇರಳದ ಗಾಯತ್ರಿ ರಾಜೇಶ್ ಮೆನನ್ ಅವರು ಟಾಪ್‌ಸ್ಪಿನ್ ಎಐಟಿಎ ಪ್ರೊ ಸರ್ಕ್ಯೂಟ್ ಟೆನಿಸ್ ಟೂರ್ನಿಯ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ಸಿಂಗಲ್ಸ್ ವಿಭಾಗಗಳಲ್ಲಿ ಪ್ರಶಸ್ತಿ ಜಯಿಸಿದರು.



ಪ್ರಶಸ್ತಿಯೊಂದಿಗೆ ಗಾಯತ್ರಿ ಮೆನನ್ ಮತ್ತು ಮೋಹಿತ್ ಜಯಪ್ರಕಾಶ್

ಶನಿವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಮೋಹಿತ್ 6-3, 6-4ರಿಂದ ಕರ್ನಾಟಕದ ಜಿ.ಮನೀಷ್ ಅವರನ್ನು ಸೋಲಿಸಿದರು.ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಗಾಯತ್ರಿ 6–1, 7–5ರಿಂದ ಪ್ರತಿಭಾ ಪ್ರಸಾದ್ ನಾರಾಯಣ್ ಅವರನ್ನು ಸೋಲಿಸಿದರು.

ಕೊಕ್ಕೊ: ನಾಲ್ಕರ ಘಟ್ಟಕ್ಕೆ ಕೇಂದ್ರ ರೈಲ್ವೆ, ಪಶ್ಚಿಮ ರೈಲ್ವೆ

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ ಜಿಲ್ಲೆ): ನವಿ ಮುಂಬೈ ಮಹಾನಗರ ಪಾಲಿಕೆ ಮತ್ತು ಕೇಂದ್ರ ರೈಲ್ವೆ ತಂಡಗಳು ಕ್ಯಾತನಹಳ್ಳಿಯಲ್ಲಿ ನಡೆಯುತ್ತಿರುವ ದಿವಂಗತ ಕೆ.ಎಸ್.ಪುಟ್ಟಣ್ಣಯ್ಯ ಸ್ಮರಣಾರ್ಥ ಅಖಿಲ ಭಾರತ ಪುರುಷರ ಹೊನಲು ಬೆಳಕಿನ ಕೊಕ್ಕೊ ಟೂರ್ನಿಯ ನಾಲ್ಕರ ಘಟ್ಟ ಪ್ರವೇಶಿಸಿದವು.

ಒಟ್ಟು ಹನ್ನೊಂದು ತಂಡಗಳು ಟೂರ್ನಿಯಲ್ಲಿ ಭಾಗವಹಿಸಿವೆ. ಎರಡು ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಒಂದು ಗುಂಪಿನಲ್ಲಿ ಐದು ಮತ್ತೊಂದರಲ್ಲಿ ಆರು ತಂಡಗಳಿವೆ. ಉಭಯ ಗುಂಪುಗಳಲ್ಲಿ ಅಗ್ರ ಎರಡು ಸ್ಥಾನ ಪಡೆದ ತಂಡಗಳು ನಾಲ್ಕರ ಘಟ್ಟಕ್ಕೆ ಪ್ರವೇಶಿಸಿವೆ.

ನವಿ ಮುಂಬೈ ಮಹಾನಗರಪಾಲಿಕೆ ತಂಡವು 15, ಮುಂಬೈ ಕೇಂದ್ರ ರೈಲ್ವೆ ತಂಡವು 9, ಮಹಾರಾಷ್ಟ್ರ ರಾಜ್ಯ ವಿದ್ಯುಚ್ಛಕ್ತಿ ಮಂಡಳಿ ತಂಡ 12 ಹಾಗೂ ಮುಂಬೈ ಪಶ್ಚಿಮ ರೈಲ್ವೆ ತಂಡವು 12 ಅಂಕ ಗಳಿಸಿ ಸೆಮಿಫೈನಲ್‌ಗೆ ಅರ್ಹತೆ ಪಡೆದವು.

ಹಾಕಿ: ಭಾರತ ಪುರುಷರ ತಂಡಕ್ಕೆ ಜಯ

ಲಾಸನ್ (ಪಿಟಿಐ): ಭಾರತ ಪುರುಷರ ಹಾಕಿ ತಂಡಕ್ಕೆ ಮೊದಲ ಬಾರಿ ಇಲ್ಲಿ ನಡೆಯುತ್ತಿರುವ ಎಫ್‌ಐಎಚ್ ಫೈವ್ ಎ ಸೈಡ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಶನಿವಾರ ನಡೆದ ಮೊದಲ ಪಂದ್ಯದಲ್ಲಿ ಗುರಿಂದರ್ ಸಿಂಗ್ ನಾಯಕತ್ವದ ತಂಡವು 4–3ರಿಂದ ಸ್ವಿಟ್ಜರ್ಲೆಂಡ್ ತಂಡಕ್ಕೆ ಸೋಲುಣಿಸಿತು. ಎರಡನೇ ಪಂದ್ಯದಲ್ಲಿ ಭಾರತ ಪಾಕಿಸ್ತಾನ ವಿರುದ್ಧ 2–2ರಿಂದ ಡ್ರಾ ಸಾಧಿಸಿತು.ಭಾರತ ಮಹಿಳಾ ತಂಡವು ಎರಡು ಪಂದ್ಯಗಳಲ್ಲಿ ಕ್ರಮವಾಗಿ ಉರುಗ್ವೆ ಎದುರು 3–4ರಿಂದ ಮತ್ತು ಪೋಲೆಂಡ್ ಎದುರು 1–3ರಿಂದ ಸೋತಿತು.